ಸಂಪುಟ 1 , ಸಂಚಿಕೆ 3 .



ಖಾಸಗೀ ಪ್ರಚಾರಕ್ಕಾಗಿ


# ಮಾನವಿ

ಸಂಪುಟ : 1 ಸಂಚಿಕೆ : 3

ಜುಲೈ—ಆಗಸ್ಟ್ 1986





**ವಿಳಾಸ : "ಮಾನವಿ"**

ನಂ. 655/2- ಎಲ್, ಮಹಡಿ
ಮಾರುತಿ ಕಲ್ಯಾಣ ಮಂಟಪ
ಬಾಣಸವಾಡಿ ಮುಖ್ಯ ರಸ್ತೆ,
ಮಾರುತಿ ಸೇವಾನಗರ ಅಂಚೆ
ಬೆಂಗಳೂರು-560 033.



**ಸೂಚನೆ : ವಾರ್ಷಿಕ ಚಂದಾ : 15 ರೂ.**


ಆಜೀವ ಚಂದಾ : 250 ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಏಳು ಸಂಚಿಕೆಗಳು
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ.ಓ.
ಮೂಲಕ ಸ್ವೀಕರಿಸಲಾಗುವುದು.


## ಈ ಸಂಚಿಕೆಯಲ್ಲಿ...............



ಮುಖ ಪುಟ : **ವಿ. ನಾಗರಾಜ್**

# ಸಂಪಾದಕೀಯ



ಹಲ್ಲುಪುಡಿ, ಸೋಪು, ಬಟ್ಟೆ, ಫ್ರಿಜ್, ಗಾಡ್ರೆಜ್, ಸಿಗರೇಟ್. ಬೆಲ್ಟ್ ಇತ್ಯಾದಿ ಯಾವುದೇ ವಸ್ತುಗಳು ವಾಣಿಜ್ಯ ಲೋಕದಲ್ಲಿ ಪ್ರಚಾರ ಪಡೆಯಲು, ಮಾರುಕಟ್ಟೆಯಲ್ಲಿ ಪ್ರಚಲಿತಗೊಳ್ಳಲು ಹೆಣ್ಣಿನ ವಿವಿಧ ಭಂಗಿಗಳ ಚಿತ್ರಗಳು ಜಾಹಿರಾತಿನಲ್ಲಿ ಕಂಗೊಳಿಸುವುದು ಅನಿವಾರ್ಯವೆನಿಸುವ ಸ್ಥಿತಿ ಸೃಷ್ಟಿಸಲಾಗಿದೆ. ಉದ್ಯಮಪತಿಗಳು ಉತ್ಪಾದಿಸಿದ ಸರಕಿನ ಮಾರಾಟಕ್ಕೆ ಹೆಣ್ಣು ಸಾಧನವಾಗುತ್ತಿದ್ದಾಳೆ. ಮೋಹಕತೆಯ ಮಾಯಾಜಾಲದಲ್ಲಿ ಹೆಣ್ಣನ್ನು ಬೆಡಗಿನ ಬೊಂಬೆಯಾಗಿಸುವ ಈ ಜಾಹಿರಾತುಗಳು ಸುಳ್ಳುಗಳ ಬಲೆಯಲ್ಲಿ ಪೊಳ್ಳು ಮೌಲ್ಯಗಳಲ್ಲಿ ಹೆಣ್ಣಿನ ಬದುಕನ್ನು ತೆಳುವಾಗಿಸುತ್ತಿದೆ.

ಸುಳ್ಳು ಭ್ರಮೆಗಳ ರಂಗುರಂಗಿನ ಕನಸುಗಳ ಜಾಹಿರಾತು ಪ್ರಪಂಚದಲ್ಲಿ ಇತ್ತೀಚೆಗೆ ಅಸಭ್ಯ, ಅಶ್ಲೀಲ ಚಿತ್ರಣಗಳು ಆಕ್ರಮಿಸುತ್ತಿವೆ. ಹೆಣ್ಣನ್ನು ಢಾಳಾಗಿ, ವ್ಯಕ್ತಿತ್ವವಿಹೀನ ಲೈಂಗಿಕ ಸಾಧನವನ್ನಾಗಿ ಚಿತ್ರಿಸಲಾಗುತ್ತಿದೆ. ರಸ್ತೆ ಬದಿಗಳಲ್ಲಿ ಗೋಚರವಾಗುವ ಸಿನಿಮಾ ಪೋಸ್ಟರುಗಳು, ಲೈಂಗಿಕತೆ ಪ್ರಚೋದಿಸುವ ಜಾಹಿರಾತುಗಳ ಭಾಷೆ ಹೆಣ್ಣಿನ 'ದೇಹ'ವನ್ನು ಶೋಷಿಸುವ ನಿರಂತರ ಕ್ರಿಯೆಯಾಗಿದೆ.

ಹೆಣ್ಣನ್ನು ಅಶ್ಲೀಲವಾಗಿ ಚಿತ್ರಿಸುವ ಅಸಭ್ಯ ಜಾಹಿರಾತುಗಳು ನಾಡಿನ ಉದ್ದಗಲಕ್ಕೂ ಪ್ರಮುಖ ಪತ್ರಿಕೆಗಳಲ್ಲಿ ರಾರಾಜಿಸುತ್ತಿರುವುದು ಆತಂಕಕಾರಿ ಬೆಳವಣಿಗೆ. ಈ ಬಗ್ಗೆ ಇತ್ತೀಚೆಗೆ ನಡೆದ ಸಂಸತ್ತಿನ ಅಧಿವೇಶನದಲ್ಲಿ ಚರ್ಚೆಯಾಯಿತು. ಮಹಿಳೆ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವೆ ಮಾರ್ಗರೆಟ್ ಆಳ್ವ ಸೇರಿದಂತೆ ಅನೇಕ ಸಂಸತ್ ಸದಸ್ಯರು ಹೆಣ್ಣನ್ನು ಕೀಳಾಗಿ ಚಿತ್ರಿಸುವ ಅಶ್ಲೀಲ ಚಿತ್ರಗಳ ಪ್ರವಾಹ ನಿಯಂತ್ರಣಕ್ಕೆ ಮಸೂದೆ ಮಂಡನೆಯಾಗಬೇಕೆಂದು ಸರಕಾರಕ್ಕೆ ಆಗ್ರಹ ಪಡಿಸಿದರು.

ನಂತರ, ಜಾಹಿರಾತು, ಪುಸ್ತಕ, ಕರಪತ್ರಗಳಲ್ಲಿ ಹೆಣ್ಣನ್ನು ಕೀಳಾಗಿ ಚಿತ್ರಿಸುವುದನ್ನು ನಿಷೇಧಿಸಿ, ಮಹಿಳೆಯರ ಅಸಭ್ಯ ಚಿತ್ರಣ ನಿಷೇಧ ಮಸೂದೆ 1986ನ್ನು ರಾಜ್ಯ ಸಭೆಯಲ್ಲಿ ಮಂಡಿಸಲಾಯಿತು. ತಪ್ಪಿತಸ್ಥರಿಗೆ ಎರಡು ವರ್ಷಗಳವರೆಗಿನ ಶಿಕ್ಷೆ ಹಾಗೂ 2 ಸಾವಿರ ರೂ.ಗಳ ದಂಡ ವಿಧಿಸಲು ಈ ಮಸೂದೆ ಅವಕಾಶ ನೀಡುತ್ತದೆ. ಒಮ್ಮೆ ಶಿಕ್ಷೆಯಾಗಿ ಪುನಃ ಆರೋಪಕ್ಕೊಳಗಾದರೆ ಶಿಕ್ಷೆಯ ಪ್ರಮಾಣ ಹೆಚ್ಚುತ್ತದೆ.

"ಅಶ್ಲೀಲ ಚಿತ್ರಗಳು, ಪೋಸ್ಟರ್‌ಗಳ ಬಗ್ಗೆ ಟೀಕಿಸಿ ಪತ್ರಿಕೆಗಳು ಸಂಪಾದಕೀಯ ಬರೆಯುತ್ತವೆ. ವಿಪರ್ಯಾಸವೆಂದರೆ ಇದೇ ಪತ್ರಿಕೆಗಳಲ್ಲೇ, ಸಂಪಾದಕೀಯ ನೀತಿಗೆ ಪೂರ್ಣ ವಿರೋಧವಾಗುವಂತಹ ಅಶ್ಲೀಲ ಜಾಹಿರಾತುಗಳನ್ನು ಪ್ರಕಟಿಸುವುದು ಆಚ್ಚರಿದಾಯಕ" ಎನ್ನುತ್ತಾರೆ. ಪತ್ರಕರ್ತೆ ಹಾಗೂ "ಮಹಿಳೆ ಮತ್ತು ಮಾಧ್ಯಮ" ಎಂಬ ಮಹಿಳಾ ಪತ್ರಕರ್ತೆಯರ ಸಂಘಟನೆಯ ಸದಸ್ಯೆ ಕಲ್ಪನಾಶರ್ಮ. "ಈ ಬಗ್ಗೆ ತಮ್ಮ ಸಂಘಟನೆ ಸದ್ಯದಲ್ಲೇ ಕಾರ್ಯಕ್ರಮ ರೂಪಿಸಲಿದೆ" ಎಂದೂ ಅವರು ಹೇಳಿದ್ದಾರೆ.

ಪತ್ರಿಕಾ ಮಾಲೀಕರಿಗೆ ಜಾಹಿರಾತುಗಳು ಸುಲಭ ಹಣ ಸಂಪಾದನೆಯ ಮಾರ್ಗ. ಹೀಗಾಗಿ ಹಲವಾರು ಜಾಹಿರಾತುಗಳು ಅಗ್ಗದ ಅಭಿರುಚಿಯನ್ನು ಬಿಂಬಿಸುತ್ತಿದ್ದರೂ ಆಡಳಿತವರ್ಗ ಕಾಣದಂತೆ ನಟಿಸುತ್ತದೆ. ಹಲವಾರು ಗಂಭೀರ ಚಿತ್ರಗಳ ಜಾಹಿರಾತು ನೀಡುವಾಗ, ಕೆಟ್ಟ ಪೋಸ್ಟರುಗಳನ್ನು ಪ್ರದರ್ಶಿಸಿ, ಜಾಹಿರಾತಿನ ಭಾಷೆಗೆ ಲೈಂಗಿಕತೆಯ ಲೇಪನ ಹಚ್ಚಿ ಜನರನ್ನು ತಪ್ಪು ದಾರಿಗೆಳೆಯುವುದೂ ಉಂಟು.

ಪತ್ರಿಕಾ ಮಾಧ್ಯಮದಲ್ಲಿ ಪಸರಿಸಿಕೊಳ್ಳುತ್ತಿರುವ ಈ ಅಶ್ಲೀಲ ಜಾಹಿರಾತುಗಳ ಪ್ರವಾಹಕ್ಕೆ ಅಣೆಕಟ್ಟು ಒಡ್ಡುವವರಾರು ? ಪತ್ರಿಕಾ ಆಡಳಿತ ವರ್ಗ ಹಾಗೂ ಸಂಪಾದಕೀಯ ವರ್ಗ ಅಶ್ಲೀಲ ಜಾಹಿರಾತುಗಳ ನಿಷೇಧಕ್ಕೆ ಒಮ್ಮತದಿಂದ ಶ್ರಮಿಸಬೇಕಿದೆ. ಅಶ್ಲೀಲ ಜಾಹಿರಾತುಗಳನ್ನು ಅಂಗೀಕರಿಸದೆ ಪೂರ್ಣವಾಗಿ ಬಹಿಷ್ಕರಿಸಿದರೆ ಮಾತ್ರವೇ ಜಾಹಿರಾತಿನ ಧಾಟಿ ಬದಲಾಗಲು ಸಾಧ್ಯ. ಕೇವಲ ಕಾನೂನಿನಿಂದ ಬದಲಾವಣೆ ಸಾಧ್ಯವಿಲ್ಲದಿರುವುದರಿಂದ ಈ ದಿಸೆಯಲ್ಲಿ ಸಂಪಾದಕರು ಸ್ಪಷ್ಟ ನಿಲುವು ತಾಳುವುದು ಅಗತ್ಯ. ಜತೆಜತೆಯಲ್ಲೇ ಹೆಣ್ಣನ್ನು ಅಲಂಕಾರ ಸಾಧನವಾಗಿ ಪರಿಗಣಿಸುವ ಸಂಸ್ಕೃತಿಯಲ್ಲೇ ಮೂಲಭೂತ ಬದಲಾವಣೆಗೆ ಮಹಿಳಾ ಸಂಘಟನೆಗಳು ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ.

—ಸಂಪಾದಕೀಯ ಮಂಡಳಿ


# ಸ್ತ್ರೀ ಸಂವೇದನಾಶೀಲತೆಗೆ ಧ್ವನಿಯಾದ ಸಿಮನ್ ಡಿ ಬುವಾ

— ಎಚ್. ಎಸ್. ರಾಜೇಶ್ವರಿ

ಸೂಕ್ಷ್ಮ ಮನಸ್ಸಿನ, ಶೋಧನಾ ಪ್ರವೃತ್ತಿಯ ಅವಳ ಮನಸ್ಸು ಏನನ್ನೋ ಅಭಿವ್ಯಕ್ತಿಸಲು ತವಕಿಸುತ್ತಿತ್ತು. ತನ್ನ ಬಗ್ಗೆಯೇ ನಿಷ್ಠುರವಾಗಿ, ಯಾವುದೇ ಮುಚ್ಚು ಮರೆಯಿಲ್ಲದೆ, ಸೃಜನಾತ್ಮಕವಾಗಿ ಬಿಚ್ಚಿಕೊಳ್ಳಬೇಕೆಂಬ ಹಂಬಲವನ್ನು ಹತ್ತಿಕ್ಕಲಾರದಾದಳು. ಈ ತೀವ್ರವಾದ ಹಂಬಲ ಅವಳ ಮನಸ್ಸಿನಲ್ಲಿ ಕುಡಿಯೊಡೆಯತೊಡಗಿತು. ದುತ್ತನೆ ಅವಳಿಗೆದುರಾದ ಪ್ರಶ್ನೆ "ನಾನು ಸ್ತ್ರೀಯಾಗಿರುವುದರ ಅನುಭವದ ಅರ್ಥವೇನು ? ಬೃಹದಾಕಾರವಾಗಿ ಅವಳೆದುರು ನಿಂತ ಈ ಯಕ್ಷಪ್ರಶ್ನೆಗೆ ಅವಳು ಕ್ಲಿಷ್ಟತೆಯಿಲ್ಲದೆ, ಸರಳವಾಗಿ ಉತ್ತರಿಸಬಹುದೆಂದು ಭಾವಿಸಿದ್ದಳು.

ಕೀಳರಿಮೆಯ ಸಂಕೋಲೆಯಿಂದ ಅವಳೆಂದೂ ನರಳಿರಲಿಲ್ಲ. ನೀನು ಹೆಂಗಸಾಗಿರುವುದರಿಂದ ಹೀಗೆ ಯೋಚಿಸುತ್ತಿದ್ದೀಯಾ ಎಂದು ಯಾರು ಬೊಟ್ಟುಮಾಡಿ ತೋರಿಸಿರಲಿಲ್ಲ. ಅವಳ ಸ್ತ್ರೀತ್ವ ಎಂದೂ ತೊಡಕಾಗಿರಲಿಲ್ಲ. ಆದರೆ ಅವಳು ತನ್ನ ಅನುಭವದ ಸ್ತರದ ಆಳವನ್ನು ತಟ್ಟಿ ಬಾಗಿಲುಗಳನ್ನು ತೆರೆದಳು. ಸುಂದರ ಭ್ರಮೆಯ ಪ್ರಪಂಚದ ಗೋಡೆಗಳು ಬೀಳಲಾರಂಭಿಸಿದವು. ವಾಸ್ತವಿಕತೆಯ ಅರಿವು, ಕಟುಸತ್ಯವಾದ ಸಂಗಗಳು, ಪರಿಚಯವಾಗ ತೊಡಗಿದವು. ಪುರುಷರೇ ಸೃಷ್ಟಿಸಿದ ಜಗತ್ತು ಆವಳೆದುರಿಗಿತ್ತು. ಅವಳ ಬಾಲ್ಯದ ಎಳೆಯ ಮನಸ್ಸು, ಅನುಭವಗಳು ಪಕ್ವಾದದ್ದು ಈ ಜಗತ್ತಿನ ಮಿಥ್‌ಗಳಿಂದ ಎಂಬುದರ ಅರಿವು ಅವಳಿಗಾಯಿತು.

ಈ ಜ್ಞಾನೋದಯ ಅವಳನ್ನು ಹುಚ್ಚು ಹಿಡಿಸಿದ ಹಾಗೆ ಬರೆಯಲು ತೊಡಗಿಸಿತು. ತನ್ನನ್ನು ತಾನು ಪದರು ಪದರಾಗಿ ತಿಳಿದು ಕೊಳ್ಳಬೇಕೆಂಬ ವೈಯಕ್ತಿಕ ಹುಡುಕಾಟ "ಕೇವಲ ಮೌನ ನಿಟ್ಟುಸಿರುಗಳಾದ ಇಡೀ ಸ್ತ್ರೀ ಸಮುದಾಯದ ಸ್ಥಿತಿಗತಿಯ ಹೊಸದಿಕ್ಕಿನ ಹುಡುಕಾಟವಾಗಿ ರೂಪಾಂತರಗೊಂಡಿತು. ಜಗತ್ತಿನ ಬಹಳಷ್ಟು ಓದುಗರಿಗೆ ಪ್ರಿಯಳಾದ ಮೆಚ್ಚಿಕೊಂಡ ಈ



ಸಿಮನ್ ಡಿ ಬುವಾ

**ತನ್ನ ಕೃತಿಗಳ ಮೂಲಕ ಸಾಂಸ್ಕೃತಿಕ ಭಿನ್ನತೆಯನ್ನು ಮೀರಿ ಜಗತ್ತಿನ ಬಹಳಷ್ಟು ಓದುಗರ ಮೆಚ್ಚುಗೆಗೆ ಪಾತ್ರಳಾದ ಸಿಮನ್ ಡಿ ಬುವಾ ಇಂದು ನಮ್ಮ ನಡುವಿಲ್ಲ. ಅವಳ ವ್ಯಕ್ತಿತ್ವದ ಕಿರು ಪರಿಚಯದ ಪ್ರಯತ್ನವೇ ಈ ಲೇಖನ.**

ಲೇಖಕಿಯೇ ಸಿಮನ್ ಡಿ ಬುವಾ. ಅಸ್ತಿತ್ವವಾದದ ಪ್ರವರ್ತಕನಾದ ಸಾರ್ತ್ರೆಯ ಬಾಳ ಸಂಗಾತಿ

ಬೇರೆ ಬೇರೆ ದೇಶದ ಸಾಂಸ್ಕೃತಿಕ ಭಿನ್ನತೆಯನ್ನು ಮೀರಿ ಸ್ತ್ರೀಯರು ತಮ್ಮನ್ನು ತಾವು ಕಂಡುಕೊಳ್ಳುತ್ತಿ

ರುವ, ವೈಯಕ್ತಿಕ ನೆಲೆಯಲ್ಲಿ ಸ್ಪಂದಿಸಲು ಪೂರಕವಾಗುವುದರ ಜೊತೆಯಲ್ಲಿ ಮಹಿಳಾ ಚಳುವಳಿಗೆ ಅತ್ಯಮೂಲ್ಯ ಕೊಡುಗೆಯಾದ ಈ ಕೃತಿಯೇ ಸೆಕೆಂಡ್‌ಸೆಕ್ಸ್ (Second sex).

ತತ್ವಶಾಸ್ತ್ರದಲ್ಲಿ ಪದವೀಧರೆಯಾದ ಸಿಮನ್ ಜನವರಿ 9, 1908ರಂದು ಫ್ರಾನ್ಸ್‌ನಲ್ಲಿ ಜನಿಸಿದಳು. ತಂದೆ ಒಬ್ಬ ಕಡು ಸಂಪ್ರದಾಯವಾದಿ, ವಕೀಲರು, ತಾಯಿ ಭಾವನಾಜೀವಿ. ಭಾವನಾತ್ಮಕ ಸಂಬಂಧಗಳಿಗಾಗಿ ಸದಾ ಇತರರನ್ನು ಅವಲಂಬಿಸುತ್ತಿದ್ದವಳು. ಮಕ್ಕಳು ಸದಾ ತನ್ನ ನೆರಳಲ್ಲಿಯೇ ಇರಬೇಕೆಂದು ತುಡಿಯುತ್ತಿದ್ದವಳು. ತಾಯಿಯ ಈ ಸ್ವಭಾವ ಎಳೆಯ ವಯಸ್ಸಿನ ಮಕ್ಕಳ ಕನಸಿನ ಪ್ರಪಂಚವನ್ನು ಚಿಗುಟಿ ಹಾಕುತ್ತಿತ್ತು. ಸಿಮನ್ ತಾಯಿಯ ಈಸ್ವಭಾವಕ್ಕೆ ಬಾಲ್ಯದಲ್ಲಿಯೇ ಸಿಡಿದೇಳುತ್ತಿದ್ದಳು. ತಂದೆ, ಸಿಮನ್‌ಳ ತಾಯಿಯನ್ನು ನಿಕೃಷ್ಟವಾಗಿ ಕಂಡರೂ, ಅವರೇ ತಾಯಿಯ ಜೀವನದ ಕೇಂದ್ರ ವ್ಯಕ್ತಿ. ತಾಯಿಯ ಜೀವನದ ನಿಯಂತ್ರಣ, ನಿರ್ದೇಶನ ಅವರದೆ. ಮಕ್ಕಳು ಆಟವಾಡುತ್ತಿದ್ದರೂ, ಅವರ ಮಧ್ಯತಾನಿರ ಬೇಕೆಂಬ ತಾಯಿಯ ಬಯಕೆ ಮಕ್ಕಳಲ್ಲಿ ಅಸಹನೆಯ ಬೀಜವನ್ನು ಬಿತ್ತುತ್ತಿತ್ತು.

ತಾಯಿಯ ಈ ಸ್ವಭಾವ ಸಿಮನ್ ಮತ್ತು ತಾಯಿಯ ಆತ್ಮೀಯ ಸಂಬಂಧದ ಸೆಲೆಯನ್ನು ಬಾಲ್ಯದಲ್ಲಿಯೇ ಬತ್ತಿಸಿತು. ಬಾಲ್ಯದಲ್ಲಿಯೇ ಕಡಿದು ಹೋದ ಸಂಬಂಧದ ತಂತುವನ್ನು ತಾಯಿಯು ಸಾವಿನ ಹಾಸಿಗೆಯಲ್ಲಿದ್ದಾಗ ಹೆಣೆಯುವ ಪ್ರಯತ್ನವನ್ನು ಮಾಡಿದಳು. ''A very easy death'' ಒಂದು ಹೃದಯ ಸ್ಪರ್ಶಿ ಪುಸ್ತಕ. ಸಾವಿನರಮನೆಯಲ್ಲಿ ದಿನಗಳೆಣಿಸುತ್ತಿದ್ದ ತಾಯಿಯ ಮನೋಸ್ಥಿತಿ, ದೈಹಿಕ ಅಸಹಾಯಕತೆ, ಸಂಬಂಧದ ವಿವರವಾದ ಚಿತ್ರಣ ಮಿಶ್ರಣ ಭಾವನೆಯನ್ನುಂಟು ಮಾಡುತ್ತವೆ. ಭಯ, ಹೆದರಿಕೆ, ತೀವ್ರವಾದ ನೋವು ಅಸಹಾಯಕತೆ, ಅನಿವಾರ್ಯತೆ, ಎಲ್ಲವೂ ಒಟ್ಟಿಗೆ ಕಾಡುತ್ತವೆ. ಸಾವಿನ ಕಪ್ಪು ಛಾಯೆಯಡಿಯ ಈ ಚಿತ್ರಣ ಮನಸ್ಸನ್ನು ಗಾಢವಾಗಿ ತಟ್ಟುತ್ತವೆ. ಮನುಷ್ಯನಿಗೆ ಸಾವು ಸಹಜವಾದುದಲ್ಲ. ಮನುಷ್ಯನ ಅಸ್ತಿತ್ವವೇ ವಿಶ್ವವನ್ನು ಪ್ರಶ್ನಿಸುವುದಾದುದರಿಂದ ಮನುಷ್ಯನಿಗೆಸಂಬಂಧಿಸುವ ಯಾವ ಘಟನೆಗಳೂ ಸಹಜವಾದುದಲ್ಲ. ಎಲ್ಲಾ ಮನುಷ್ಯರು ಒಂದಲ್ಲ ಒಂದು ದಿನ ಸಾವನ್ನಪ್ಪುತ್ತಾರೆ.

ಆದರೆ ಪ್ರತಿಯೊಬ್ಬ ಮನುಷ್ಯನಿಗೂ ಸಾವು ಒಂದು ಆಕಸ್ಮಿಕ. ಮನುಷ್ಯರಿಗೆ ಇದು ಮೊದಲೆ ತಿಳಿದುದ್ದಾದರೂ ಅದಕ್ಕೆ ಅವರು ಸಮ್ಮತಿಸಿದರೆ ಅದೂ ಸಮರ್ಥಿಸಲಾಗದ ಉಲ್ಲಂಘನೆ "ಎ ವೆರಿ ಈಜಿ ಡೆತ್‌ನ ಕೊನೆಯ ಸಾಲುಗಳಿವು. ಸಿಮನ್ ನಂಬಿದ್ದ ತತ್ವಗಳ ಎಳೆಯ ಮೂಲ ಇಲ್ಲಿಂದಲೇ ಪ್ರಾರಂಭವಾದದ್ದೇನೊ.

## ಸೆಕೆಂಡ್ ಸೆಕ್ಸ್

''We are not born women, we become one''ಸೆಕೆಂಡ್ ಸೆಕ್ಸ್‌ನಲ್ಲಿ ಪ್ರಮುಖವಾಗಿ ಗಮನ ಸೆಳೆಯುವ ವಾಕ್ಯವಿದು. ಐತಿಹಾಸಿಕವಾಗಿ, ಜೈವಿಕವಾಗಿ ವೈಜ್ಞಾನಿಕ, ಸಾಂಸ್ಕೃತಿಕ ನೆಲಗಟ್ಟಿನ ಸಂಶೋಧನೆಯ ಒಡಲಿನಿಂದ ಮೂಡಿಬಂದ ಮಾತುಗಳಿವು. ಸ್ತ್ರೀಯರ ಶೋಷಣೆಯ ವಿವಿಧ ದಿಕ್ಕುಗಳ ವಿಶ್ಲೇಷಣೆಯು ಹೊಸ ಮೆಟ್ಟಿಲುಗಳ ಅನ್ವೇಷಣೆಗೆ ಪೂರಕವಾದ ಮಾತುಗಳಿವು.

ಆತ್ಮ ಚರಿತ್ರೆಯನ್ನು ಬರೆಯಲು ಪ್ರಾರಂಭಿಸಿ, ಸ್ತ್ರೀಯರ ಸಮಸ್ಯೆಗಳ ವೈಜ್ಞಾನಿಕ ವಿಶ್ಲೇಷಣೆಯಾಗಿ ಮಾರ್ಪಟ್ಟ ಸೆಕೆಂಡ್‌ಸೆಕ್ಸ್‌ನ್ನು ಸಿಮೆನ್ 1946 ಅಕ್ಟೋಬರ್‌ನಲ್ಲಿ ಬರೆಯಲು ಪ್ರಾರಂಭಿಸಿ ಜೂನ್ 1949ರಲ್ಲಿ ಮುಗಿಸಿದಳು. ಎರಡು ಸಂಪುಟಗಳಲ್ಲಿರುವ ಈ ಕೃತಿ ಸ್ತ್ರೀಯರ ಸಮಗ್ರ ಜೀವನವನ್ನು ಅಧ್ಯಯನ ಮಾಡುವ ಒಂದು ಅಪೂರ್ವ ಕೃತಿ.

"ಮಾನವೀಯತೆ ಅಥವಾ ಮನುಷ್ಯತ್ವ ಪುರುಷ ಪ್ರಧಾನವಾದದ್ದು. ಪುರುಷನು ಸ್ತ್ರೀಯನ್ನು "ಪುರುಷನ ಸಂಬಂಧದಲ್ಲಿ ಅರ್ಥೈಸುತ್ತಾನೆಯೇ ಹೊರತು ಅವಳ ಅಸ್ತಿತ್ವದ ಹಿನ್ನಲೆಯಲ್ಲಿ ಅಲ್ಲ" ಎಂದು ಸೆಕೆಂಡ್‌ಸೆಕ್ಸ್‌ನ ಮುನ್ನುಡಿಯಲ್ಲಿ ಹೇಳುವ ಸಿಮನ್, ಮಾರ್ಕ್ಸ್‌ವಾದ ಮತ್ತು ಅಸ್ತಿತ್ವವಾದದ ಚೌಕಟ್ಟಿನಲ್ಲಿಯೇ ಸ್ತ್ರೀಯರ ಸಮಸ್ಯೆಯ ಬೇರುಗಳನ್ನು ಗುರುತಿಸುತ್ತಾರೆ. ಪ್ರಸ್ತುತ ಸಾಮಾಜಿಕ ರಚನೆಯಲ್ಲಿ ಪುರುಷ ''He is the subject, he is the absolute, she is other'' ಮಹಿಳಾ ಸಮಸ್ಯೆಗಳ ವೈಜ್ಞಾನಿಕ ವಿಶ್ಲೇಷಣೆಯಲ್ಲಿ ಹೊಸ ಆಯಾಮವನ್ನು, second sex ಎನ್ನುವ ಪದವನ್ನು ಮೊಟ್ಟ ಮೊದಲಿಗೆ ಚಾಲ್ತಿಗೆ ತಂದವಳು ಸಿಮನ್.

ಮಹಿಳಾ ಸಮಸ್ಯೆಯ ಪ್ರಧಾನ ಆಯಾಮವಾದ ದೈಹಿಕ ರಚನೆಯ ಬಗ್ಗೆ ಸಿಮನ್‌ಳ ದೀರ್ಘ ಅಧ್ಯಯನ

ಸಾಮಾಜಿಕ ಸಂದರ್ಭದಲ್ಲಿ ರೂಪುಗೊಳ್ಳಬೇಕಾದ ಮಹಿಳಾ ಸಿದ್ಧಾಂತಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಇತರೆ ಜೀವಿಗಳಲ್ಲಿ ಗಂಡು ಹೆಣ್ಣಿನ ಸಂಬಂಧದ ಬಗ್ಗೆ ತುಲನಾತ್ಮಕ ಅಧ್ಯಯನ ನಡೆಸಿರುವ ಸಿಮನ್ "ಸ್ತ್ರೀಯ ದೈಹಿಕ ರಚನೆಯ ಬಗ್ಗೆ ಹೇಳುವ ಈ ಮಾತುಗಳು ಅಮೂಲ್ಯವಾದವು". ಜೀವಶಾಸ್ತ್ರಕ್ಕೆ ಸಂಬಂಧಿಸಿದ ಸಂಗತಿಗಳನ್ನು ಸಾಮಾಜಿಕ, ಆರ್ಥಿಕ, ಮನಶಾಸ್ತ್ರ್ಯದ ಹಿನ್ನಲೆಯಲ್ಲಿ ಅರ್ಥೈಸಬೇಕಾಗುತ್ತವೆ. ಸ್ತ್ರೀಯರ ದಾಸ್ಯ ಹಾಗೂ ಅವಳ ದೈಹಿಕ ಮಿತಿಗಳು ಅತಿ ಮುಖ್ಯವಾದ ಅಂಶಗಳು. ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ನಿರ್ಧರಿಸುವಲ್ಲಿ ಅವಳ ದೈಹಿಕ ರಚನೆ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತವೆ. ಆದರೆ ದೈಹಿಕ ರಚನೆಯಿಂದ ಮಾತ್ರ ಅವಳನ್ನು ಸ್ತ್ರೀಯೆಂದು ಅರ್ಥೈಸಲು ಸಾಧ್ಯವಿಲ್ಲ. ನಮ್ಮ ಮುಂದಿರುವ ಪ್ರಶ್ನೆಯನ್ನು ಉತ್ತರಿಸಲು ಜೀವಶಾಸ್ತ್ರ ಸಾಲದು.

ಜಗತ್ತಿನ ಆಗುಹೋಗುಗಳಿಂದ ಬಹುಪಾಲು ಮಹಿಳೆಯರು ವಂಚಿತರಾಗಿದ್ದಾರೆ. ಐತಿಹಾಸಿಕವಾಗಿ ಅವಳ ಅಸ್ತಿತ್ವವನ್ನು ನಿರಾಕರಿಸಲಾಗದ ಸ್ತ್ರೀಯರ ಅಧೀನತೆಯನ್ನು ಖಚಿತಪಡಿಸುವ ಸಾಂಸ್ಕೃತಿಕ ಮೌಲ್ಯಗಳನ್ನು ಶತಮಾನಗಳಿಂದ ಉಳಿಸಿಕೊಂಡು ಬರುವುದರ ಜೊತೆಯಲ್ಲಿ ಬಲಪಡಿಸಲಾಗುತ್ತಿದೆ. ಪುರುಷ ಪ್ರಧಾನ ವೈವಾಹಿಕ ಸಂಬಂಧ. ಕುಟುಂಬ ವ್ಯವಸ್ಥೆಗಳು ಹೇಗೆ ಸ್ತ್ರೀಯರ ವ್ಯಕ್ತಿತ್ವವನ್ನು ಮುರುಟಿ ಹಾಕುತ್ತಿದೆಯೆಂಬ ಸೂಕ್ಷ್ಮ ಅಧ್ಯಯನ ಪ್ರಾದೇಶಿಕತೆಯನ್ನು ಮೀರಿ ಪ್ರತಿಯೊಬ್ಬ ಮಹಿಳೆಯು ವೈಯಕ್ತಿಕ ಸ್ತರದಲ್ಲಿ ಸ್ಪಂದಿಸುವಂತೆ ಮಾಡುವುದೇ ಈ ಕೃತಿಯ ಹೆಚ್ಚುಗಾರಿಕೆ.

ಸಮಾಜದ ವಿವಿಧ ಉತ್ಪಾದನಾ ಸಂಬಂಧಗಳ ಹಿನ್ನೆಲೆಯಲ್ಲಿ ಸ್ತ್ರಿಯರ ಸ್ಥಾನಮಾನಗಳನ್ನು ಗುರುತಿಸುತ್ತಾ "ಸ್ತ್ರೀಯರ ಆರ್ಥಿಕ ಸ್ಥಿತಿಯು ಮೂಲಭೂತ ಹಾಗೂ ವಿಕಾಸದ ಹಂತದಲ್ಲಿ ಪ್ರಮುಖವಾದ ಅಂಶವಾದರೂ, ಕೇವಲ ಆರ್ಥಿಕ ಸ್ಥಿತಿಯ ಸುಧಾರಣೆಯೊಂದರಿಂದ ಅವಳ ಸುಧಾರಣೆಯಾಗದು. ನೈತಿಕ, ಸಾಂಸ್ಕೃತಿಕ ಬದಲಾವಣೆಗಳಾಗುವವರೆಗೆ 'ಹೊಸಮಹಿಳೆ' ಉದಯಿಸಲು ಸಾಧ್ಯವಿಲ್ಲ.

**ಜರ್ಜರಿತ ಗೊಳಿಸಿದ ಪ್ರತಿಕ್ರಿಯೆಗಳು**

ಸ್ತ್ರೀಯರ ದೈನಂದಿನ ಬದುಕಿಗೆ ಒಂದು ತಾತ್ವಿಕ ಚೌಕಟ್ಟನ್ನು ಒದಗಿಸಿ ಕೊಟ್ಟ ಸೆಕೆಂಡ್ ಸೆಕ್ಸ್ ಪ್ರಕಟವಾದ ಮೊದಲನೆಯ ವಾರದಲ್ಲಿಯೇ ಇಪ್ಪತ್ತೆರಡು ಸಾವಿರ ಪ್ರತಿಗಳು ಮಾರಾಟವಾದರೂ, ಅದಕ್ಕೆ ದೊರೆತ ಪ್ರತಿಕ್ರಿಯೆಗಳು ಪೂರ್ವಾಗ್ರಹ ಪೀಡಿತ ಧೋರಣೆಗಳಿಂದ ದೂರವಾಗಿರಲಿಲ್ಲ. ವಿವಿಧ ದೇಶಗಳಲ್ಲಿ ಸಿಮನ್‌ಳ ಕೃತಿಯನ್ನು ಒಂದು ಅಪೂರ್ವಕೃತಿಯೆಂದು ಸ್ವಾಗತಿಸಲಾಯಿತಾದರೂ ಅವಳ ನೆಲವಾದ ಫ್ರಾನ್ಸನಲ್ಲಿ ಬಂದ ಪ್ರತಿಕ್ರಿಯೆಗಳು ಸಿಮನ್‌ಳನ್ನು ಒಂದು ಹಂತದಲ್ಲಿ ಜರ್ಜರಿತಗೊಳಿಸಿದವು.

ಪ್ರಖ್ಯಾತ ಸಮಾಜ ಶಾಸ್ತ್ರಜ್ಞನಾದ ಲೆವಿಸ್ಟ್ರಾಸ್‌ನ Structure of Society ಯನ್ನು ಆಳವಾಗಿ ಅಧ್ಯಯನ ಮಾಡಿದ ಸಿಮನ್ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯು ಸಹ ಪುರುಷ ಪ್ರಧಾನ್ಯತೆಯನ್ನು ಪ್ರತಿಬಿಂಬಿಸುವುದು ಮಾತ್ರವಲ್ಲದೆ, ಸ್ತ್ರೀಯ ಸ್ಥಾನಮಾನ ಪುರುಷರಿಗಿಂತ ದ್ವಿತೀಯ ದರ್ಜೆಯದು ಎಂದು ಖಚಿತವಾಗಿ ವಿಶ್ಲೇಷಿಸಿದ್ದು ಲೆವಿಸ್ಟ್ರಾಸನ ಕಟುಟೀಕೆಗೆ ಒಳಗಾಯಿತಲ್ಲದೆ, ಸಿಮನ್‌ಳ ವಿಶ್ಲೇಷಣೆ ಅವೈಜ್ಞಾನಿಕವೆಂದು ತಳ್ಳಿಹಾಕಿದ

ಸೆಕೆಂಡ್‌ಕ್ಸ್‌ಸೆಗೆ ದೊರೆತ ಪ್ರತಿಕ್ರಿಯೆಗಳು ವಸ್ತುನಿಷ್ಠವಾಗಿರದೇ, ವ್ಯಕ್ತಿ ನಿಷ್ಠವಾಗಿದ್ದವು. ಚರ್ಚೆ ಸಂವಾದ, ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು, ಪ್ರತಿಕ್ರಿಯೆಗಳು ಸಿಮನ್‌ಳ ವೈಯಕ್ತಿಕ ಬದುಕನ್ನೇ ಕೇಂದ್ರೀಕರಿಸಲಾಗುತ್ತಿತ್ತು. ಅವಳ ವೈಯಕ್ತಿಕ ಬದುಕಿನ ಆಯ್ಕೆಗಳು ಅವಳನ್ನೇ ಇರಿಯುವ ಆಯುಧವಾಗಿತ್ತು

ಪತ್ರಿಕೋದ್ಯಮಿಯೊಬ್ಬ ಸೆಕೆಂಡ್‌ಸೆಕ್ಸ್ ಸ್ಮಶಾನದಲ್ಲಿ ನೀಡುವ ಭಾಷಣದಂತಿದೆಯೆಂದು ವರ್ಣಿಸಿ ಸಿಮನ್‌ಳಲ್ಲಿದ್ದ ಅಪಾರವಾದ ಧೈರ್ಯಕ್ಕೆ ಮೆಚ್ಚುಗೆಯನ್ನು ಸೂಚಿಸಿದ.

ಸಿಮನ್ ಲಜ್ಜೆಗೆಟ್ಟವಳು, ಅನೈತಿಕ ಅತೃಪ್ತ ಹಲವಾರು ಬಾರಿ ಗರ್ಭಪಾತ ಮಾಡಿಸಿಕೊಂಡು, ಮಾನಸಿಕ ಅಸ್ವಸ್ಥತೆಗೆ ಒಳಗಾದ, ಮಕ್ಕಳನ್ನು ಹೆರದ ಅವಳಿಗೆ ತಾಯ್ತನದ ಬಗ್ಗೆ ಬರೆಯುವ ಹಕ್ಕಿಲ್ಲವೆಂಬ ಕುಹಕದ, ಆರೋಪಗಳು ಸಿಮನ್‌ಳನ್ನು ಗೊಂದಲಕ್ಕೀಡು ಮಾಡುತ್ತಿದ್ದವು. ಅವಳನ್ನು ಒಬ್ಬ ಲೇಖಕಿಯೇ ಅಲ್ಲವೆಂದು, ಅವಳ ಪುಸ್ತಕಗಳನ್ನು ಸಾರ್ತ್ರೆ ಬರೆದು ಕೊಡುತ್ತಾನೆಂದು ಅವಳ ಖ್ಯಾತಿಗೆ ಸಾರ್ತ್ರೆ ಕಾರಣ

ವೆಂದು ಲೇವಡಿ ಮಾಡಲಾಗುತ್ತಿತ್ತು ಫ್ರಾನ್ಸನ ರಾಜಕೀಯ, ಆರ್ಥಿಕ, ಸಾಮಾಜಿಕಸ್ಥಿತಿಗಳು ಬದಲಾಗುತ್ತಿದ್ದರೂ ಸ್ತ್ರೀಯರ ಬಗೆಗಿದ್ದ ಧೋರಣೆಗಳು ಶತಮಾನಗಳಿಂದ ಹರಿದು ಬಂದ ಮೌಲ್ಯಗಳ ಸೆರೆಯಿಂದ ಮುಕ್ತವಾಗಿರಲಿಲ್ಲ. ಎನ್ನುವ ಸಿಮನ್.

ಫ್ರಾನ್ಸನಲ್ಲಿ ಮಹಿಳೆಯೊಬ್ಬಳು ಲೇಖಕಿಯಾಗಿದ್ದರೆ ಅವಳು ಥಳಿಸುವ ಚಿತ್ರವೊಂದನ್ನು ಸಾರ್ವಜನಿಕರಿಗೆ ನೀಡಿದಂತೆ. ಲೇಖಕಿ ಚಿಕ್ಕವಯಸ್ಸಿನ ಯುವತಿಯಾಗಿದ್ದರೆ, ಅವಳ ಬರವಣಿಗೆ ಲೇವಡಿಗೆ ಒಂದು ವಸ್ತುವಾಗುತ್ತದೆ. ಅವಳೊಬ್ಬ ವಯಸ್ಸಾಗಿದ್ದ ಲೇಖಕಿಯಾಗಿದ್ದರೆ ಫ್ರಾನ್ಸನ ಜನ ಗೌರವದಿಂದ ತಲೆಬಗ್ಗಿಸುತ್ತಾರೆ" ಲೇಖಕಿಯರ ಸ್ಥಿತಿಗತಿಯ ಬಗ್ಗೆ ಸೂಚ್ಯವಾಗಿ ನೊಂದು ನುಡಿಯುತ್ತಾಳೆ ಸಿಮನ್.

**ಸಮಾನತೆಯ ನೆಲೆಯಲ್ಲಿ ಮಿಡಿದ ಜೀವಗಳು**

1980 ಏಪ್ರಿಲ್ ಹದಿನೈದು ಸಿಮನ್‌ಳ ಬಾಳ ಸಂಗಾತಿ ಲೇಖಕ, ತತ್ವಜ್ಞಾನಿ, ಜೀನ್‌ಪಾಲ್ ಸಾರ್ತ್ರೆ ಸಾವಿನೊಡನೆ ಸೆಣಸಾಟದ ಕೊನೆಯದಿನ. ಕಾಯಿಲೆಯಿಂದಾಗಿ ದೀರ್ಘಕಾಲ ಹಾಸಿಗೆ ಹಿಡಿದಿದ್ದ ಸಾರ್ತ್ರೆ ಕೊನೆಯುಸಿರೆಳೆದ ದಿನ.

ಗೊಳಿಸಿದರು. ಬಾಲ್ಯದಿಂದಲೂ ಬೆಸೆದ ಬಂಧನವನ್ನು ಕಳಚಿಕೊಳ್ಳಲಾರದ ಸಿಮನ್ ಶವದ ಮೇಲೊಂದು ಬಟ್ಟೆಯನ್ನು ಹಾಸಿ, ನಂತರ ಅವನ ಪಕ್ಕದಲ್ಲಿ ಕ್ಷಣ ಮಲಗೆದ್ದ ಘಟನೆ ಅವರಿಬ್ಬರ ಸಂಬಂಧದ ತೀವ್ರತೆಯ ಪ್ರತಿಬಿಂಬ.

ಗಂಡು, ಹೆಣ್ಣು ಇಬ್ಬರೂ ಒಬ್ಬರಿಗೊಬ್ಬರು ಅವಿಭಾಜ್ಯ ಹಾಗೂ ಅನಿವಾರ್ಯ. ಆದರೆ ಎರಡು ಜೀವಿಗಳು ಪರಸ್ಪರ ಸಮಾನತೆಯ ನೆಲೆಯಲ್ಲಿ ಸ್ಪಂದಿಸುವ ವಾತಾವರಣವಿಲ್ಲ. ಬಹುಪಾಲು ವಿವಾಹಗಳು ಪ್ರೀತಿಯ ನೆಲೆಯಿಂದ ಬಂಧಿಸಲ್ಪಡುವುದಿಲ್ಲ. ಪ್ರಸ್ತುತದಲ್ಲಿ ಸ್ತ್ರೀ ಪುರುಷರಿಬ್ಬರೂ ಒಂದರ್ಥದಲ್ಲಿ ವಿವಾಹವನ್ನು ಸ್ವೀಕರಿಸುತ್ತಿಲ್ಲ. ಪುರುಷನು ಉತ್ಪಾದಕನ ಪಾತ್ರವನ್ನು ವಹಿಸಿದರೆ, ಸ್ತ್ರೀಯಾದವಳಿಗೆ, ವಿವಾಹವೇ ಜೀವನದ ಪರಮೋದ್ದೇಶ ವೆಂಬ ನಂಬಿಕೆಯನ್ನು ಶತಮಾನಗಳಿಂದ ಆರೋಪಿಸಲಾಗಿದೆ" ಎನ್ನುವ ಸಿಮನ್,ಸೆಕೆಂಡ್ ಸೆಕ್ಸನಲ್ಲಿ ಸ್ತ್ರೀಯರ ಸ್ವಂತಿಕೆಯನ್ನು ನಾಶಪಡಿಸುತ್ತಿರುವ ಕೌಟುಂಬಿಕ ವ್ಯವಸ್ಥೆಯ ಬಗ್ಗೆ ವಿವರವಾಗಿ ವಿಶ್ಲೇಷಿಸುತ್ತಾರೆ.

ಸ್ತ್ರೀಯರ ಪೂರ್ಣತೆ ಅವಳ ಹೆಂಡತಿಯ ಪಾತ್ರ

---

'ಔಟ್ ಸೈಡರ್' 'ದಿರೆಬೆಲ್' ನಂತಹ ಮಹತ್ತರ ಕೃತಿಗಳನ್ನು ನೀಡಿದ ಲೇಖಕ ಕಾಮು ಯುವ ಜನತೆಯ ಎದೆಯಲ್ಲಿ ಬತ್ತದ ಪ್ರತಿಭಟನೆಯ ಕಿಡಿಯಾಗಿದ್ದ. ಎಂದೂ ಹೊಂದಾಣಿಕೆ ಮಾಡಿಕೊಳ್ಳದ, ಸಂಪ್ರದಾಯವಾದಿ ಮಾರ್ಕ್ಸ್‌ವಾದಿಗಳ ತೀವ್ರ ಕೋಪಕ್ಕೆ ಒಳಗಾದ ಕಾಮು, ಸಾರ್ತ್ರೆ ಹಾಗೂ ಸಿಮನ್‌ಳ ಆತ್ಮೀಯ ಸ್ನೇಹಿತ. ಆದರೆ ಕಾಮು ಸಿಮನ್‌ಳ ಸೆಕೆಂಡ್ ಸೆಕ್ಸ್ ಕೃತಿಯ ಬಗ್ಗೆ ತೋರಿದ ಪ್ರತಿಕ್ರಿಯೆ ಆಶ್ಚರ್ಯಕರವಾದದ್ದು. ಈ ಪ್ರತಿಯನ್ನು ಓದುತ್ತಿದ್ದ ಕಾಮು ಅರ್ಧದಲ್ಲಿಯೇ ನಿಲ್ಲಿಸಿ ಬಿಸಾಕಿ 'ಫ್ರೆಂಚ್ ಗಂಡಸರನ್ನು ಅಪಹಾಸ್ಯ ಮಾಡುತ್ತಿದ್ದೀಯೆಂದು ಸಿಮನ್‌ಳನ್ನು ಆರೋಪಿಸಿದ್ದ.

---

ಪ್ರತಿದಿನದಂತೆ, ಸಾರ್ತ್ರೆಯನ್ನು ನೋಡಲು ಅಂದು ಆಸ್ಪತ್ರೆಗೆ ಭೇಟಿ ನೀಡಿದಾಗ, ಸಾರ್ತ್ರೆ ನಿದ್ರಿಸುತ್ತಿದ್ದ. ಮರಳಿ ಮನೆಗ್ಹೋದ ಸಿಮನ್‌ಳನ್ನು ಸಾರ್ತ್ರೆಯ ಸಾವಿನ ಟೆಲಿಫೋನ್ ಕರೆ, ಅವಳ ಅಂತರಂಗದ ಚೈತನ್ಯ ಬತ್ತಿಸಿತು. ಅವಳ ಬದುಕಿನ ಅವಿಭಾಜ್ಯಅಂಗವಾಗಿದ್ದ ಸಾರ್ತ್ರೆ ಅಂದು ಕೊರಡು ದೇಹವಾಗಿ ಮಲಗಿದ್ದ. ಅವಳ ಜೀವನದ ಪ್ರತಿಕ್ಷಣವನ್ನು ಹಂಚಿಕೊಂಡಿದ್ದ ಉಸಿರಿಲ್ಲದ ನಿರ್ಜೀವ ಶವದೊಂದಿಗೆ, ಸಿಮನ್ ಮಲಗಲು ಯತ್ನಿಸಿದಾಗ ಆಸ್ಪತ್ರೆಯ ಅಧಿಕಾರಿಗಳು ಸಾರ್ತ್ರೆಯು ನರಳುತ್ತಿದ್ದ ಗ್ಯಾಂಗ್ರಿನ್ ಬಗ್ಗೆ ಎಚ್ಚರಿಕೆ ನೀಡಿ ಸಾಂತ್ವನ

ಹಾಗೂ ತಾಯ್ತನದ ಪಾತ್ರದಿಂದ ಮುಕ್ತವಾಗಿರಬೇಕೆಂದು ವಾದಿಸುವ ಸಿಮನ್ ವಿವಾಹವೆಂಬುದು ಎರಡು ಸ್ವತಂತ್ರ್ಯ, ಪೂರ್ಣ, ವ್ಯಕ್ತಿತ್ವಗಳ ಮಿಲನವಾಗಿರಬೇಕೆನ್ನುತ್ತಾಳೆ. ತಾವು ಪ್ರತಿಪಾದಿಸುತ್ತಿದ್ದ, ಆಲೋಚನೆ ವಿಶ್ಲೇಷಣೆಗಳನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳಲು ತಹತಹಿಸುತ್ತಿದ್ದ, ಸಿಮನ್ ಮತ್ತು ಸಾರ್ತ್ರೆ, ಸಂಪ್ರದಾಯಿಕ ಚೌಕಟನ್ನು ಮುರಿದು ಬಾಳ ಸಂಗಾತಿಗಳಾಗಿದ್ದರು. ಪರಸ್ಪರ ಗೌರವ ಪ್ರೀತಿ, ಆತ್ಮೀಯತೆ, ವಿನಯ ಅವರಿಬ್ಬರ ಬದುಕಿನಲ್ಲಿ ಹಸಿರನ್ನುಕ್ಕಿಸಿದ ಅಂಶಗಳು.

ರಾಜಕೀಯ ವ್ಯಕ್ತಿತ್ವ

ಮೂಲ ಭೂತವಾಗಿ ಸಿಮನ್ ಒಬ್ಬ ರಾಜಕೀಯ ವ್ಯಕ್ತಿ. ಎಡಪಂಥೀಯ ರಾಜಕೀಯ ನಿಲುವನ್ನು ಹೊಂದಿದ್ದ ಸಿಮನ್ ಜಗತ್ತಿನ ಹಲವಾರು ಪ್ರಗತಿಪರ ಚಳುವಳಿಗಳಲ್ಲಿ ತನ್ನನ್ನು ಗುರುತಿಸಿಕೊಂಡಿದ್ದಲ್ಲದೆ, ಅವುಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾಳೆ. ಮಹಿಳಾ ಚಳುವಳಿಗಳಲ್ಲಿ ಅವಳ ಪಾತ್ರ ತೆಳುವಾದುದು ಹಾಗೂ ಅವಳು ಗುರುತಿಸಿಕೊಂಡದ್ದು ಬುದ್ಧಿಜೀವಿಯಾಗಿ ಮಾತ್ರ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ ಅವಳ ಕೊಡುಗೆ ಅಮೂಲ್ಯವಾದುದು. 1970ರ ನಂತರ ಜನತ್ತಿನಾದ್ಯಂತ ಮಹಿಳಾ ಚಳುವಳಿಗಳು ಚಿಗುರೊಡೆಯಲು ಎರಡು ಪ್ರಮುಖ ಕಾರಣಗಳನ್ನು ಸಿಮನ್ ನೀಡುತ್ತಾರೆ.

ಮುಂದುವರಿದ ಬಂಡವಾಳಶಾಹಿ ವ್ಯವಸ್ಥೆಯು ವೈರುಧ್ಯಮಯವಾಗಿ ಪುರುಷರಿಗಿಂತ ಸ್ತ್ರೀಯರಿಗೆ ಆರ್ಥಿಕವಾಗಿ ಲಾಭಕರವಾಗಿ ಪರಿಣಮಿಸುತ್ತದೆ. ಸಮಾಜವಾದ ಹಾಗೂ ಎಡಪಂಥೀಯ ಚಳುವಳಿಗಳು ಸ್ತ್ರೀಯರ ಸಮಸ್ಯೆಗಳನ್ನು ಪರಿಹರಿಸವಲ್ಲಿ ವಿಫಲವಾಗುತ್ತಿರುವುದು. ಉತ್ಪಾದಸಾ ಸಂಬಂಧಗಳಲ್ಲಿ ಮಾತ್ರ ಉಂಟಾಗುವ ಬದಲಾವಣೆಗಳು ವ್ಯಕ್ತಿಗಳ ನಡುವಿನ ವೈಯಕ್ತಿಕ ಸಂಬಂಧಗಳಲ್ಲಿ ಯಾವ ಬದಲಾವಣೆಗಳು ಉಂಟಾಗದಿರುವುದು.

ಬೆಳೆಯುತ್ತಿದ್ದ ಮಹಿಳಾ ಚಳುವಳಿಗಳಲ್ಲಿ ಸಿಮನ್ ವಿವಿಧ ರೀತಿಯಲ್ಲಿ ಭಾಗವಹಿಸಲು ಪ್ರಾರಂಭಿಸಿದಳು. ಶೈಕ್ಷಣಿಕ ಕ್ಷೇತ್ರದಲ್ಲಿನ ಅಸಮಾನತೆ ಸ್ತ್ರೀಯರ ವೈವಾಹಿ ಜೀವನವನ್ನು ನಿಯಂತ್ರಿಸುತ್ತಿದ್ದ ಜಡ್ಡುಗಟ್ಟಿದ ಕಾನೂನು, ಗರ್ಭಪಾತ ನೀತಿ,ದುಡಿಯುವ ಮಹಿಳೆಯರ ಉಸಿರುಗಟ್ಟುವ ವಾತಾವರಣ ಮುಂತಾದವುಗಳ ವಿರುದ್ಧ ಏರ್ಪಡಿಸಲಾಗುತ್ತಿದ್ದ ಪ್ರತಿಭಟನಾ ಕಾರ್ಯಕ್ರಮಗಳಲ್ಲಿ ಸಿಮನ್ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದ್ದಳು. ಸಮಸ್ಯೆಗಳ ವಾಸ್ತವಿಕ ಮುಖ ಅವಳ ಬರವಣಿಗೆ, ಹಾಗೂ ವಿಶ್ಲೇಷಣೆಗಳಿಗೆ ಹೊಸ ಆಯಾಮವನ್ನು ತಂದು ಕೊಟ್ಟವು.

"ಸ್ತ್ರೀಯ ಸ್ಥಿತಿಗತಿಗಳು ಶ್ರಮದ ಭವಿಷ್ಯವನ್ನವಲಂಬಿಸಿದೆ. ಉತ್ಪಾದನಾ ಸಂಬಂಧದಲ್ಲಿನ ಬದಲಾವಣೆಯಿಂದಮಾತ್ರ ಸ್ತ್ರೀಯರ ಸ್ಥಾನಮಾನಗಳಲ್ಲಿ ಬದಲಾವಣೆಯಾಗುವುದರಿಂದ ಸ್ತ್ರೀವಾದದ ಸೀಮಿತ ಪರಿಧಿಯಿಂದ

### ಸಿಮನ್‌ಳ ಪ್ರಮುಖ ಕೃತಿಗಳು


ಮೆಮೋರಿಸ್ ಆಫ್ ಎ ಡ್ಯೂಟಿಫುಲ್ ಡಾಟರ್ — ಆತ್ಮಚರಿತ್ರೆಯ 1ನೆ ಸಂಪುಟ
ಪ್ರೈಮ್ ಆಫ್ ಮೈ ಲೈಫ್ — 2ನೆ ಸಂಪುಟ
ಫೋರ್ಸ್ ಆಫ್ ಸರ್‌ಕಮ್ ಸ್ಟಾನ್ಸಸ್ — 3ನೆ ಸಂಪುಟ
ಆಲ್ ಸೆಡ್ ಯೆಂಡ್ ಡನ್ — 4ನೆ ಸಂಪುಟ
ದೀಮಾಂಡ್ರಿನ್ಸ್ — ಕಾದಂಬರಿ
ದಿವುಮೆನ್ ಡಿಸ್ಟ್ರಾಯಡ್ — ಕಾದಂಬರಿ
ಎ ವೆರಿ ಈಜಿ ಡೆಥ್ ಪ್ರಬಂಧ
ಫೇರ್‌ವೆಲ್ ಟು ಸಾರ್ತ್ರೆ

ದೂರ ಉಳಿಯಲು ನಾನು ಪ್ರಯತ್ನಿಸುತ್ತೇನೆ" ಎಂದು ಬಲವಾಗಿ ನಂಬಿದ್ದ ಸಿಮನ್ ಕ್ರಮೇಣ ತಮ್ಮ ನಿಲುವನ್ನು ಬದಲಾಯಿಸಿ ಕೊಂಡರು. ಸ್ತ್ರೀಯರು ಮಾತ್ರ ಎದುರಿಸಬೇಕಾದ ವಿಶಿಷ್ಟ ಸಮಸ್ಯೆಗಳಿಗೆ ಒತ್ತು ನೀಡುತ್ತಾ, ಸ್ತ್ರೀಯರ ಅಸ್ತಿತ್ವವನ್ನು ತಾವು ಅಲ್ಲಗಳೆದದ್ದನ್ನು ಸಹೃದಯದಿಂದ ಒಪ್ಪಿಕೊಳ್ಳುತ್ತಾರೆ. ವರ್ಗಸಂಘರ್ಷದ ಜೊತೆಜೊತೆಯಲ್ಲಿಯೆ ಸ್ತ್ರೀಯರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವುದು ಅನಿವಾರ್ಯವೆಂದು ಧೃಡವಾಗಿ ನಂಬಿದ್ದಳು.

'ಸೆಕೆಂಡ ಸೆಕ್ಸ್' ತೀವ್ರಗಾಮಿಗಳಿಗೆ (Militants) ಗಳಿಗೆ ಸಹಾಯಕವಾಗಬಲ್ಲ ಕೃತಿಯೇ ವಿನಃ ಅದೊಂದು ತೀವ್ರಗಾಮಿ ಕೃತಿಯಲ್ಲವೆಂದು ಹೇಳುವ ಸಿಮನ್ ಈ ಕೃತಿ ಪ್ರಕಟವಾದ ಪ್ರಾರಂಭದಲ್ಲಿ ಪ್ರಚಾರದ ಪ್ರತಿಭಟನಾ ಕಾರ್ಯಕ್ರಮಗಳಿಗಲ್ಲವೆಂದು ನುಡಿದಿದ್ದರೂ, ಬಲವಾಗಿ ಬೇರೂರುತ್ತಿದ್ದ ಮಹಿಳಾಜಾಗೃತ ಚಳುವಳಿಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿ ತಮ್ಮ ಬರವಣಿಗೆಗೆ ಒಂದು ವಿಶಿಷ್ಟಪೂರ್ಣವಾದ ಅರ್ಥವನ್ನು ನೀಡಿದಳು.

ಜಗತ್ತಿನ ಬಹುಪಾಲು ಓದುಗರ ಅಂತರಂಗದ ತಂತಿಯನ್ನು ಮಿಡಿದಿದ್ದ ಸಿಮನ್ ಇಂದು ನಮ್ಮ ನಡುವಿಲ್ಲ. 1986ರ ಏಪ್ರಿಲ್ ಹದಿನಾಲ್ಕರಂದು 78 ವರ್ಷ ವಯಸ್ಸಿನ ಸಿಮನ್ ನಿಧನಳಾದಳು. ಅವಳು ನಂಬಿಕೊಂಡು ಬಂದ ಮೌಲ್ಯಗಳು ಅವಳ ಉಸಿರಿನ ಅವಿಭಾಜ್ಯ ಅಂಗಗಳಾಗಿದ್ದವು. ತಾನು ಪ್ರಶ್ನಿಸುವ ಪರಂಪರೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದ ಸಿಮನ್‌ಳ ವ್ಯಕ್ತಿತ್ವ ಹಾಗೂ ಅವಳ ಕೃತಿಗಳು ಶತಮಾನಗಳಕಾಲ ಹಸಿರಾಗಿ ಉಳಿಯ ಬಲ್ಲವೆಂದರೆ ಉತ್ಪ್ರೇಕ್ಷೆಯ ಮಾತಲ್ಲ ●

# ಯ ಜ್ಞ ಪ ಶು



ಬರೆದಿಟ್ಟರಂದು ವೇದಶಾಸ್ತ್ರ ಪುರಾಣವ
ಅನುಸರಿಸಿದರಂದಿಂದು ಸಂಸ್ಕೃತಿಯ
ಬೆಳಸಿದರದನು ತಲೆಮಾರಿಂದ ತಲೆಮಾರಿಗೆ
ಹೆಸರಿಸಿದರಿವಳನು ಹೆಣ್ಣು "ಸೌಭಾಗ್ಯವತಿ"

ಬೆಳೆಯಿತಿಂತು ಹೆಣ್ಣಿನ ಗೋಳು ಪರಂಪರೆ
ಹೊರಲಾರದ, ಹೊತ್ತು ಸಹಿಸಲಾರದ ಸಂಸ್ಕೃತಿ
ಇದಹೊತ್ತು ತನಗಿಟ್ಟ ಸ್ಥಳದಲ್ಲಿ, ಎಡೆನ್ನದೇ
ಸಾಗಿಬಂದಿತು ಈ ಪಥ.

ಯಾವುದೋ ದೈವದ ಹೆಸರಿನಲಿ
ಯಾರೋ ಬರೆದಿಟ್ಟ ಕಟ್ಟಳೆಯಲಿ
ಯಾರಿಗೋ ಮಣಿದು ಬಾಗಿ ಸತ್ತ ಬಾಳಿನಲಿ
ಯಾವುದೋ ಅರ್ಥವಿಲ್ಲದ ಆಭರಣಗಳು
ಮತ್ತೆ............

ವಿಧಿ ಸಂತಸದಿಂದೀ ಆಭರಣವ ಪಡೆದಾಗ
ಕಳೆದುಕೊಂಡವಳು ಕನ್ನಡಿ ನೋಡಿ ಕಣ್ಣೀರ್ಗರೆದಳು-
ಮುಗುದೆ, ಸರ್ವರೆದುರು ವಿಕಾರವಿಧವೆ
ಮುಂದಣವನ್ನೇನು ಯೋಚಿಸಿಯಾಳು ?

ಮತ್ತದೇ ಹಿರಿಯರ ಮೇಲ್ಪಂಕ್ತಿ,
ಜಗತ್ತು ಸುಂದರ, ಮಾನವಕುಲ ಸುಂದರ
ಈ ಪ್ರಾಣಿಪಕ್ಷಿ ಸಂಕುಲವತಿ ಸುಂದರ
ಆದರೀ ನನ್ನ ಸ್ವರೂಪ ಸುಂದರವೆ ?

ಹೀಗೆ ಕಣ್ಣೀರಿಟ್ಟರೂ ಕೊನೆಗೆ
ಎಲೆ ಕಲ್ಲು ಹೃದಯುವೇ, ನನಗಾಗಿ
ನಿನ್ನ ಒಂದು ಹನಿ ಕಣ್ಣೀರಿದೆಯೇ
ಎಂಬವಳ ಪ್ರಶ್ನೆಗೇನುತ್ತರ ಸಿಕ್ಕೀತು ?

ಮಗುವೇ ಸರಿಯಲ್ಲ ನಿನ್ನೀ ಉದ್ಧಟತನ
"ಇಟ್ಟಂತಿರುವುದೇ ಧರ್ಮ"ವೆಂಬ ಮಾತಿನಿಂದ
ನಡೆಯುವ ಮಾರಣ ಹೋಮದಲ್ಲಿ ತಾನೊಂದು
ಯಜ್ಞಪಶುವೆಂಬುದೇ ಅಂತಿಮ ತೀರ್ಮಾನ.

**ವಸುಂಧರ ಬಿ. ಕೆ.**

## ಚರಿತ್ರಾ


# ನಂಜನಗೂಡು ತಿರುಮಲಾಂಬಾ (1987-1982) ಕೃತಿಗಳಿಂದ ಆಯ್ದ ಭಾಗಗಳು

ಕರ್ನಾಟಕ ನಂದಿನಿ ಮಾಸ ಪತ್ರಿಕೆ (ಸಂಪುಟ 1 ಸಂಚಿಕೆ 1 1916ನೇ ಅಕ್ಟೋಬರ್)

### ಭಗಿನಿಯರಲ್ಲಿ ಭಿಕ್ಷೆ

ಈವರೆಗೆ ನೀವು ಹಲವು ಭಾಷಾ ಸಂತಾನಗಳನ್ನು ನೋಡಿರುವಿರಿ; ಹಲವನ್ನು ಬರಿಯ ಕಾಗದದ ಕಟ್ಟು ಗಳೆಂದು ಉಪೇಕ್ಷಿಸಿ, ಮೂಲೆಯಲ್ಲೆಸೆದು, ಕೆಲವು ವೇಳೆ ಗಳಲ್ಲಿ ನಿಮ್ಮ ಮಕ್ಕಳ ಹೇಸಿಗೆಯನ್ನೆತ್ತುವುದಕ್ಕಾಗಲೀ, ಇಲ್ಲವೇ ಮತ್ತಾವುದಾದರೂ ಪೊಟ್ಟಣಗಳನ್ನು ಸುತ್ತುವು ದಕ್ಕಾಗಲೀ, ಉಪಯೋಗಿಸಿಯು, ಉಪಯೋಗಿ ಸುತ್ತಲೂ ಇರುವಿರಿ.

ಹಾಗೆಯೇ ನಂದಿನಿಯನ್ನು ಮಾಡಿದರೆ ಗತಿ ಯೇನು? ಇದೇ ದೊಡ್ಡ ಭೀತಿ? ಸಹಜವಷ್ಟೇ? ಅದೇನು ಈವರೆಗೆ ಹುಟ್ಟಿರುವ ಪತ್ರಿಕೆಗಳೆಲ್ಲಕ್ಕೂ ನಂದಿನಿಯು ಮೇಲೊ? ಅದೇನಿವಳ ಹೆಚ್ಚಿಗೆ?! ಅವರಿಗಾದ ಗತಿಯೇ ಇವಳಿಗಾಗಬಾರದೇಕೆ? ಎಂದು ಆಕ್ಷೇಪಿಸುವಿರಲ್ಲವೆ? ಹಾಗಿದ್ದರೆ ನೋಡಿರಿ ನಂದಿನಿ ಯಂತೆ ಸೋದರಿ ಸೇವೆಯೇ ತನ್ನ ಧ್ಯೇಯವಾಗಿಟ್ಟು, ಸೋದರಿಯರ ಪರಸ್ಪರ ಸೌಜನ್ಯಾಭಿವೃದ್ಧಿಯೇ ತನ್ನ ಶ್ರಮಕ್ಕೆ ಪ್ರತಿಫಲವೆಂದು ನಂಬಿ ನಂದಿನಿಯಂತೆ ಸ್ತ್ರೀಯಾಗಿ, ಸ್ತ್ರೀಯರ ಅಭ್ಯುದಯ. ಆಕಾಂಕ್ಷೆಗಳನ್ನು ನಿರುಪಾಧಿಕ, ನಿರವಧಿಕ ತೇಜೋರೂಪಗಳಿಂದ ಪ್ರಕಟ ಮಾಡಬೇಕೆಂಬ ಗುರಿಯು ಮತ್ತೆಲ್ಲಿ? ಯಾವ ಕರ್ನಾಟಕ ಸ್ತ್ರೀ ಕರ್ತೃತ್ವದಿಂದ ವಹಿಸಲ್ಪಟ್ಟಿತು? ಇಲ್ಲವಷ್ಟೆ? ಹಾಗಿದ್ದ ಬಳಿಕ ಸ್ತ್ರೀ ಸ್ವಭಾವವನ್ನು ಪುರುಷರು ತೆಗೆದಾಡುತ್ತಿರುವುದಾದರೂ, ನಿಮಗೆ ಸಮ್ಮತವೊ? ಅದೂ ಇಲ್ಲ. ಏಕೆಂದರೆ ಪುರುಷರು ಸ್ತ್ರೀಯರ ವಿಚಾರ ವನ್ನು ತೆಗೆದಾಡುತ್ತಿರುವುದು ಅಸಹ್ಯ ವಿಚಾರವೆಂದು ಹೇಳುವಿರಲ್ಲವೆ? ಹಾಗಿದ್ದರೆ ಸ್ತ್ರೀಯರ ಸ್ವಭಾವ ಪರಿವರ್ತನಾ ಸ್ಥಿತಿ, ಸಂಸ್ಕರಣಾ ಕ್ರಮಗಳನ್ನು ಕುರಿತು ಸ್ತ್ರೀಯರಿಂದಲೇ ಕಾಲಕಾಲಕ್ಕೆ ತಕ್ಕ ವೇಷ ಭಾಷೆಗಳಿಂದ ಸ್ತ್ರೀಯರಿಗಾಗಿ, ಹೊರಡುವ ಸ್ವತಂತ್ರ ಪತ್ರಿಕೆಯು



ನಂಜನಗೂಡು ತಿರುಮಲಾಂಬಾ

ಕನ್ನಡ ನಾಡಿಗೆಲ್ಲಕ್ಕೂ ಒಂದೇ ಒಂದಾದ ಇದಕ್ಕೆ ನಿಮ ಮಾತೃ ಹೃದಯವು ಅವಕಾಶವನ್ನು ಕೊಡಬಾರದೇನು? ಕೊಡುವಿರಷ್ಟೆ! ದೃಢವಾಗಿರಲಿ! ನಿಮ್ಮಿಂದಿನ ದೃಢ ಸಂಕಲ್ಪವು.

### ಸಂದೇಶ

ನಂದಿನಿಯ ಜನ್ಮ ಧಾರಣೆಯು ಆರಿಗೂ, ಆವ ಆಗ್ರಹಕ್ಕೂ ಕಾರಣವಾಗದಂತೆ, ಸ್ತ್ರೀ ಜನಾಂಗದಲ್ಲಿ ಪರಸ್ಪರೈಕ್ಯಮತಬಾವುಂಟಾಗುವುದರಿಂದ ನಮ್ಮ ದೇಶದ ವಿದ್ಯಾಸಂಪದಭ್ಯುದಯ ಹೆಚ್ಚುವಂತೆ ಮಾಡಬೇಕೆಂಬುದೆ

ನಮ್ಮ ಮುಖ್ಯ ಗುರಿಯಾಗಿರುವುದು. ಇದಕ್ಕಾಗಿ ಕೆಳಗೆ ವಿವರಿಸಿರುವ ನಿಯಮಗಳನ್ನು ನಮ್ಮ ಆಚರಣೆಗೆ ತರಲು ಸಂಕಲ್ಪಿಸಿರುವೆವು.

1) ದೇಶದ ಏಳಿಗೆಗೆ ಸ್ತ್ರೀ ಜನಾಂಗದ ಕರ್ತವ್ಯ ತತ್ಪರತೆಯೇ ಕಾರಣವೆಂಬುದನ್ನು ನಮ್ಮ ಎಳೆದಂಗೆಯರ ತಿಳಿವಿಗೆ ತರಬೇಕಾದುದು.

2) ನಮ್ಮ ಹೆಣ್ಣು ಮಕ್ಕಳ ವಿದ್ಯಾಭ್ಯಾಸವು ಯಾವ ಬಗೆಯದಾಗಿರಬೇಕು ? ಈಗಿನ ಕಲಾ ಶಿಕ್ಷಣ ದಿಂದಲೇ ನಮ್ಮವರು ಏಳಿಗೆಗೆ ಬರಬಹುದೇ ? ಅಥವಾ ಈಗಿನ ಶಾಲಾ ಶಿಕ್ಷಣದಲ್ಲಿ ಮಾಡಬೇಕಾದ ಸುಧಾರಣೆ ಗಳೇನಾದರೂ ಉಂಟೆ ? ಎಂಬ ವಿಚಾರದಲ್ಲಿ ನಮ್ಮವರ ಅಭಿಪ್ರಾಯವನ್ನು ಪ್ರಕಟಿಸುವುದು.

3) ನಮ್ಮವರ ಆಚಾರ–ವಿಚಾರದಲ್ಲಿ ಸೇರಿರುವ ಅತಿರೇಕಗಳನ್ನು ಅನರ್ಥಕ ಇಲ್ಲವೇ ಪ್ರಯಾಸಕರಗಳಾದ ಅಂಶಗಳನ್ನು–ಕ್ರಮಪಡಿಸಿ ನಮ್ಮವರ ಸ್ವರೂಪ ಕರ್ತವ್ಯ ಗಳಿಗೆ ಅವಶ್ಯಕವಾದ ವಿಚಾರಗಳನ್ನು ಸಕಾರ್ಯವಾಗಿ ವಿಮರ್ಶಿಸುವುದು.

4) ನಮ್ಮ ಬಾಲಿಕಾ ಶಿಕ್ಷಣದ ಕಡೆಗೂ, ಸ್ತ್ರೀಯರ ನಿತ್ಯ ಸೇವಾ ವಿಚಾರದ ಕಡೆಗೂ ನಮ್ಮ ದೇಶ ಬಾಂಧ ವರು ಕೊಡಬೇಕಾದ ಆಸಕ್ತಿ ಮತ್ತು ಅನಾಮಧೇಯ ರಾಗಿ ಸಮಾಜ ಶಾಸನಕ್ಕೆ ಬಲಿಬಿದ್ದು ಕ್ಲೇಷ–ರೋಷ ಗಳಿಂದ ನರಳುತ್ತಿರುವ ದೀನ ದುಃಖಿಯರಾದ ವಿತಂತು ಭಗಿನಿಯರಲ್ಲಿ ನಮ್ಮವರು ನಮ್ಮ ನಮ್ಮ ಭ್ರಾತೃವರ್ಗೀ ಯರೂ, ತೋರಿಸ ಬೇಕಾದ ವಿಶ್ವಾಸ ಗೌರವ ಇದನ್ನು ಕುರಿತು ವಿಚಾರ ಮಾಡುವುದು.

ಸತಿ ಹಿತೈಷಿಣಿ ಗ್ರಂಥಮಾಲೆಯಲ್ಲಿ ಪ್ರಕಟಿಸಿರುವ "ನಭಾ" ಕಾದಂಬರಿಯ "ಸವಿನಯ ನಿವೇದನ"ದಲ್ಲಿ ನಂಜನಗೂಡು ತಿರುಮಲಾಂಬಾ ಹೇಳಿರುವ ಮಾತುಗಳು:

ಈವರೆಗೆ ಸರ್ವ ಸಾಧಾರಣವಾಗಿ ಸ್ತ್ರೀಯರ ಸ್ವಭಾವವು ಯಾವ ಬಗೆಯದಾಗಿರುವುದು, ಅವರಲ್ಲಿ ಆವ ಬಗೆಯ ಶಿಕ್ಷಣ ಕೊಟ್ಟರೆ ಅವರಲ್ಲಿರುವ ಜನ್ಮಸಿದ್ಧ ವಾದ ಸುಗುಣಗಳು ವಿಕಾಸ ಹೊಂದಿ ದುರ್ಗುಣಗಳು ಅಳಿದು ಹೋಗುವುವು, ಆಯುಷ್ಯದಲ್ಲಿ ಅವರ ಧ್ಯೇಯವು ಆವ ಬಗೆಯದಾಗಿರಬೇಕು, ಈಗಿನ ಅವರ ಸಾಮಾಜಿಕ ಸ್ಥಿತಿಯಲ್ಲಿ ಆದಾವ ಸುಧಾರಣೆಗಳಾಗುವುದು ಇಷ್ಟವಾದುದು ಇದೇ ಮೊದಲಾದ ಸ್ತ್ರೀಯರ ಹಿತಾ ಹಿತದ ಅನೇಕ ಪ್ರಶ್ನೆಗಳು ವಿಚಾರವನ್ನು ಪುರುಷರೇ ಮಾಡುತ್ತ ಬಂದಿದ್ದು ಬೇರೆ ಬೇರೆಯವರು ತಮ ತಮಗೆ ಸರಿ ತೋರಿದಂತೆ ಭಿನ್ನ ಭಿನ್ನವಾದ ತಮ್ಮ ಅಭಿಪ್ರಾಯ ಗಳನ್ನು ಪ್ರಕಟಿಸುತ್ತಲಿರುವರು. 'ಸನಾತನ ಧರ್ಮಾಭಿ ಮಾನಿ'ಗಳೆಂದು ಹೇಳಿಕೊಳ್ಳುವ ಹಲವರು, 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬ ಮನುವಿನ ವಾಕ್ಯ ಮುಂದೆ ಮಾಡಿ ಸ್ತ್ರೀಯರನ್ನು ಆಮರಣಾಂತ ಪರವಶತೆಯ ಪಾಕದಲ್ಲಿ ನೂಕಲು ಯತ್ನಿಸುತ್ತಿದ್ದರೆ, ವ್ಯಕ್ತಿ ಸ್ವಾತಂತ್ರ್ಯದ ಪುರಸ್ಕರ್ತೃಗಳಾದ ಹಲವರು ಸ್ತ್ರೀಯರಿಗೆ ಸ್ವಾತಂತ್ರ್ಯ ಸಾಮ್ರಾಜ್ಯವನ್ನು ಸಂಪಾದಿಸಿ ಕೊಡಲು ಉದ್ಯುಕ್ತರಾಗಿರುವರು "ಪುರುಷರಂತೆ ಸ್ತ್ರೀಯರಿಗೆ ಶಿಕ್ಷಣ ವನ್ನು ಕೊಟ್ಟರೆ ಅವರ ಆಚಾರ ವಿಚಾರಗಳು ಭ್ರಷ್ಟ ವಾಗಿ ಅವರು ಸ್ವೈರ ವೃತ್ತಿಯವರಾಗುವರೆಂದು" ಹಲವರು ಪ್ರತಿಪಾದಿಸುತ್ತಿದ್ದರೆ, 'ಸ್ತ್ರೀಯರ ಶಿಕ್ಷಣದ ಅಭಾವಕ್ಕಾಗಿಯೇ ಕುಟುಂಬ ಸುಖವು ನಷ್ಟವಾಗಿರುವು ದಲ್ಲದೆ ಅರ್ಧ ಸಂಖ್ಯಾಕರಾದ ಸ್ತ್ರೀಯರ ಅಜ್ಞಾನ ಮೂಲಕವಾಗಿ ರಾಷ್ಟ್ರದ ಪ್ರಗತಿಯ ಹೆಚ್ಚು ಮುಂದರಿಸ ದಂತಾಗಿರುವುದೆಂದು' ಹಲವರು ಕನಿಕರ ಪಡುತ್ತ ಲಿರುವರು.

ಸಾರಾಂಶವೇನೆಂದರೆ, ಸ್ತ್ರೀಯರ ಉನ್ನತಿ ಅವನತಿ ಗಳ ಪ್ರತಿಯೊಂದು ವಿಚಾರದಲ್ಲಿಯೂ ಪುರುಷ ಲೇಖಕ ರಲ್ಲಿ ಈ ರೀತಿಯಾಗಿ ಭಿನ್ನಮತವು ಕಂಡು ಬರುತ್ತಲಿರು ವುದು. ಈ ಬಗೆಯ ಭಿನ್ನ ಮತವು ಪುರುಷ ವರ್ಗದ ವರಲ್ಲಿ ಕಂಡು ಬರುವುದಕ್ಕೆ ಸ್ತ್ರೀಯರ ಬುದ್ಧಿ ಮನಸ್ಸು, ಅಂತಃಕರಣಗಳ ಪ್ರಾಕೃತಿಕ ರಚನೆ ಸ್ವಭಾವಗಳ ವಿಷಯ ಕವಾಗಿಯೂ ಸಾವಿರಾರು ವರ್ಷಗಳಿಂದ ಅನುವಂಶಿಕ ವಾಗಿ ಅವರ ಮನಸ್ಸಿನ ಮೇಲೆ ಉಂಟಾಗಿರುವ ಸಂಸ್ಕಾರ ವಿಷಯಕವಾಗಿಯೂ ಪುರುಷರಿಗಿರುವ ಅಪೂರ್ಣವಾದ ಪರಿಚಯವೇ ಕಾರಣವಾಗಿರುವುದೆಂಬುದು ನಮ್ಮ ಮತ ವಾಗಿರುವುದು.

ಸ್ವಲ್ಪದರಲ್ಲಿ ಹೇಳುವುದೆಂದರೆ, ಆರ್ಯಸ್ತ್ರೀಯರ ಸ್ವಾಭಾವಿಕವಾದ ಧ್ಯೇಯವು ಅವುದಾಗಿರಬೇಕು, ಅವರ ಬೌದ್ಧಿಕ–ಮಾನಸಿಕ- ಆತ್ಮಿಕ ಉನ್ನತಿಯಾಗಬೇಕಾದರೆ ಅವರಿಗೆ ಆವ ಬಗೆಯ ಶಿಕ್ಷಣದ ಅವಶ್ಯಕತೆಯಿರುವುದು ಈಗಿನ ಸಮಾಜ ಸ್ಥಿತಿಯಲ್ಲಿ ಅವರ ಪ್ರಗತಿಗೆ ವಿರೋಧ ಕರವಾಗಿರುವ ಆಚಾರ ವಿಚಾರಗಳಾವುವು ಮತ್ತು ಅವು

ಗಳನ್ನು ಆವ ಬಗೆಯಾಗಿ ಸುಧಾರಿಸಬೇಕು ಈ ಮುಂತಾದ ವಿಷಯಗಳನ್ನು ಚರ್ಚಿಸುವ ಅಧಿಕಾರವು ವಿಚಾರಪರರಾದ ಸ್ತ್ರೀಯರಿಗೆ ವಿಶೇಷವಾಗಿರುವುದು. ಅಂಥ ವಿಚಾರಶಕ್ತಿಯು ನಮ್ಮಲ್ಲಿಲ್ಲದಿದ್ದರೂ ಪ್ರಚಲಿತ ಸ್ಥಿತಿಯಲ್ಲಿರುವ ನಮ್ಮ ಸಮಾಜದ ಸುಸ್ಥಿತಿ ದುಸ್ಥಿಗಳ ವಿಷಯಕವಾಗಿ ನಾವು ನಮ್ಮ ಶಕ್ತ್ಯಾನುಸಾರವಾಗಿ ವಿಚಾರ ಮಾಡಿದ ನಮ್ಮ ವಿಚಾರಗಳನ್ನು ಜನರ ಮುಂದೆ ಇಡುವುದು ನಮ್ಮ ಕರ್ತವ್ಯವಾಗಿರುವುದೆಂದು ತಿಳಿದು 'ಸತೀ ಹಿತೈಷಿಣಿ ಗ್ರಂಥಮಾಲೆ' ಪ್ರಕಟಿಸಲು ಉದ್ಯುಕ್ತರಾಗಿರುವೆವು.

**ಶಿಶು ಮರಣ**

ಕರ್ನಾಟಕ ನಂದಿನಿ (ಸಂಪುಟ 3, ಸಂಚಿಕೆ 3, ಜನವರಿ 1920) ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿರುವ ಶಿಶುಗಳ ಯೋಗಕ್ಷೇಮ" ಲೇಖನದಲ್ಲಿ ಭಾರತದಲ್ಲಿ. ಶಿಶುಗಳ ಮರಣ ಸಂಖ್ಯೆ ಹೆಚ್ಚಳದ ಬಗ್ಗೆ ಆತಂಕ ವ್ಯಕ್ತ ಪಡಿಸಲಾಗಿದೆ. ಇದಕ್ಕೆ (1) ಬಡತನ (2) ವಾತಾವರಣ ಮಾಲಿನ್ಯ ಅಲ್ಲದೆ (3) ಬಾಲ್ಯ ವಿವಾಹ ದೊಡ್ಡ ಕಾರಣ ಎಂದು ವಿಶ್ಲೇಷಿಸಲಾಗಿದೆ. "ಮೊದಲೇ ಅಶಕ್ತ ಶರೀರವುಳ್ಳ ಹಾಗೂ ಜಗತ್ತಿನ ಅನುಭವವಿಲ್ಲದ ಹುಡುಗಿಯು ತೀವ್ರವೇ ಶಿಶುವಿನ ತಾಯಿಯಾಗುವಳು. ಬಳಿಕ ಆ ಹುಡುಗಿಗೆ ಸಾಕಷ್ಟು ಪೋಷಣೆ ಸಿಗುವುದಿಲ್ಲ. ಮತ್ತು ಅಶಕ್ತನಾದ ಎಳೇ ತರುಣನ ಬೀಜವು ಸಶಕ್ತವಾಗದಿರುವುದರಿಂದ ಮುಂದೆ ಹುಟ್ಟುವ ಶಿಶುವಿನಲ್ಲಿ ಕೂಡ ತ್ರಾಣವು ಬರುವುದಿಲ್ಲ. ಆದುದರಿಂದ ಕೂಡಲೇ ಶಿಶುಗಳ ಅಂತವಾಗುವುದು. ಈ ಬಾಲ ವಿವಾಹದ ದುಷ್ಟ ಪರಿಣಾಮುಗಳು ಇನ್ನೂ ಅನೇಕವಿರುವವು. ಎಷ್ಟೋ ಜಾತಿಗಳಲ್ಲಿ ಪರದೆ (ಘೋಷೆ) ರಿವಾಜವಿರುವುದರಿಂದ ಸ್ವಚ್ಛ ಹವೆ ಬೆಳಕು ಇವುಗಳು ದೊರಕುವುದಿಲ್ಲ. ಆದುದರಿಂದ ಆ ಸ್ತ್ರೀಯರ ಆರೋಗ್ಯತೆಯು ಕೆಟ್ಟು ಶಿಶುಗಳಿಗೆ ಬಹು ತೊಂದರೆಯಾಗುವುದು. ನಮ್ಮ ಹಿಂದು ಸ್ತ್ರೀಯರು ಸುಶಿಕ್ಷಿತರಾಗಿರುವುದಿಲ್ಲವಾದುದರಿಂದ ಅವರಿಗೆ ಮಕ್ಕಳಿಗೆ ತಕ್ಕ ಲಾಲನೆ ಪೋಷಣೆ ಉಪಚಾರಗಳನ್ನು ಮಾಡಲಿಕ್ಕೆ ಬರುವುದಿಲ್ಲ."

ಶಿಶು ಮರಣ ನಿವಾರಣೆಗೆ ನೀಡಲಾಗಿರುವ ಸಲಹೆಗಳು : "ವೈದ್ಯಕೀಯ ಕಲಿಯುವುದಕ್ಕೆ ಹಿಂದು ಹೆಂಗಸರಿಗೆ ಉತ್ತೇಜನಕೊಟ್ಟು ಅವರಿಗೆ ಆ ಉದ್ಯೋಗವು ರುಚಿ ಹತ್ತುವಂತೆ ಏರ್ಪಾಡುಗಳನ್ನು ಮಾಡಬೇಕು. ಹೆಣ್ಣು ಹುಡುಗಿಯರಿಗೂ ಗಂಡು ಹುಡುಗರಿಗೂ ಉತ್ತಮ ಶಿಕ್ಷಣವನ್ನು ಕೊಟ್ಟು ಅವರನ್ನು ಉದ್ಯೋಗಗಳಲ್ಲಿ ತೊಡಗಿಸಿ ಅವರಿಗೆ ಹೊಟ್ಟೆ ತುಂಬ ಅನ್ನ ಸಿಗುವ ವ್ಯವಸ್ಥೆ ಮಾಡಬೇಕು. ಉತ್ತಮ ತಾಯಿಯರನ್ನು ತಯಾರು ಮಾಡುವುದಕ್ಕೆ ಹೆಣ್ಣುಮಕ್ಕಳ ಶಾಲೆಗಳನ್ನು ತೆಗೆದು ಅಲ್ಲಿ ಶಿಶು ಸಂಗೋಪನಕ್ಕೆ ತಕ್ಕ ವೈದ್ಯಕೀಯ ಕಲಿಸಬೇಕು. ಶಿಶುಗಳ ರಕ್ಷಣವು ಬೇರೆ ಬೇರೆ ದೇಶಗಳಲ್ಲಿ ಹೇಗೆ ಮಾಡಲ್ಪಡುತ್ತದೆಂಬುದನ್ನು ತಿಳಿದುಕೊಳ್ಳಲಿಕ್ಕೆ ಅನೇಕ ಪುಸ್ತಕಗಳ ಹಾಗೂ ವೃತ್ತಾಂತ ಪತ್ರಿಕೆಗಳ ಸಂಗ್ರಹಾಲಯ ಸ್ಥಾಪಿಸಬೇಕು. ಇವೆಲ್ಲ ಕೆಲಸಗಳಿಗೆ ಸಾಕಷ್ಟು ಫಂಡನ್ನು ಕೂಡಿಸಿ ಹೆಣ್ಣು ಮಕ್ಕಳಿಗೆ ತಕ್ಕ ಶಿಕ್ಷಣವನ್ನು ಕೊಡಲಿಕ್ಕೆ ಸಾಮರ್ಥ್ಯವುಳ್ಳ ಬುದ್ಧಿವಂತರಾದ ಶಿಕ್ಷಕರನ್ನು ನಿಯಮಿಸಬೇಕು. ●

---

## ಯಾಕ್ಹೀಗೆ ಮಾಡುವರು?

ಬೆಳವ ಕುಡಿಕಿತ್ತು ಬಿಸುಡಿಹರು
ಬಿಸುಟಲ್ಲೇ
ಬೇರ
ಬಿಟುಕೊಂಡು
ಮತ್ತೊಂದು ಚಿಗುರೊಡೆದರೆ
ಚಿಗುರನ್ನೇ
ಮೊಟಕಿಸುವರು
ಗೊಬ್ಬರ, ನೀರಿಲ್ಲದೆ
ಕೊಬ್ಬಿ
ಬೆಳೆದರೂ
ಬೆಳೆವುದಕ್ಕೆ ಅಪೂಟು
ಮಣ್ಣೋ ಇಲ್ಲದಂತೆ
ಮಾಡುವರು
ಯಾಕ್ಹೀಗೆ ಮಾಡುವರು ?
ಏನಿವರ
ಸೊಕ್ಕು ?

ವಿ.ಎಲ್. ಚಂದ್ರಮತಿ

# ನ್ಯಾಯಾಲಯ

## ಕುರುಡು ಕಾನೂನು

ಪುರುಷಪ್ರಾಧಾನ್ಯತೆಯನ್ನು ಸ್ಥಾಪಿಸಿಕೊಳ್ಳುವ ಕ್ರೌರ್ಯಗಳಲ್ಲಿ ಅತ್ಯಾಚಾರ ಒಂದು. ಹೆಣ್ಣು ಗಂಡಿನ ಆಸ್ತಿ ಎಂದು ಪರಿಗಣಿಸುವ ಭಾರತದಂಥ ಸಂಪ್ರದಾಯ ದೇಶದಲ್ಲೂ ಅವಳ ಅತ್ಯಾಚಾರವೆಸಗುವ ಅಮಾನುಷ ಘಾತುಕವನ್ನು ಶಿಕ್ಷಿಸಲು ಬಲವಾದ ಕಾನೂನಿಲ್ಲ. ರಮೀಜಾಬೀ ಕೇಸಿನಿಂದ ಹಿಡಿದು ಇಂದಿನವರೆಗೂ ಎಲ್ಲಾ ಅತ್ಯಾಚಾರ ಕೇಸುಗಳಲ್ಲೂ ಅಪರಾಧಿಗಳು ಬಿಡುಗಡೆಯಾಗಿದ್ದಾರೆ.

ಸುಮಾರು ಮೂರು ವರ್ಷದ ಹಿಂದೆ ಕೌಡೇನಹಳ್ಳಿಯಲ್ಲಿ ನಡೆದ ಅತ್ಯಾಚಾರ ಘಟನೆಯ ಬಗ್ಗೆ ತೀರ್ಪು ಇತ್ತೀಚೆಗೆ ಬೆಂಗಳೂರು ಸಿವಿಲ್ ಕೋರ್ಟಿನಲ್ಲಿ ನೀಡಲಾಗಿದೆ. ಕೇವಲ 15ವರ್ಷದ ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ 20ವರ್ಷದ ಯುವಕನೊಬ್ಬ ಅತ್ಯಾಚಾರವೆಸಗಿದ್ದಾನೆಂಬುದು ದೂರು. ಬಲಹೀನ ಸಾಕ್ಷ್ಯಾಧಾರಗಳಿಂದಾಗಿ, ಅತ್ಯಾಚಾರ ನಡೆದಿರುವುದು ಸಾಬೀತಾಗದೆ ಆರೋಪಿತನು ಶಿಕ್ಷೆ ತಪ್ಪಿಸಿಕೊಂಡಿದ್ದಾನೆ. ಸಾಕ್ಷ್ಯಾಧಾರಗಳು ದೊರೆಯುವ ಸಾಧ್ಯತೆಗಳಿಲ್ಲದ ಅತ್ಯಾಚಾರ ಘಟನೆಗಳಲ್ಲಿ, ರುಜುವಾತು ಮಾಡಬೇಕಾದ ಹೊಣೆ, ಅಂಶಗಳ ಬಗ್ಗೆ ಇಂದಿನ ಕಾನೂನು ಕುರುಡಾಗಿದೆ.

ಕೌಡೇನಹಳ್ಳಿಯ ಒಂದು ಹೊದೋಟದಲ್ಲಿ ಕೂಲಿ ಮಾಡುವ ಕೆಂಪಮ್ಮ ಮಧ್ಯಾಹ್ನ ಸುಮಾರು ಎರಡು ಘಂಟೆಗೆ ಊಟಕ್ಕಾಗಿ ಮನೆಗೆ ಬರುವಾಗ ರಾಮಕೃಷ್ಣ ಹಿಂಬಾಲಿಸಿ, ಕೈ ಹಿಡಿದೆಳೆದು, ಬಾಯಿಗೆ ಬಟ್ಟೆ ತುರುಕಿ, ಒಂದು ಪೊದೆಯಲ್ಲಿ ಅತ್ಯಾಚಾರವೆಸಗಿದ್ದಾನೆಂದು ಆರೋಪಿಸಲಾಗಿದೆ. ಮುಂದೆ ಹೋಗುತ್ತಿದ್ದ ಮಂಜಮ್ಮ, ಲಗುವಮ್ಮ ಮತ್ತು ಆಂಜನಮ್ಮ, ಕೆಂಪಮ್ಮ ಕಿರುಚಿದ್ದನ್ನು ಕೇಳಿದ್ದಾರೆ. ಆದರೆ, ಹಿಂದಿರುಗಿ ನೋಡಿದಾಗ ಏನೂ ಕಾಣಲಿಲ್ಲವಾದ್ದರಿಂದ ಅವರು ಹೊರಟು ಹೋದರು. ನಂತರ ಕೆಂಪಮ್ಮ ಮನೆಗೆ ಬಂದು ತಾಯಿಗೆ ವಿಷಯ ತಿಳಿಸಿದ್ದಳು. ಅವಳ ಮುಖ ಮತ್ತು ಮರ್ಮಾಂಗದ ಮೇಲೆ ಗಾಯಗಳಾಗಿದ್ದವು ಎನ್ನಲಾಗಿದೆ. ತಕ್ಷಣವೇ ಅವಳ ತಂದೆ ಪೋಲೀಸರಿಗೆ ದೂರು ನೀಡಿದ್ದಾರೆ.

ಕೆಂಪಮ್ಮನನ್ನು ಪರೀಕ್ಷಿಸಿದ ವೈದ್ಯರ ವರದಿ ಪ್ರಕಾರ ಕೆಂಪಮ್ಮನಿಗೆ 15 ವರ್ಷ ವಯಸ್ಸು, ಇನ್ನೂ ಋತುಮತಿಯಾಗಿಲ್ಲ. ಅವಳ ಮುಖ ಅಥವಾ ಶರೀರದ ಯಾವ ಭಾಗದಲ್ಲೂ ಗಾಯಗಳು ಕಾಣಲಿಲ್ಲ. ಹಾಗೂ ಅವಳು ಸಂಭೋಗದಂಥ ಕ್ರಿಯೆಗೆ ಈಗಾಗಲೇ ಒಳಪಟ್ಟಿದ್ದಾಳೆ. ಅವಳ ಯೋನಿ ಪದರ (Hymen) ಹರಿದಿದೆ. ಯೋನಿಯಲ್ಲಿ ವೀರ್ಯಾಣುಗಳು ಕಂಡು ಬಂದಿಲ್ಲ. ಪೋಲೀಸರ ತಪಾಸಣೆಯಲ್ಲಿ ಅತ್ಯಾಚಾರ ನಡೆದಿದೆ ಎನ್ನುವ ಸ್ಥಳದಲ್ಲಿ ಹುಲ್ಲು ಅಸ್ತವ್ಯಸ್ತಯಾಗಿ ಅನುಮಾನಕ್ಕೆಡೆಯಾಗಿದೆ. ಆದರೆ, ಅವಳ ಬಾಯಲ್ಲಿ ತುರುಕಿದ ಬಟ್ಟೆ ಕಾಣಲಿಲ್ಲ.

ನೇರ ಮತ್ತು ಸಾಂದರ್ಭಿಕ ಸಾಕ್ಷ್ಯಾಧಾರಗಳೂ ಸಹಾ ಅತ್ಯಾಚಾರವನ್ನು ರುಜುಪಾತು ಪಡಿಸಲು ಸೋತಿವೆ ಎಂದು ತೀರ್ಪು ನೀಡಲಾಗಿದೆ. ಸುಮಾರು ನಾಲ್ಕು ವರ್ಷದ ಹಿಂದೆ ರಾಮಕೃಷ್ಣ ಮತ್ತು ಕೆಂಪಮ್ಮನ ತಂದೆಯ ನಡುವೆ ನಡೆದ ಸಣ್ಣ ಘಟನೆಯ ಕಾರಣವಾಗಿ ವೈಷಮ್ಯದಿಂದ ರಾಮಕೃಷ್ಣನ ಮೇಲೆ ಅತ್ಯಾಚಾರದ ಆಪಾದನೆ ಮಾಡಿದಂತೆ ನಿರ್ಧಾರ ಮಾಡಲಾಗಿದೆ, ಆದರೆ, ಇದಕ್ಕೆ ಯಾವ ಆಧಾರವೂ ಇಲ್ಲ.

ಈ ಹಿನ್ನೆಲೆಯಲ್ಲಿ ಹಲವಾರು ಪ್ರಶ್ನೆಗಳು ಏಳುತ್ತವೆ. ಕಾನೂನು ತಿಳಿದವರು ಅಥವಾ ತಿಳಿಯದವರೂ ಸಹಾ ಸಂಶಯಪಡುವ ಅಂಶಗಳು ಅನೇಕ. ಕಾನೂನಿನ ಪರಿಧಿಯಲ್ಲಿ ಮಾತ್ರವಲ್ಲದೆ ಧಾರ್ಮಿಕ ಹಾಗೂ ಸಂಪ್ರದಾಯಬದ್ಧ ಸಮಾಜದಲ್ಲಿನ ಕಟ್ಟುನಿಟ್ಟಿನ ಪ್ರಭಾವದಲ್ಲಿ ಅಡಗಿರುವ ಸಂಗತಿಗಳು ನ್ಯಾಯಾಲಯ ನೀಡಿದ ತೀರ್ಪಿಗೆ ಅನುಗುಣವಾಗಿಲ್ಲ.

ಸಾಮಾನ್ಯವಾಗಿ ಎಲ್ಲ ಅತ್ಯಾಚಾರ ಕೇಸುಗಳಲ್ಲಿ ಪರೀಕ್ಷೆಗೆ ಒಳಪಡುವ ಮೊದಲನೆಯ ವಿಷಯ ಯೋನಿ

ಪದರ ಹರಿದಿದೆಯೇ ಎನ್ನುವುದು. ಅಲ್ಲದೆ, ಅತ್ಯಾಚಾರ ನಡೆದಿದೆ ಎನ್ನುವುದನ್ನು ಧೃಡಪಡಿಸಿಕೊಳ್ಳುವ ಜವಾಬ್ದಾರಿಯೂ ಆವಳ ಮೇಲಿದೆ. ಪ್ರಾಯಕ್ಕೆ ಬಾರದೆ ಇರುವ ಓರ್ವ ಬಾಲಕಿಯ ವಿಷಯದಲ್ಲಿ ಇದು ಎಷ್ಟು ಸಮಂಜಸವಾಗಬಹುದು? ಯೋನಿ ಪದರ ಹರಿಯಲು ನಾನಾ ಕಾರಣಗಳಿರಬಹುದೆನ್ನುವುದು ಇಂದು ಎಲ್ಲರಿಗೂ ತಿಳಿದ ವಿಷಯ.

ನಮ್ಮ ಸಮಾಜದಲ್ಲಿ ಏಳು ಜನ ಮಕ್ಕಳಿರುವ ಕೆಂಪಮ್ಮನ ತಂದೆಯಂಥ ಮನೆಯವರು ಯಾವುದೇ ವ್ಯಕ್ತಿಯ ಮೇಲೆ ಸೇಡು ತೀರಿಸಿಕೊಳ್ಳಲು ಮಗಳ ಮಾನವನ್ನು ಬೀದಿಗೆ ಹಾಕಿ, ವರ್ಷಗಟ್ಟಳೆ ಕೋರ್ಟಿನ ಸುತ್ತ ಅಲೆಯುವುದು ಅಸಹಜ ಮತ್ತು ಅಸಾಧ್ಯ. ಲೈಂಗಿಕ ಜೀವನ ಪರಿಜ್ಞಾನವಿಲ್ಲದಬಾಲಕಿಯು ಕೇಸಿನಲ್ಲೂ ಸಹಾ ಅವಳು ಮೊದಲೇ ಸಂಭೋಗದ ಅನುಭವ ಪಡೆದಿದ್ದಾಳೆಯೇ ಎಂದು ಪರೀಕ್ಷಿಸುವುದು ಪುರುಷ ಪ್ರಧಾನ ಸಮಾಜ ಹೆಣ್ಣಿನ ಬಗ್ಗೆ ತಾಳಿರುವ ಅಮಾನವೀಯ ದೃಷ್ಟಿಗೆ ಪ್ರತ್ಯಕ್ಷ ಸಾಕ್ಷಿ.

ಘಟನೆ ನಡೆದಾಗ ಆಪಾದಿತನು ಎಲ್ಲಿ ಇದ್ದ, ಏನು ಮಾಡುತಿದ್ದ, ಇದಕ್ಕೆ ಸಾಕ್ಷ್ಯಗಳೇನು ಅನ್ನುವ ವಿಷಯ ಗಳು ವಿಚಾರಣೆಗೆ ಬಂದಿಲ್ಲ. ಅವಳ ಮಾನಸಿಕ ಸ್ಥಿತಿ, ತಿಳುವಳಿಕೆ ಇತ್ಯಾದಿಯ ಬಗ್ಗೆ ಗಮನ ನೀಡಿಲ್ಲ.


ಕೇವಲ ಒಂದೆರಡು ಅಂಶಗಳನ್ನು ಆಧಾರಿಸಿ ಸ್ತ್ರೀ ಅತ್ಯಾಚಾರದ ವಿಷಯುವನ್ನು ಬಗೆಹರಿಸುವ ನಮ್ಮ ನ್ಯಾಯಸೂತ್ರಗಳು ಪರಿಹಾಸಾಸ್ಪದವಾಗಿವೆ. ಅಪರಾಧ ವೆಸಗಿದ ಗಂಡಿನ ಹಿನ್ನೆಲೆ, ಅವನ ವ್ಯಕ್ತಿತ್ವ, ಜೀವನ, ಮಾನಸಿಕ ಸ್ಥಿತಿಗಳ ಬಗ್ಗೆ ವಿಚಾರಿಸದೆ, ಮೇಲ್ಪದರ ಗಳಲ್ಲಿ, ಯಾಂತ್ರಿಕವಾಗಿ ಪರೀಕ್ಷೆ ನಡೆಸಿ ಹೆಣ್ಣಿನ ಸ್ಥಾನ-ಮಾನಗಳನ್ನು ನ್ಯಾಯದ ಹೆಸರಿನಲ್ಲಿ ಹರಾಜು ಹಾಕು ವುದು ಮಾನವ ಕುಲಕ್ಕೆ ಅವಮಾನಕರ,

**ದಿವಿಜಾ**

---

## ಬಿಂಬ–ಪ್ರತಿಬಿಂಬ

ಅವಳಂತೆ ಇವಳು
ಇವಳಂತೆ ಅವಳು
ಅಂದ ; ಚೆಂದ
ನೋಡುವುದರಲ್ಲೇ
ಕಣ್ಮಿಟುಕಿಸಿ ಬಿಂಬಿಸಿ
ಮೈ, ತುಂಬುವುದರಲ್ಲೇ
ಹೊತ್ತು ; ಕಂದಿತ್ತಾದರೂ
ಪರಸ್ಪರರ ತಿಳುವಳಿಕೆ
ತಿಳಿಗೊಳ್ಳುವುದರಲ್ಲೇ.......
ಅವಳ–ಇವಳ
ಆಯುಸ್ಸು–ತೀರಿ
ಬಂದದ್ದು
ಎಂಥಾ......?
ವಿಪರ್ಯಾಸ !



**ನಿರ್ಮಲ ಅನವಟ್ಟಿ**

---

# ಆರೋಗ್ಯ

## ಒಂದು ಬರ್ಬರ ಸಂಪ್ರದಾಯ

**"ಆಫ್ರಿಕನ್ ದೇಶಗಳಲ್ಲಿ ಬಳಕೆಯಲ್ಲಿರುವ ಈ ಅಮಾನುಷ ಪದ್ಧತಿ ಜಗತ್ತಿನ ಪ್ರಜ್ಞಾವಂತ ಮಹಿಳೆಯರ ಪ್ರತಿಭಟನೆಗೆ ಗುರಿಯಾಗಿದೆ"**

ಪುರುಷನಿಗಿಂತ ಸ್ತ್ರೀಯರು ಕೀಳು, ಎಂಬ ಧೋರಣೆಯಿಂದಾಗಿ ಶತಮಾನಗಳಿಂದಲೂ ಸ್ತ್ರೀಯರ ಜೀವನದ ನಾನಾ ಆಯಾಮಗಳ ಮೇಲೆ ಹಲವಾರು ರೀತಿಯ ಕಟ್ಟು ಕಟ್ಟಳೆಗಳನ್ನು, ನಿರ್ಬಂಧಗಳನ್ನು ಹೇರಲಾಗುತ್ತಿದೆ. ಇಂಥಹ ಕಟ್ಟು ಪಾಡುಗಳು ಬೇರೆ ಬೇರೆ ದೇಶಗಳಲ್ಲಿ ವಿಭಿನ್ನ ರೀತಿಯಲ್ಲಿ ಬಳಕೆಯಲ್ಲಿವೆ. ಆಫ್ರಿಕನ್ ದೇಶಗಳಲ್ಲಿ ಸ್ತ್ರೀಯರ ಲೈಂಗಿಕತೆಗೆ ಕಡಿವಾಣ ಹಾಕುವ ಒಂದು ಬರ್ಬರ ಸಂಪ್ರದಾಯವೊಂದು ಬಳಕೆಯಲ್ಲಿದೆ. ಸ್ತ್ರೀಯರ ಲೈಂಗಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸುವ ಅಂಗವಾದ ಚಂದ್ರನಾಡಿಯನ್ನು (CLITORIS) ತೆಗೆದು ಹಾಕುವ ಈ ಬರ್ಬರ ಕೃತ್ಯವು ಜಗತ್ತಿನ ಪ್ರಜ್ಞಾವಂತ ಮಹಿಳೆಯರ ಪ್ರತಿಭಟನೆಗೆ ಗುರಿಯಾಗಿದೆ. ''FEMALE CIRCUMCISION'' ಎಂದು ಕರೆಯಲ್ಪಡುವ ಈ ಶಸ್ತ್ರಕ್ರಿಯೆಗೆ ಒಳಗಾಗುವ 70 ಲಕ್ಷಕ್ಕೂ ಹೆಚ್ಚು ಆಫ್ರಿಕನ್ ಮಹಿಳೆಯರು ತೀವ್ರವಾದ ತೊಂದರೆಗಳಿಗೆ ಒಳಗಾಗುತ್ತಿದ್ದಾರೆಂದು ಜಾಗತಿಕ ಆರೋಗ್ಯ ಸಂಸ್ಥೆಯು ಜುಲೈನಲ್ಲಿ ಪ್ರಕಟಿಸಲಾದ ವರದಿಯೊಂದರಲ್ಲಿ ತಿಳಿಸಲಾಗಿದೆ.

ಈ ಕುರುಡು ನಂಬಿಕೆಗೆ ದಿನನಿತ್ಯವೂ ಸಾವಿರಾರು ಮಹಿಳೆಯರು ಬಲಿಯಾಗುತ್ತಿದ್ದಾರೆ. ಜೀವನ ಪರ್ಯಂತ ದೈಹಿಕ ನೋವಿನಿಂದ ನರಳುತ್ತಿದ್ದಾರೆ. ಅನಾರೋಗ್ಯದಿಂದ ಕೃಶವಾಗುತ್ತಾ ಕೊನೆಗೆ ಮೃತ್ಯುವಿನ ದವಡೆಗೆ ಸಿಲುಕುತ್ತಾರೆ.

ಚಂದ್ರನಾಡಿಯನ್ನು ಭಾಗಶಃ ಅಥವಾ ಸಂಪೂರ್ಣವಾಗಿ ತೆಗೆಯುವ ಈ ದುಷ್ಟ ಶಸ್ತ್ರಕ್ರಿಯೆಯನ್ನು ಅಶುಚಿಯಾದ, ಅನಾರೋಗ್ಯಕರ ವಾತಾವರಣದಲ್ಲಿ ಮಾಡಲಾಗುತ್ತದೆ. ಅಪರಿಣಿತ ನರ್ಸುಗಳು ಸ್ಥಳೀಯ ಅನಸ್ಥೀಶಿಯಾವನ್ನು ಸಹ ಕೊಡದೆ ನೆರವೇರಿಸುತ್ತಾರೆ.

ಈ ಶಸ್ತ್ರಕ್ರಿಯೆಗೆ ಒಳಗಾದ ಗರ್ಭಿಣಿ ಮಹಿಳೆಯರು ದೀರ್ಘ ಕಾಲದ ಹೆರಿಗೆ ನೋವನ್ನು ತಿನ್ನುತ್ತಾರೆ. ಇದು ಭ್ರೂಣದ ಮೆದುಳನ್ನು ನಾಶಪಡಿಸುವುದು ಮಾತ್ರವಲ್ಲದೆ, ಕೆಲವೊಮ್ಮೆ ಗರ್ಭಪಾತಕ್ಕೂ ಕಾರಣವಾಗುತ್ತದೆ. ಬಹುಪಾಲು ಮಹಿಳೆಯರು ಬಂಜೆತನದಿಂದ ನರಳುತ್ತಾರೆ. ಸೂಡಾನ್‌ನಲ್ಲಿ ನೂರು ಮಹಿಳೆಯರಲ್ಲಿ 25 ಜನ ಮಹಿಳೆಯರ ಬಂಜೆತನಕ್ಕೆ ಈ ಅಮಾನುಷ ಪದ್ಧತಿಯು ಕಾರಣವಾಗಿದೆಯೆಂಬುದು ತಜ್ಞರ ಅಭಿಪ್ರಾಯ.

ಈ ಪದ್ಧತಿಯು ಆಫ್ರಿಕನ್, ದೇಶಗಳಲ್ಲಿ ವ್ಯಾಪಕವಾಗಿದ್ದರೂ, ಮುಂದುವರಿದ ಬ್ರಿಟನ್ ಮತ್ತು ಅಮೇರಿಕ ದೇಶಗಳಲ್ಲೂ ಬಳಕೆಯಲ್ಲಿದೆಯೆಂದು ಹೇಳಲಾಗುತ್ತಿದೆ. ಮನಸ್ಸಿನ ಅಸ್ವಸ್ಥತೆಗೆ ಸಂಬಂಧಿಸಿದ ಹಲವಾರು ಕಾಯಿಲೆಗಳಿಗೆ ಈ ಶಸ್ತ್ರಕ್ರಿಯೆಯು ಸಿದ್ಧೌಷಧಿಯೆಂಬ ನಂಬಿಕೆಯೇ ಇಂದೂ ಮಹಿಳೆಯರು ಈ ಪದ್ಧತಿಗೆ ಬಲಿಯಾಗಲು ಪ್ರಮುಖ ಪ್ರೇರಕ ಶಕ್ತಿಯಾಗಿದೆ.

ಇದು ಎಂದು ಜಾರಿಗೆ ಬಂದಿತೆಂಬುದರ ಬಗ್ಗೆ ಸರಿಯಾದ ಆಧಾರಗಳಿಲ್ಲ. ಸ್ತ್ರೀಯರ ಪರಿಶುದ್ಧ ಚಾರಿತ್ರ್ಯವನ್ನು ಕಾಯ್ದುಕೊಂಡು ಬರಲು ಎಂದು ಪ್ರಗತಿಪರರು ವಾದಿಸಿದರೆ, ಸ್ತ್ರೀತತ್ವಕ್ಕೆ ಕಾಲಿಡುವ ಮೊದಲು ನಡೆಸುವ ಒಂದು ರಿಚುಯಲ್ ಎಂದು ಇದನ್ನು ಸಮರ್ಥಿಸಲಾಗುತ್ತಿದೆ.

"ಮುಂದುವರಿದ ನಾಗರೀಕತೆಯ" ಇಂದಿನ ಶತಮಾನದಲ್ಲೂ ಇದು ಪ್ರಚಲಿತದಲ್ಲಿರಲು ಮುಖ್ಯ ಕಾರಣ "ಸಾಮಾಜಿಕ ಮಾನ್ಯತೆ". ಸಾಮಾಜಿಕ ಬಹಿಷ್ಕಾರಕ್ಕೆ ಹಿಂಜರಿಯುವ ಬಹುಪಾಲು ಮಹಿಳೆಯರು ಈ ಕ್ರೂರ ಪದ್ಧತಿಯನ್ನು ಪ್ರತಿಭಟಿಸಲು ಅಸಮರ್ಥರಾಗುತ್ತಿದ್ದಾರೆ.

ಜಾಗತಿಕ ಆರೋಗ್ಯ ಸಂಸ್ಥೆಯ ವರದಿಯು ಇತರ ದೇಶಗಳಲ್ಲಿ ಸ್ತ್ರೀಯರ ಅನಾರೋಗ್ಯಕ್ಕೆ ಕಾರಣವಾಗಿರುವ ಸಂಗತಿಗಳ ಮೇಲೂ ಬೆಳಕು ಚೆಲ್ಲುತ್ತವೆ. ಭಾರತದಲ್ಲಿ "ಹೆರಿಗೆ"ಯ ಕ್ರಿಯೆಯನ್ನು ಅಶುದ್ಧವೆಂದು ಪರಿಗಣಿಸಲಾಗುತ್ತಿದೆ. ಕಗ್ಗತ್ತಲ, ಪ್ರತ್ಯೇಕ, ಅನಾರೋಗ್ಯಕರ ವಾತಾವರಣದಲ್ಲಿ ನಡೆಯುವ ಹೆರಿಗೆ, ಗಂಡುಮಕ್ಕಳಿಗೆ ಪ್ರಾಧಾನ್ಯತೆ ನೀಡುವ ಸಂಪ್ರದಾಯ ಪದ್ಧತಿಗಳು ಹೆಣ್ಣುಮಗುವಿನ ನಿರ್ಲಕ್ಷ್ಯಕ್ಕೆ ಕಾರಣವಾಗುತ್ತಿದೆಯೆಂದು ವರದಿಯು ಸ್ಪಷ್ಟಪಡಿಸುತ್ತದೆ.

# ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮೊದಲ ಬಾರಿಗೆ ಬರೆಯಲು ಯತ್ನಿಸುವ ಲೇಖಕಿ-ಲೇಖಕರಿಗಾಗಿ "ಮೌನ ಮಾತಾದಾಗ" ಅಂಕಣವಿದೆ. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನ ವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗೂ ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿ ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

—ಸಂ. ಮಂಡಳಿ

---

ಆತನ ಹೆಸರು ಚನ್ನಬಸಪ್ಪ. ಕಾಲೇಜ್ ಮೆಟ್ಟಿಲು ಹತ್ತಿ ಇಳಿದಿದ್ದಾನೆ. ಅಪ್ಪನದು ಒಂದಷ್ಟು ತೋಟ ತುಡಿಕೆ ಇದ್ದುದ್ದರಿಂದ ಸರ್ಕಾರಿ ನೌಕರಿಗಾಗಿ ಬಾಯಿಬಿಟ್ಟು ಕುಳಿತುಕೊಳ್ಳದೆ ಅಪ್ಪನ ತೋಟಕ್ಕೆ ಹೆಗಲೊಡ್ಡಿದ. ತಿನ್ನುವುದಕ್ಕೆ ಉಣ್ಣುವುದಕ್ಕೇನು ಕೊರತೆ ಇರಲಿಲ್ಲ. ಅಪ್ಪನ ಬೇಸಾಯದ ಬದುಕಿನ ಹೆಜ್ಜೆಯಲ್ಲಿ ಭವಿಷ್ಯಕ್ಕೆ ಸ್ಥಿರವಾದ ರೂಪು ಕೊಟ್ಟುಕೊಂಡ.

ವಯಸ್ಸು ಬೆಳೆಯಿತು. ಮಗನಿಗೆ ಮದುವೆ ಮಾಡಬೇಕೆಂದು ತಂದೆ-ತಾಯಿಗಳು ನಿರ್ಧರಿಸಿದರು. ಮೊದಲು ಹುಡುಗನಿಗೆ ತನ್ನ ಅಕ್ಕನ ಮಗಳಾದ ಸರಸ್ವತಿಯನ್ನೇ ಕೊಟ್ಟು ಮದುವೆ ಮಾಡಬೇಕು ಎಂದು ತೀರ್ಮಾನಿಸಿದ್ದರು. ಈಗ ಅವನ ಅಕ್ಕ ಭಾವರೆ ಹುಡುಗನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಹುಡುಗ ಕೂಡ ಅಪ್ಪ ಅಮ್ಮನ ಮಾತಿಗೆ ತಾಳ ಹಾಕಿದಳು. (ಹಠ ಹಿಡಿದಿದ್ದರೆ ಅವನೊಂದಿಗೆ ಮದುವೆ ಆಗುತ್ತಿತ್ತು)

ಮದುವೆ ಮಾಡಿಕೊಡದಿರಲು ಕಾರಣವೇನು? ಹುಡುಗನೇನೋ ಸುಂದರನೇ. ಆದರೆ ಸರ್ಕಾರಿ ನೌಕರಿ ಇಲ್ಲ ಬಿಸಿಲಿನೊಂದಿಗೆ ಬೇಸಾಯ ಮಾಡುತ್ತಾನೆ ಎಂಬುದು ಕಾರಣ.

ಹುಡುಗನ ಮದುವೆ ನಿಲ್ಲಲಿಲ್ಲ. ಬೇರೆ ಹುಡುಗಿಯೊಂದಿಗೆ ಮದುವೆ ಆಯಿತು. ಆ ಹುಡುಗಿಯ ಮದುವೆಯೂ ಸರ್ಕಾರಿ ಗುಮಾಸ್ತನೊಂದಿಗೆ ಹತ್ತು ಸಾವಿರ ವರದಕ್ಷಿಣೆಯೊಂದಿಗೆ ಜರುಗಿತು.

ಹುಡುಗಿ ಮೂರು ತಿಂಗಳು ಕೂಡ ಆಗಿರಲಿಲ್ಲ ಮದುವೆ ಆಗಿ. ಅತ್ತೆ ನಾದಿನಿಯರ ಕಾಟಕ್ಕೆ, ಕುಡುಕ ಗಂಡನ ಹಿಂಸೆಗೆ ಬೇಸತ್ತು ಸುಟ್ಟುಕೊಂಡು ಸತ್ತಳಂತೆ, ಸತ್ತಳೇ ಸಾಯಿಸಿದರೋ. ಸತ್ತವಳಿಗೆ ನಗ್ನ ಸತ್ಯ ಗೊತ್ತು. ಇಂತಹುದೇ ಇನ್ನೊಂದು ಘಟನೆ. ಹುಡುಗ ಸ್ಫುರದ್ರೂಪಿ. ಆದರೆ ಅನಕ್ಷರಸ್ಥ. ಕನ್ಯೆ ನೋಡಲು ಹೋಗಿದ್ದ. ಕನ್ಯೆ ಬಂದು ಹುಡುಗನ ಮುಂದೆ ಕುಳಿತಳು. ಮಾತಿನ ಮಧ್ಯೆ ಅನಕ್ಷರಸ್ಥ ಎಂದು ತಿಳಿಯಿತು ಹುಡುಗಿಯ ತಂದೆ ಇದ್ದಕ್ಕಿದ್ದಂತೆ ಕೆಂಡಮಂಡಲವಾದರು. ಕರೆದುಕೊಂಡು ಬಂದವರಿಗೆ ಅಂದೆಬಿಟ್ಟರು. ಏನ್ರಿ ನಮ್ಮ ಹುಡಿಗಿಗೆ ನಾನು ವರಗಳೇನು ಸಿಗದಿಲ್ಲ ಅಂತೇ ಮಾಡಿರೇನು ನೀವು? ನಮ್ಮ ಹುಡುಗಿ ಬಿ. ಎ. ಓದಿ ಕೊಂಡಾಳರಿ, ಕಂಡೋರಿಗೆ ಕೊಟ್ಟು ಕೈ ತೊಳಕೋಬೇಕು ಅಂತ ಏನು ಕುಂತಿಲ್ಲ ಎಂದೇಬಿಟ್ಟರು. ವರ ಅನಕ್ಷರಸ್ಥ ಎಂದು ತಿಳಿದ ಕೂಡಲೇ ಕನ್ಯಾಮಣಿ ಹಸೆಮಣೆ ಬಿಟ್ಟು ಎದ್ದೆಬಿಟ್ಟಳು.

ಏನ್‌ಕೆಲ್ಸ ಮಾಡ್ತ ಇದ್ದೀರಾ ನೀವು? ಕಲಿತ ಕನ್ಯಾಮಣಿಯು ವರನಿಗೆ ಪ್ರಶ್ನೆ ಹಾಕಿಬಿಟ್ಟಳು.

ವರ ಕಕ್ಕಾಬಿಕ್ಕಿಯಾಗಿ ಹೋಗಿದ್ದ 'ಕನ್ಯಾಮಣಿಯ ವರ್ತನೆಗೆ. ಆದರೂ ಸಾವರಿಸಿಕೊಂಡು 'ಬೇಸಾಯ' ಎಂದ. ಕನ್ಯಾಮಣಿ ವ್ಯಂಗ್ಯವಾಗಿ ನಕ್ಕು ಬರ ನಡೆದೆಬಿಟ್ಟಳು.

ಇವೆರೆಡು ಘಟನೆಗಳನ್ನು ಹೇಳಲು ಕಾರಣವಿಷ್ಟೆ. ಹೆಣ್ಣಿಗೆ ಗಂಡಿನಿಂದ ಶೋಷಣೆಯಾಗುತ್ತದೆ. ವರದಕ್ಷಿಣೆ ಅನೇಕ ಹೆಂಗಳೆಯರ ಸಾವು ನೋವಿಗೆ ಕಾರಣವಾಗಿದೆ. ವರದಕ್ಷಿಣೆ ತೆಗೆದು ಕೊಳ್ಳುವ ಗಂಡನ್ನು ಧಿಕ್ಕರಿಸಬೇಕು ಎಂದು ಘೋಷಣೆ ಕೂಗುವ ಹೆಣ್ಣೆ ಅದೆಲ್ಲದರೊಂದಿಗೆ ರಾಜೀ ಮಾಡಿಕೊಳ್ಳಲು ಯತ್ನಿಸುತ್ತಾಳೆ. ಈ ಘೋಷಣೆಗಳೆಲ್ಲ ಕೇವಲ ಹೊರ ಧ್ವನಿಯಾಗಿ ನಿಲ್ಲುತ್ತವೆ ಹೊರತು ಒಳಗಿನ ಧ್ವನಿಯಾಗುವುದಿಲ್ಲ.

ಈಗಿನ ಯುವತಿಯರು ನೂರು ಕನಸುಗಳನ್ನು ಕಟ್ಟಿಕೊಳ್ಳುತ್ತಾರೆ ಬಣ್ಣದ ಕನಸುಗಳಲ್ಲಿ ಮೈ ಮರೆಯುತ್ತಾರೆ. ವಾಸ್ತವ ಬದುಕಿನ ಬಗ್ಗೆ ಕಲ್ಪನೆ ಕೂಡ ಮಾಡದೆ ಹೊಸ ಬದುಕಿನ ಅಯ್ಕೆಯಲ್ಲಿ ನೆಲಕಚ್ಚುವುದು ಸಾಮಾನ್ಯ.

ಸರಕಾರಿ ನೌಕರಿ ಇರುವ ಹುಡುಗನನ್ನು ಮದುವೆ ಆದರೆ ಸುಖವಾಗಿರಬಹುದು. ಬಿಸಿಲಿನ ಮುಖ ನೋಡದಂತಿರಬಹುದು. ಗಂಡನ ತಿಂಗಳ ಸಂಬಳದಲ್ಲಿ ಹಾಯಾದ ಜೀವನ, ಪುಟ್ಟದೊಂದು ಮನೆ ಪುಟ್ಟ ಸಂಸಾರ, ಹೀಗೆ ಮಸಾಲೇ ಸಿನಿಮಾದ ಕನಸು. ವಾಸ್ತವ ಬದುಕಿನ ಬೆಳಕು ಹರಿದಾಗ ತಲ್ಲಣಗೊಳ್ಳುತ್ತಾರೆ. ಅದಕ್ಕೆ ಸ್ಪಂದಿಸದೆ ಸೋತು ಹೋಗುತ್ತಾರೆ.

ತನ್ನ ಗಂಡ ಕುಡುಕ ಜುಜೂಕೋರ ಎಂದು ತಿಳಿದಾಗ ತತ್ತರಿಸಿ ಹೋಗುತ್ತಾಳೆ, ತಂದೆ ತಾಯಿಗಳಿಗೆ ಶಾಪ ಹಾಕುತ್ತಾಳೆ.

ಬೇಸಾಯ ಮಾಡುವವನನ್ನು ಮದುವೆ ಆದರೆ ತಾನು ಸುಖವಾಗಿರಲಾರೆ, ಎಂಬ ತಪ್ಪು ಕಲ್ಪನೆ ಅವರಲ್ಲಿ ಅಚ್ಚೊತ್ತಿ ನಿಂತಿದೆ. ಬೇಸಾಯಸ್ತ ಎಂದರೆ ಸಾಕು ದೂರ ಸರಿದು ನಿಲ್ಲುತ್ತಾರೆ. ಮದುವೆ ಆಗುವುದಿಲ್ಲ ಎಂದು ಹಠ ಹಿಡಿದು ಕುಳಿತುಕೊಳ್ಳುತ್ತಾರೆ.

ಎಲ್ಲದರಲ್ಲೂ ತನಗೆ ಸರಿಸಾಟಿ ಇರಬೇಕು. ತಾನು ಮದುವೆ ಆಗುವವನು ತನಗಿಂತ ಹೆಚ್ಚು ಓದಿರಬೇಕು, ಸರ್ಕಾರಿ ನೌಕರಿ ಇರಬೇಕು, ರೂಪದಲ್ಲಿ ತನಗಿಂತ ಕಡಿಮೆ ಇರಬಾರದು, ಹಳ್ಳಿಯವನಿರಬಾರದು. ಯುವತಿಯರು ಈ ಎಲ್ಲಾ ಅನಿಸಿಕೆ ಅಭಿಪ್ರಾಯ, ನಿಲುವುಗಳಿಂದ ಹೊರಬರಬೇಕು. ಅರ್ಥ ಮಾಡಿಕೊಂಡು ಹೋಗುವ ಸರಳ ಸ್ವಭಾವದ ಗಂಡು ಓದಿನಲ್ಲಿ ಕಮ್ಮಿ ಇರಲಿ ಓದದಿರಲಿ ಬೇಸಾಯವನ್ನೆ ಮಾಡುತ್ತಿರಲಿ ಅಂತವನನ್ನು ಕೈ ಹಿಡಿದರೆ ಸುಖವಾಗಿರಬಲ್ಲೆ ಎಂದು ಕಂಡು ಬಂದರೆ ಅಂತವನನ್ನು ಯಾವ ಮುಲಾಜು ಇಲ್ಲದೆ ಮದುವೆಯಾಗುವ ಮನಸ್ಸನ್ನು ಯುವತಿಯರು ಮಾಡಬೇಕು.

ತಮ್ಮ ವೈಯಕ್ತಿಕ ನಿಲುವಿನಿಂದ ಒಂದಷ್ಟು ಹೊರ ಬರಬೇಕು. ಹತ್ತಿಪ್ಪತ್ತು ಸಾವಿರ ಸುರಿದು ಸರ್ಕಾರಿ ನೌಕರನನ್ನು ಆಯ್ಕೆ ಮಾಡಿಕೊಳ್ಳುವುದಕ್ಕಿಂತ ವರದಕ್ಷಿಣೆಯನ್ನೆ ಕೇಳದ ಹೃದಯವಂತ ವಿದ್ಯಾವಂತ ಅಥವಾ ಅವಿದ್ಯಾವಂತ ಕೃಷಿಕ ಗಂಡುಗಳನ್ನು ಸಹೃದಯದಿಂದ ಒಪ್ಪಿಕೊಳ್ಳುವ ಮನ ಯುವತಿಯರು ಮಾಡಬೇಕು.

ತನ್ನನ್ನೆ ತಾನು ಮಾರಿಕೊಳ್ಳುವ ನೌಕರಸ್ತ ಗಂಡುಗಳನ್ನು ತನ್ನ ಪದವಿ ಪತ್ರಕ್ಕೆ ಇಂತಿಷ್ಟು ಬೆಲೆ ಕಟ್ಟಿಕೊಳ್ಳುವ ಗಂಡುಗಳನ್ನು ಈ ರೀತಿಯಿಂದಲಾದರೂ ತಿರಸ್ಕರಿಸಿನಿಲ್ಲಬೇಕು. ಈ ಕೆಲಸ ಯಾವ ಕಾನೂನು ಕಟ್ಟಳೆಯೂ ಮಾಡಲಾರದು. ಯುವತಿಯರು ಮನಸ್ಸು ಮಾಡಬೇಕು. 'ನಾರಿ ಮುನಿದರೆ ಮಾರಿ' ಗಾದೆ ಗೊಂದಿಷ್ಟು ಅರ್ಥತಂದು ನಿಲ್ಲಿಸಬೇಕು.

**ಎ. ಚಿದಾನಂದಗೌಡ**

ಹತ್ತಾರು ಹೆಣ್ಣುಮಕ್ಕಳು ಒಂದೆಡೆ ಕೂಡಿದಾಗ ಅವರ ಮಾತಿನ ನಡುವೆ ಸಾಮಾನ್ಯವಾಗಿ ಆಗಾಗ ನುಸುಳಿ ಮರೆಯಾಗುವ ಮಾತೊಂದು ಉಂಟು. "ನಾವು ಏಕಾದರೂ ಹೆಣ್ಣಾಗಿ ಹುಟ್ಟಿದೆವಪ್ಪಾ... ! ಮರು ಜನ್ಮ ಇರುವುದು ನಿಜವಾದರೆ ನಾನು ಮುಂದಿನ ಜನ್ಮದಲ್ಲಿಯಾದರೂ ಗಂಡಾಗಿ ಹುಟ್ಟಬೇಕು." ಹಾಗೆ ಹೀಗೆ ಅುತ ತಮ್ಮ ಹೆಣ್ತನದ ಬಗ್ಗೆ ಅಲವತ್ತುಗೊಳ್ಳುವುದು ಸಾಮಾನ್ಯ ಸಂಗತಿ.

ಆಗೆಲ್ಲಾ ನನಗನ್ನಿಸುವುದು ಇಷ್ಟು; ಹೆಣ್ಣು ದೈಹಿಕವಾಗಿ ನಿಜಕ್ಕೂ ದುರ್ಬಲಳೇ ಆಗಿರಬಹುದಾದರೂ ತನ್ನ ತಾನರಿಯುವಲ್ಲಿ ಈ ವ್ಯರ್ಥ ಪ್ರಲಾಪವೇಕೆ ? ಮಾನಸಿಕವಾಗಿ ಹೀಗೆ ಬಳಲುವ ಶ್ರಮವೇಕೆ ?

"ಹೆಣ್ಣಾಗಿ ಹುಟ್ಟಿ ತನ್ನದೇ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ, ಎದುರಿಸುವ ಅವಕಾಶ ದೊರೆತದ್ದಕ್ಕಾಗಿ ನಿಜಕ್ಕೂ ಹೆಮ್ಮೆ–ಸಂತೋಷ ಪಡುವ ಗಟ್ಟಿತನ ನಮ್ಮ ಎಷ್ಟು ಜನ ಹೆಣ್ಣು ಮಕ್ಕಳಲ್ಲಿದೆ...?"

ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳುವಲ್ಲಿ ಇರಲೇಬೇಕಾದ ಜಾಣತನ, ಜೊತೆಗೆ ಪರಿಸರ ಬದಲಾವಣೆಗೆ ತಕ್ಕಂತೆ ಹೊಂದಿಕೊಂಡು ಹೋಗುವಾಗ ತೋರಬೇಕಾದ 'ಮಾನಸಿಕ ಧೈರ್ಯ–ಸ್ಥೈರ್ಯಗಳು, ಆಕಸ್ಮಾತ್ ಸಂಭವಿಸ ಬಹುದಾದ ಸಾಮಾಜಿಕ ಘರ್ಷಣೆಗಳ ಸಂಘರ್ಷಗಳಲ್ಲಿ ಉಡುಗಿಹೋಗಿ ಶೂನ್ಯವಾದಾಗ ; ತಾವು ಇರುಳ ಕಂಡ ಬಾವಿಗೆ ಹಗಲು ಬಿದ್ದು, ಮೋಸ ಹೋಗಿದ್ದು ಗೊತ್ತಾದರೂ ಕೂಡ, ತಮ್ಮ ಒಟ್ಟಾರೆ ಬಲ ಹೀನತೆಗಳನ್ನು "ವ್ಯವಸ್ಥೆ- ಹಾಗೂ ಪುರುಷನ" ಅಗಾಂಗಗಳಿಗೆ ಸವರಿ ತಾವು ಜಾರಿಕೊಳ್ಳಲು ನೋಡುತ್ತಾರೆ. ಇಂತಹ ದೌರ್ಬಲ್ಯಗಳಿಗೆ ಯಾರೂ ಯಾವ ಕಾರಣಕ್ಕೇ ಆಗಲಿ ಕಾರಣಕರ್ತರಾಗಿರುವುದಿಲ್ಲ.

ಇಲ್ಲಿ ಮತ್ತೊಂದು ಮುಖ್ಯ ವಿಚಾರವಿದೆ. ಮಹಿಳೆಯರೇ ಆಗಿ ಅವರ ಸಮಸ್ಯೆಗಳನ್ನು ನಾವು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡಿದ್ದೇವೆ ಅನ್ನುವುದು. ಒಮ್ಮೊಮ್ಮೆ ನನಗನ್ನಿಸುತ್ತೆ-ನಾವು ಸಮಸ್ಯೆಗಳನ್ನು ವಿರೂಪಗೊಳಿಸಿ ಸಮಾಜದೆದುರು ಬೆತ್ತಲೆಮಾಡಿ ಪ್ರದರ್ಶನ ಮಾಡುತ್ತಿದ್ದೇವೋ ಹೇಗೆ ಅಂತ. ಇದರಲ್ಲಿ ಬಹುಪಾಲು ಮಹಿಳೆಯರ ಬಗ್ಗೆ ಕಳಕಳಿ ಹೊಂದಿರುವ ಅನೇಕ ಸಂಘ ಸಂಸ್ಥೆಗಳೇ ಸುಧಾರಣೆ ಮಾಡುವ ಹುಚ್ಚು ಅಮಲಿನಲ್ಲಿ ತಪ್ಪು ಹೆಜ್ಜೆ ಇಡುತ್ತಿದ್ದಾರೆ ಅನ್ನದೆ ವಿಧಿ ಇಲ್ಲ.

"ವರದಕ್ಷಿಣೆ, ಕಾನೂನು, ಮಾನಭಂಗ, ಲೈಂಗಿಕ ಸಂಬಂಧಗಳು, ಕುಟುಂಬ ಘರ್ಷಣೆಗಳು ಹೀಗೆ ಸಮಸ್ಯೆ ಯಾವುದೇ ಆಗಿರಲಿ, ಆ ಸಮಸ್ಯೆಗೆ ಒತ್ತಡ ಹೇರಿ ಬಲಿಯಾದ ಹೆಣ್ಣನ್ನು ಅತಿ–ಮಾನವಳನ್ನಾಗಿ ರೂಪಿಸುವ ಅವಸರದಲ್ಲಿ ಸಮಸ್ಯೆಗಳೇ ಸೊರಗಿ ಹೋಗಿ ಬಲಿಯಾದ ಹೆಣ್ಣು ಕೊಂಚ ದಿನಗಳಲ್ಲಿಯೇ ನಮ್ಮ ಮನಃ ಪಟಲದಿಂದ ಮರೆಯಾಗಿ ಹೋಗುತ್ತಾಳೆ. ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಒರೆಹಚ್ಚಿನೋಡಿ, ನೈತಿಕ ಮಟ್ಟದಲ್ಲಿ ಆಲೋಚಿಸಿ, ಸಾಮಾಜಿಕ ಮಟ್ಟದಲ್ಲಿ ಗಟ್ಟಿಯಾಗಿ ನಿಲ್ಲುವಂತೆ ಮಾಡಬೇಕಾದಲ್ಲಿ ಅನಿವಾರ್ಯವಾಗಿ ಎದುರಿಸಲೇ ಬೇಕಾಗುವ ಸಾಮಾಜಿಕ ಘರ್ಷಣೆಯ ಬದಲಾವಣೆಗಳನ್ನು ನಾವು ಗಂಭೀರವಾಗಿ ಪರಿಗಣಿಸಲೇಬೇಕು. ಈ ಕಾರ್ಯ ಕ್ಷೇತ್ರದಲ್ಲಿ ಬೇಕಾದದ್ದು ಮುಂದಾಲೋಚನೆ, ಹಾಗೂ ಶುದ್ಧ ತಿಳುವಳಿಕೆ. ಕೇವಲ ಕಾರ್ಯಭಾರದ ಹೆಗ್ಗಳಿಕೆ, ಅವಸರದ ತೀರ್ಮಾನ ಎಂದೂ ನ್ಯಾಯ ರಕ್ಷಣೆ ನೀಡಲು ಸಾಧ್ಯವಿಲ್ಲ.

ಇದನ್ನು ಇನ್ನೂ ಸರಳೀಕರಿಸಿ ಹೇಳಬಹುದಾದರೆ, ಹಿಂದಿನ ಪುರಾಣ ಕಾಲದ ಸೀತೆ, ಸಾವಿತ್ರಿ, ದ್ರೌಪದಿ, ಅಹಲ್ಯೆಯರ ಸಮಸ್ಯೆಗಳಿಗಿಂತ ನಮ್ಮ ಸಮಸ್ಯೆ ಬೇರೆ ಏನಲ್ಲ. ಇಂದು ಸಾಮಾಜಿಕ, ಆರ್ಥಿಕ ಸ್ಥಿತಿ ಬದಲಾವಣೆಯಾಗಿ ಸಮಸ್ಯೆಗಳು ರೂಪಾಂತರಗೊಂಡಿರಬಹುದಾದರೂ, ಸಮಸ್ಯೆ ಹುಟ್ಟನ್ನು ಅಲ್ಲಿಂದಲೇ ನೋಡಬಹುದು.

ವಿರೂಪಗೊಳಿಸದೆ ತೆರೆದ ಪುಸ್ತಕದಲ್ಲಿ ಬರೆದಿಟ್ಟಂತಿರುವ ಅಂದಿನ ಸಮಸ್ಯೆಗಳು, ನಮ್ಮ ತಲೆಯನ್ನು ಇಂದಿಗೂ ಕೊರೆದು ಕಾಡುತ್ತಿರುವಾಗ, ಅಲ್ಲದೆ ಆ ಬಗ್ಗೆ ನಮ್ಮ ಪ್ರಜ್ಞೆಯನ್ನು ಹೆಚ್ಚಿಸುತ್ತಿರುವಾಗ, ನಾವಿಂದು ನಮ್ಮ ಸಮಸ್ಯೆಯ ಆಳಕ್ಕೆ ಹೊಕ್ಕು ತಡಕಾಡಬೇಕಾಗಿದೆ.

ಹುಣಸೆ ಕೋಟೆಯ ಅನಸೂಯಮ್ಮ, ಮಧುರಾ ಮಾಯಾತ್ಯಾಗಿಯರ ನೆನಪುಗಳು ಈಗ ಎಷ್ಟು ಜನರಿಗೆ ನೆನಪಿದೆಯೋ ಗೊತ್ತಿಲ್ಲ. ಅನಸೂಯಮ್ಮನಿಗೆ ಪರಿಹಾರ, ನ್ಯಾಯ ಕೊಡಿಸಲು ಹೋಗಿ ಅದೊಂದು ಘಟನೆ ಮಹಿಳಾ ಸಮಸ್ಯೆಗಳಿಗೆ ಪ್ರಚಾರ ಮೂಲ ಮಾಧ್ಯಮವಾಗಿ ರೂಪಗೊಂಡಿತೇ ಹೊರತು ಅನಸೂಯಮ್ಮನಿಗೆ ಕಡೆಗೂ ಪರಿಹಾರ ದೊರಕಲೇ ಇಲ್ಲ.

ಸಮಸ್ಯೆಯ ಪಕ್ಕದಲ್ಲಿಯೇ ಮತ್ತೊಂದು ಸಮಸ್ಯೆ ಸೃಷ್ಟಿಯಾಗುತ್ತೆ ನಿಜ. ಆದರೆ ಅದಕ್ಕೆ ಬಲಿಯಾಗುವುದು ಮುಗ್ಧ ಜೀವಿಗಳೆ. ಅಂಥವರಿಗೆ ಬಾಳು ಕೊಡುವುದು ಮುಖ್ಯವೇ ಹೊರತು ಅವರ "ಸ್ವಂತ ಸಮಸ್ಯೆಗಳು" ಪ್ರಚಾರ ಮೂಲಗಳಲ್ಲಿ ಸಿಲುಕಿ ಸೊರಗಿ ಕೊರಗಿ ಸಾಯುವುದಲ್ಲ.

ಹೀಗೆಲ್ಲಾ ಹೇಳಿ ಸಮಸ್ಯೆಗಳನ್ನು ನಾನು ಸರಳಗೊಳಿಸುತ್ತಿದ್ದೇನೆಂದು ಓದುಗರು ಖಂಡಿತಾ ಭಾವಿಸುವುದು ಬೇಡ.

ಎ. ಎನ್. ನಿರ್ಮಲ

# ಸಂವೇದನೆ



"ಮೊಗ್ಗೊಡೆಯದ ಬಿಳಿ ಮಲ್ಲಿಗೆಯ ಕನಸು
ಬಿರುಕು ಒಂಜರಿನಲ್ಲಿ ಒಣಗುತ್ತಿದೆ ;
ಕಾಲದಾಳದೊಳಗೆ ಮುಪ್ಪಾಗುತ್ತ ನಡೆಯುತ್ತಿರುವ
ಒಂಟಿ ಕಾಲಿನ ಭಾವಗಳು ಕುಂಟುತ್ತಿವೆ"

ಆಕೆಯ ವಿಶಾಲ ಕಣ್ಣಂಚಿನಲಿ ಹನಿಗಟ್ಟಿದ ನೀರು ನನ್ನ ಮನಃಪಟಲದಲ್ಲಿ ಮೂಡುತ್ತಲೇ ಇರುತ್ತದೆ. ನೀಳವಾದ ಕಪ್ಪುಗೂದಲಿನ ಭವ್ಯ ನಿಲುವಿನ ಆ ಎಳೆ ಹುಡುಗಿಯ ಆಸೆಗಳಿಗೆ ಉರುಲು ಹಾಕಿದ ಸಮಾಜದ ಕಟ್ಟುಪಾಡುಗಳ ಬಗ್ಗೆ ರೋಷವುಕ್ಕುತ್ತದೆ.

ಮದುವೆ ಆಲ್ಬಮ್ಮಿನಲ್ಲಿ ಮುಗುಳುನಗುತ್ತಿರುವ ಕನಸುಗಣ್ಣಿನ ಹುಡುಗಿಗೆ, ಬಟಾಬಯಲಾದ ಈಗಿನ ಕಟುವಾಸ್ತವ ಕನಸುಗಳನ್ನು ರಾಡಿ ಮಾಡಿದೆ. ಸ್ನೇಹ, ಪ್ರೀತಿಯ ಸಿಂಚನದಲ್ಲಿ ಚಿಗುರಬೇಕಿದ್ದ ಬದುಕು ಗಂಡನ ವಿಕೃತ ಕಾಮ, ಹಣದ ದುರಾಸೆಯಲ್ಲಿ ಬಿಗಿದುಕೊಂಡು ಬಂಧ ಕಳಚಿದೆ.

ಗಂಡು-ಹೆಣ್ಣಿನ ಸಂಬಂಧಗಳ ಸೂಕ್ಷ್ಮತೆ, ಸಂಕೀರ್ಣತೆಗಳನ್ನೆಲ್ಲಾ ತಳ್ಳಿಹಾಕಿಬಿಡುವ ಸಾಂಪ್ರದಾಯಿಕ ವಿವಾಹಗಳಲ್ಲಿ ಹೆಣ್ಣೊಂದು ವಸ್ತು. "ಕನ್ಯಾದಾನ" ಮಾಡಿದ ಪುಣ್ಯ ಹೆತ್ತವರಿಗೆ! ದುಡಿಯುವ ಹೆಣ್ಣಾಗಿದ್ದರೂ, ಹೊರಗಿನ ಆ ಕ್ಷೇತ್ರ ಆಕೆಗೆ ಗೌಣವಾಗಿರಬೇಕು.

"ಮದುವೆಯಾದ ಮೇಲೆ ಬಂದು ಗಂಡನನ್ನ-ಒಲಿಸಿಕೊಳ್ಳಬೇಕು. ಗಂಡನಿರುವ ಊರಿಂದ ಕೆಲಸವಿರುವ ಊರಿಗೆ ಓಡಾಡಬಹುದಿತ್ತು" ಅತ್ತೆ ಮನೆಯ ಆದೇಶವಿದು.

"ತಮ್ಮ ಮಗಳು ಒಂದು ಸಾವಿರ ರೂಪಾಯಿ ಕೆಲಸ ಬಿಟ್ಟಳು ಮನೆಗಾಗಿ". "ಮದುವೆಯಾದ ಮೇಲೂ ಎಂ.ಎಸ್.ಸಿ. ಪರೀಕ್ಷೆ ಓದುತ್ತಿದ್ದ ಹುಡುಗಿಗೆ ಅಪ್ಪ ಬೈದು ಗಂಡನ ಮನೆಗೆ ಕಳಿಸಿದ" ಎಂಬ ಆದರ್ಶಗಳು, "ಹಣ ಯಾರಿಗೆ ಬೇಡ ? ಇಲ್ಲಿಗೆ ಬಂದ ನಂತರ ಕೆಲಸ ಹುಡುಕಬಹುದಿತ್ತು" ಎಂದೂ ಹೇಳುವ ದ್ವಂದ್ವಗಳ ಉಯ್ಯಾಲೆಯಲ್ಲಿ ವರ್ಗಾವಣೆಯ ಕಷ್ಟಗಳು, ಹೊಸ ಕೆಲಸ ಸಿಗುವ ಕಷ್ಟಗಳ ಬಗೆಗಿನ ಅರಿವೂ ಇಲ್ಲ.

ಹೊರಗೆ ದುಡಿದು ಬರುವ ಹೆಣ್ಣು, 'ಸೊಸೆತನ' ನಿಭಾಯಿಸುವುದಕ್ಕಾಗಿ ಪತಿ, ಅತ್ತೆ, ನಾದಿನಿ, ಮೈದುನಂದಿರಿಗಾಗಿ ಮನೆಯಲ್ಲಿಯೂ ಗಾಣದೆತ್ತಾಗಿ "ಮನೆ ಮುತ್ತೈದೆಯಾಗಬೇಕು" "ಮನೆ ಬೆಳಗಬೇಕು" ಎಂಬ ಧೋರಣೆಗಳಲ್ಲಿ ನಲುಗಬೇಕು.

ಮೇಲ್ನೋಟಕ್ಕೆ ಅತಿ ಮಡಿವಂತಿಕೆ, ಕಂದಾಚಾರ ಪ್ರದರ್ಶಿಸುವ ಪತಿಯ ವಿಕೃತ ಕಾಮದಲ್ಲಿ ದೈಹಿಕವಾಗಿ, ಮಾನಸಿಕವಾಗಿ ನರಳಿದ ಆಕೆಗೆ ಪತಿಯ ಸಾಮೀಪ್ಯ ಸುಖ ತರುವಂತಹದ್ದಾಗಿರಲಿಲ್ಲ.

"ಜಾಜಿ ಹೂವಿನಂತಿದ್ದವಳು ಸೊರಗಿದಳು" ಹೆತ್ತ ಕರುಳಿನ ನೋವಿದು.

"ಕೊಟ್ಟಿದ್ದು ತುಪ್ಪ ತುಂಬಿದ ಬಟ್ಟಲು. ತುಪ್ಪವನ್ನು ದಿನಾ ಸ್ವಲ್ಪ ಸ್ವಲ್ಪ ತಿನ್ನಬೇಕೆ ಹೊರತು ಒಂದೇ ಬಾರಿಗೆ ತಿಂದರೆ ಹೇಗೆ ?"

"ಚೆನ್ನಾಗಿ ಸಾಕಿದ ಆಕಳು ಕೊಟ್ಟಿದ್ದೇವೆ. ಅದಕ್ಕೆ ಚೆನ್ನಾಗಿ ಹುಲ್ಲು ನೀರು ಹಾಕಿ ಹಾಲು ಕರೆದುಕೊಳ್ಳಬೇಕು. ಅದು ಬಿಟ್ಟು ಬರೀ ಹಾಲಿಗಾಗಿ ರಕ್ತ ಬರುವ ಹಾಗೆ ಹಿಂಡಿದರೆ ಆಕಳು ತಾನು ಹುಟ್ಟಿ ಬೆಳೆದ ಮನೆಗೆ, ತನ್ನನ್ನು ಕಟ್ಟಿದ್ದ ಕೊಟ್ಟಿಗೆಗೇ ವಾಪಸ್ಸು ಬರುತ್ತೆ" ಎಂಬ ವಿಶ್ಲೇಷಣೆ.

ಗಂಡು-ಹೆಣ್ಣಿನ ವೈಯಕ್ತಿಕ ಸಂಬಂಧದಲ್ಲಿ ಸಂಪ್ರದಾಯಗಳ ಸಂಕೋಲೆಗಳು ಸ್ನೇಹವರಳಿಸುವುದಿಲ್ಲ. ದುಡಿಯುವ ಹೆಣ್ಣಾಗಿಯೂ, ಚಿಕ್ಕಾಸೂ ಸ್ವಂತಕ್ಕಿಲ್ಲದೆ, ಪತಿಗೆ ನೀಡಿ ಕೈಯೊಡ್ಡಬೇಕಾದ ದುಃಸ್ಥಿತಿ ಹೆಣ್ಣನ್ನು ದೈನ್ಯತೆಗೆ ದೂಡುತ್ತಿದೆ. ಇಂತಹ ದೈನ್ಯತೆಯ ಸ್ಥಿತಿ ಧಿಕ್ಕರಿಸಿ, ದೈಹಿಕ, ಮಾನಸಿಕ ಹಿಂಸೆಗಳಿಂದ ಹೊರಬಂದ ಆಕೆಯಂತಹವರು ಸುತ್ತಲಿನ ಬದಲಾಗದ ಸಮಾಜದ ವರ್ತುಲದಲ್ಲಿ ಅಭದ್ರತೆಯ ಕ್ಷಣಗಳನ್ನು ಎದುರಿಸಬೇಕಾಗಿರುವುದು ಮನ ಕರಗಿಸುತ್ತದೆ.

ಈ ನೋವಿನ ಗರ್ಭ ಸೀಳಿ ಮಾನವೀಯವಾದ ಸಂಸ್ಕೃತಿ ಮೂಡಬೇಕಿದೆ. ಬದುಕನ್ನು ಸೃಜನಶೀಲವಾಗಿಸುವ ಸಮಾನತೆಯ ಹಾಡು ನಾಡಿಗಳಲ್ಲಿ ಮಿಡಿಯಬೇಕಿದೆ.

—ಸಿ. ಜಿ. ಮಂಜುಳಾ



# ಪುಟಾಣಿ ಪ್ರಪಂಚ

ಅಜ್ಜಿಯ ಮಗ್ಗುಲಲ್ಲಿ ಕಥೆಗಳನ್ನು ಕೇಳುತ್ತಾ ಕಲ್ಪನೆಯ ಎಳೆಗಳ ಚಿತ್ತಾರಗಳಲ್ಲಿ ಮನಸ್ಸುಗಳು ಅರಳುವ ಪ್ರಕ್ರಿಯೆ ಸೋಜಿಗದ್ದು. ಈಕಥೆಗಳನ್ನು ಕೇಳುತ್ತಾ ಬೆಳೆಯುವ ಬಾಲಕ ಸಾಹಸ ಧೈರ್ಯ, ಬದುಕನ್ನೆದುರಿಸುವ ಆತ್ಮವಿಶ್ವಾಸ, ಸೃಜನಾತ್ಮಕತೆಗೆ ಸಾಗುವಂತಹ ಮನಸ್ಥಿತಿ ಹೊಂದುತ್ತಾನೆ. ಆದರೆ ಏಳು ಮಲ್ಲಿಗೆ ತೂಕದ ರಾಜಕುಮಾರಿಯು ಆದರ್ಶದ ಅನುಕರಣೆಗೆ ತೊಡಗುವ ಬಾಲಕಿ ಬಲಿಷ್ಠ ರಾಜಕುಮಾರನ ಬರುವಿಕೆಗಾಗಿ ಕಾಯುತ್ತಾ ಕನಸಿನ ಪ್ರಪಂಚದಲ್ಲಿ ಮುಳುಗುವಂತಹ ನಿಷ್ಕ್ರಿಯತೆ ಮೈಗೂಡಿಸಿಕೊಳ್ಳುತ್ತಾಳೆ. ಇಂತಹ ಕಥೆಗಳು, ಸಮಾಜದಲ್ಲಿ ಗಂಡು-ಹೆಣ್ಣು ನಿರ್ವಹಿಸಬೇಕಾದ ಸಿದ್ಧ ಪಾತ್ರಗಳನ್ನು ಬಾಲ್ಯದಲ್ಲೇ ಅಚ್ಚೊತ್ತಿ ಬಿಡುತ್ತವೆ. ಸ್ವೀಕೃತ ಮೌಲ್ಯಗಳ ಸಂಕೋಲೆಯಿಲ್ಲದಂತಹ ಮುಕ್ತ ಪರಿಸರದಲ್ಲಿ ವ್ಯಕ್ತಿತ್ವಗಳನ್ನು ಅರಳಿಸುವಂತಹ ಕಲ್ಪನೆಗಳ ಕಥೆ, ಲೇಖನ, ಚಿತ್ರ, ಕವನಗಳನ್ನು ಪ್ರಕಟಿಸುವ ಪ್ರಯತ್ನದ ಫಲವೆ ಈ ಅಂಕಣ-'ಪುಟಾಣಿ ಪ್ರಪಂಚ'

---

ಒಂದು ದಿನ ಜ್ಯೋತಿ ಬ್ರೆಡ್ಡುಗಳನ್ನು ತೆಗೆದುಕೊಂಡು ಕಂಬಿಗೆ ತಗುಲಿ ಹಾಕಿಕೊಂಡು ಹೋಗುತ್ತಿದ್ದಳು. ಅವಳನ್ನೇ ಹಿಂಬಾಲಿಸುತ್ತಿದ್ದ ನಾಯಿ ಅವಳಿಗೆ ತಿಳಿಯದಂತೆ ಎಲ್ಲವನ್ನೂ ತಿಂದುಬಿಟ್ಟಿತು. ಅವಳಿಗೆ ಗೊತ್ತಾಗುವ ಹೊತ್ತಿಗೆ ಸಮಯ ಮೀರಿ ಹೋಗಿತ್ತು. ಅವಳು ಕೋಪದಿಂದ ನಾಯಿಯನ್ನು ಹೊಡೆಯಲು ತುಂಬಾ ದೂರದ ತನಕ ಓಡಿಸಿಕೊಂಡು ಹೋದಳು. ಹೋಗುತ್ತಾ, ಯಾವುದೋ ಜಾಗಕ್ಕೆ ಬಂದುಬಿಟ್ಟಿದ್ದಳು. ಭಯ, ದುಃಖಗಳಿಂದ ಅಳುತ್ತಾ ಕುಳಿತಾಗ ಒಂದು ಅಜ್ಜಿ ಅಲ್ಲಿಗೆ ಬಂದು ಅವಳಿಂದ ಎಲ್ಲಾ ವಿಷಯ ತಿಳಿದಳು. ಅವಳ ಅಳುವನ್ನು ನಿಲ್ಲಿಸಲು ತನ್ನ ಬಳಿ ಹಣವೂ ಇಲ್ಲ. ಬ್ರೆಡ್ಡೂ ಇಲ್ಲ. ಆದರೆ ಅಜ್ಜಿಯ ಬಳಿ ಅಮೂಲ್ಯವಾದ ಕಾಮನ ಬಿಲ್ಲಿನ ಹೂವು ಇತ್ತು. ಅದನ್ನು ಹುಡುಗಿಗೆ ಕೊಟ್ಟು ಅಜ್ಜಿ ನುಡಿದಳು. "ನೀನು ಈ ಹೂವಿನ ಒಂದು ದಳವನ್ನು ಹರಿದು ಗಾಳಿಯಲ್ಲಿ ಹಾರಿ ಬಿಟ್ಟು ಈ ರೀತಿ ಹಾಡು.

"ದಳವೇ ದಳವೇ
ಬಾನಲಿ ಹಾರು
ನೆಲವನು ಸೇರು
ನಾ ಕೇಳಿದ್ದೀಗಲೇ ತೋರು

ಹೀಗೆ ಹಾಡಿದಾಗ ನಿನ್ನ ಕೋರಿಕೆ ಪೂರೈಸುತ್ತದೆ ಎಂದಳು. ಜ್ಯೋತಿ ಸಂತೋಷದಿಂದ ಆ ಹೂವನ್ನು ಪಡೆದು ಅದರಲ್ಲಿ ಹಳದಿ ಬಣ್ಣದ ದಳವನ್ನು ಕಿತ್ತುಗಾಳಿಗೆ ಹಾರಿಬಿಟ್ಟಳು. ಅಜ್ಜಿ ಹೇಳಿಕೊಟ್ಟಂತೆ ಹಾಡಿದಳು. ಅವಳು ಈಗ ತಾನು ಮೊದಲಿನಂತೆ ಬ್ರೆಡ್ಡಿನ ಸಮೇತ ಮನೆಯಲ್ಲಿರಬೇಕೆಂದು ಅಂದುಕೊಂಡಳು. ಕೂಡಲೇ ಮನೆಯಲ್ಲಿ ಇದ್ದಳು. ಆ ಹೂವು ಅಷ್ಟೊಂದು ಪ್ರಭಾವವುಳ್ಳದ್ದು ಎಂದು ತಿಳಿದು ತುಂಬಾ ಖುಷಿಯಾಯಿತು.

ಜ್ಯೋತಿ ಆಟವಾಡಲು ಮೈದಾನಕ್ಕೆ ಬಂದಳು. ಅಲ್ಲಿ ಕೆಲವು ಹುಡುಗರು ಉತ್ತರಧೃವದ ಆಟ ಆಡುತ್ತಿದ್ದರು. ಒಂದು ಡಬ್ಬದ ಮೇಲೆ ಕುಳಿತು "ನಾವು ಈಗ ಉತ್ತರ ಧೃವದಲ್ಲಿದ್ದೇವೆ ಎಂದು ಕಲ್ಪಿಸಿಕೊಂಡರು. ಜ್ಯೋತಿ ಅವರ ಬಳಿ ಹೋಗಿ, ತನ್ನನ್ನೂ ಆಟಕ್ಕೆ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡರು" ನಾವು ಹುಡಿಗಿಯರನ್ನು ಉತ್ತರ ಧೃವಕ್ಕೆ ಕರೆದೊಯ್ಯುವುದಿಲ್ಲ" ಎಂದುಬಿಟ್ಟರು. ಆಗವಳು "ನಿಮ್ಮ ಯಾರ ನೆರವೂ ಇಲ್ಲದೇ, ನಾನು ನಿಜವಾಗಿಯೂ ಅಲ್ಲಿಗೆ ಹೋಗಬಲ್ಲೆ" ಎಂದು ಮೈದಾನದ ಒಂದು ಮೂಲೆಗೆ ಹೋಗಿ ನೀಲಿ ದಳವನ್ನು ಕಿತ್ತುಗಾಳಿಗೆ ಹಾರಿ ಬಿಟ್ಟಳು. ಅಜ್ಜಿ ಹೇಳಿ ಕೊಟ್ಟಂತೆ ಹಾಡಿ" ನಾನೀಗ ಉತ್ತರ ಧೃವದಲ್ಲಿರಬೇಕು ಎಂದುಕೊಂಡಳು. "ಕೂಡಲೇ ಅವಳುಮೇಲಕ್ಕೆ ಹಾರುತ್ತಿದ್ದಳು ಸೂರ್ಯ ಮರೆಯಾದ ಎಲ್ಲವೂ ಕಪ್ಪಾಯಿತು. ಅವಳ ಕಾಲಡಿಯಲ್ಲಿ ಭೂಮಿ ಚಿಕ್ಕದಾಗಿ ಕಂಡಿತು. ಈಗವಳು ಉತ್ತರ ಧೃವದಲ್ಲಿದ್ದಳು. ಅಲ್ಲಿ ತುಂಬಾ ಚಳಿಯಿತ್ತು. ಅವಳ

ದೇಹವೆಲ್ಲಾ ತಣ್ಣಗಾಯಿತು. ಅವಳ ಕಾಲಿನಡಿ ನೆಲ ಬಿಟ್ಟು ಎಲ್ಲಾ ಖಾಲಿಖಾಲ. ಅವಳು ಜೋರಾಗಿ ಅಳ ತೊಡಗಿದಳು. ಕಣ್ಣೀರು ಕೆನ್ನೆಯ ತುಂಬಾ ಹರಿಯು ಯುತ್ತಿತ್ತು. ಹಾಗೆ ಹರಿದಿದ್ದೆಲ್ಲಾ ಮಂಜಿನ ಚಕ್ಕೆಗಳಾಗಿ ಬಿಟ್ಟವು ! ಅವಳ ದೇಹವೇ ಮಂಜಾಗಿ ಬಿಡುತ್ತಿತ್ತು. ತುಂಬಾ ಹೆದರಿಕೆಯಿಂದ ಜ್ಯೋತಿ ಬೇಗನೆ ಆ ಹೂವಿನ ಹಸಿರು ದಳವನ್ನು ಹರಿದು ಹಾರಿಬಿಟ್ಟು ಅಜ್ಜಿ ಹೇಳಿ ಕೊಟ್ಟ ಹಾಗೆ ಹಾಡಿ ನಾನು ಈಗಲೇ ಆಟದ ಮೈದಾನ ದಲ್ಲಿರಬೇಕು" ಎಂದು ಕೊಂಡಳು. ಕೂಡಲೇ ಮೊದಲಿದ್ದ ಆಟದ ಬಯಲಿಗೆ ಬಂದಳು. ಹುಡುಗರು ಇನ್ನೂ ಆಡುತ್ತಿದ್ದರು. ಜ್ಯೋತಿಯನ್ನು ಕಂಡು "ಓಹೋ ಆಗಲೇ ಉತ್ತರಧೃವಕ್ಕೆ ಹೋಗಿ ಬಂದು ಬಿಟ್ಟೆಯೊ ಎಂದು ಗೇಲಿ ಮಾಡಿದರು. "ಹೌದು ನಾನು ಈಗ ತಾನೇ ಉತ್ತರ ಧೃವಕ್ಕೆ ಹೋಗಿ ಬಂದೆ ಎಂದಾಗ ಅವರು ಜೋರಾಗಿ ನಕ್ಕು ಬಿಟ್ಟರು. ಆಗವಳು ತಾನು ತಂದ ಮಂಜಿನ ಚಕ್ಕೆಗಳನ್ನು ತೋರಿಸಿದಳು. ಅವರು ನಂಬಲಿಲ್ಲ. ಅವು ಕಂಬಿಯ ತುಂಡುಗಳು. ಮಂಜಿನ ಚಕ್ಕೆ ಅಲ್ಲ" ಎಂದರು.

ತಾನು ಹುಡುಗಿಯರ ಜೊತೆ ಆಡಬೇಕೆಂದು ಪಕ್ಕದ ಬಯಲಿಗೆ ಹೋದಳು. ಹುಡಿಗಿಯರು ಅಲ್ಲಿ ಆಟವಾಡುತ್ತಿದ್ದರು. ಹುಡುಗನೊಬ್ಬ ಸಪ್ಪೆಮುಖ ದಲ್ಲಿ ಒಂದು ಕಡೆ ಸುಮ್ಮನೆ ಕುಳಿತಿದ್ದ. ಅವನ ಬಳಿ ಹೋಗಿ ನೀನೇಕೆ ಆಡಲು ಹೋಗಲಿಲ್ಲವೆಂದು ಕೇಳಿದಳು.

ಆಗ ಹುಡುಗ "ನಾನು ಕುಂಟ. ನನ್ನನ್ನು ಯಾರೂ ಆಟಕ್ಕೆ ಸೇರಿಸಿಕೊಳ್ಳುವುದಿಲ್ಲ." ಎಂದು ದುಃಖದಿಂದ ನುಡಿದ. ಆಗ ಜ್ಯೋತಿ ನಿನ್ನ ಜೊತೆ ಆಡಲು ನನಗೆ ತುಂಬಾ ಇಷ್ಟ ನಾನು ನಿನ್ನ ಜೊತೆ ಆಡುತ್ತೇನೆ ಬಾ" ಎಂದಳು. ನನಗೆ ಆಡಲು ಆಗುವುದಿಲ್ಲ ಎಂದ ಹುಡುಗ ಆಗ ಜ್ಯೋತಿ ಹೂವಿನ ನೇರಳೆ ಬಣ್ಣದ ದಳವನ್ನು ಹರಿದು ಅಜ್ಜಿ ಹೇಳಿಕೊಟ್ಟ ಹಾಗೆ ಹಾಡಿ, ಈಗ ಹುಡುಗನಿಗೆ ಕಾಲು ಬರಲಿ ಎಂದಳು. ಕೂಡಲೇ ಹುಡುಗನಿಗೆ ಕಾಲು ಸರಿಯಾಯಿತು. ಅವನು ಸಂತಸ ದಿಂದ ಕುಣಿದಾಡಲು ತೊಡಗಿದ. ಇಬ್ಬರೂ ಸಂತೋಷ ದಿಂದ ಕೂಡಿ ಆಡಿದರು.

ರಷ್ಯನ್ ಕಥೆಯೊಂದರ ಪ್ರೇರಣೆ

## ಮದುವೆಯೆಂಬ ಮಾರುಕಟ್ಟೆ

ಮದುವೆ ಎಂಬ ಮಾರುಕಟ್ಟೇಗೆ
ಬಂದಿಹೆವು, ಕೊಳ್ಳಿರಿ ನಮ್ಮನ್ನು
ಕನ್ಯಾಪಿತೃಗಳೇ !
ಬೆಲೆಗಳೇನು ದುಬಾರಿಯಲ್ಲ
ಹೆಚ್ಚೆಂದರೆ ಮೂರು ಲಕ್ಷ
F.R.C.S ಲಂಡನ್‌ಗೆ
ಕಡಿಮೆ ಎಂದರೆ ಮೂರುಸಾವಿರ
ಓದು, ಕೆಲಸವಿಲ್ಲದವನಿಗೆ
ನಿಮ್ಮ ಇಷ್ಟದಂತೆ ಆರಿಸಿಕೊಳ್ಳಿ
ಇರುವೆವು ಹಲವಾರು ಬಗೆ
ಒಳಿತು ನಿಮಗೆ
ಚೌಕಾಶಿ ಇಲ್ಲದೆ ಧಾರೆ
ಎರೆಯಿರಿ ಕನ್ಯೆಯನು
ಚೌಕಾಶಿ ಆದಲ್ಲಿ
ಕೆಡಕು ನಿಮಗೆ
ಕಳುಹಿಸುವೆವು ಹೆಣ್ಣಿನ
ಹೆಣವನ್ನು ಮನೆಗೆ
ಎಂದಿನಂತೆ, ಮತ್ತೇ
ಬರುವೆವು ಮಾರುಕಟ್ಟೇಗೆ

ಸತ್ಯವತಿ ಆರ್.

## ವ್ಯತ್ಯಾಸ

ದಸರಾ ಪ್ರದರ್ಶನದ
ಗೊಂಬೆಗಳು
...ನಿರ್ಜೀವ
ಆದರೆ
ನಾ...
ವಧು ಪ್ರದರ್ಶನದ
ಜೀವಂತ ಗೊಂಬೆ.

ನಿರ್ಮಲ ಎನ್.ಆರ್.

# ನ್ಯಾಯದ ನಿರೀಕ್ಷೆಯಲ್ಲಿ

## ಸವೆದ ಹಾದಿಯಲ್ಲಿ ನೊಂದ ಬದುಕು



ಜಗದಾಂಬ

ಮದುವೆ ಆದ ಸ್ವಲ್ಪ ದಿನಾನೇ ನಾನಲ್ಲಿ ಚೆನ್ನಾಗಿದ್ದಿದ್ದು. ಆಮೇಲೆ ನನ್ನ ಗಂಡ ಕುಡಿತಕ್ಕೆ ಬಲಿಯಾದ್ರು. ಸಹಿಸೋದಿಕ್ಕೇ ಆಗ್ದಿರೋ ಅಷ್ಟು ಹೊಡೆದು ಬಿಡ್ತಿದ್ರು ರೂಂ ಬಾಗ್ಲೂ ಹಾಕ್ಕೊಂಡು, ತಪ್ಪಿಸಿಕೊಳ್ಳೋದು ಸಾಧ್ಯಾನೇ ಇಲ್ದಿರೋ ಹಾಗೆ ಮಾಡಿ......ರಕ್ತ ಬರೋ ಹಾಗೆ ಹೊಡದ್ರು......ಅವರು ಹೊಡೆಯೋವಾಗ ನಮ್ಮತ್ತೆ ಬಂದು, ಸುಮ್ಮನೆ ಬಾಯ್ಮಾತಿಗೆ, "ಹೊಡೀ ಬೇಡ ಕಣೋ ಅಂತಿದ್ರೇ ಹೊರ್ತು, ಒಂದು ದಿನವಾದ್ರೂ ನನ್ನ ಗಂಡನ್ನ ಹೊಡೀದಂತೆ ತಡೀಲಿಲ್ಲ......ಒಂದಿನ ವಾದ್ರೂ ನನ್ನ ಆ ಹೊಡೆತನಿಂದ ಪಾರು ಮಾಡ್ಲಿಲ್ಲ"...

—ಅವಳ ಈ ಮಾತುಗಳ ಆಳದಲ್ಲಿ ಅಪಾರ ನಿಟ್ಟುಸಿರಿದೆ. ಮಾತನಾಡುತ್ತಾ, ಅಳುತ್ತಿರುವ ತನ್ನ ಕಂದನನ್ನು ಸುಧಾರಿಸುವ ಅವಳ ಕಣ್ ಹೊಳಪಿನಾಳದಲ್ಲಿ ಹೆಪ್ಪುಗಟ್ಟಿದ ಕಂಬನಿಯಿದೆ...ಉಜ್ವಲ ಭವಿಷ್ಯದ ಕನಸಿನ ಗೋಪುರವಿದೆ...ಗೋಪುರದಲ್ಲಿ ಆಶಾವಾದದ ದೀಪವಿದೆ.

"ಸುಮ್ಮನೆ ತಾತ್ಸಾರವಾಗಿ "ಹೊಡೀಬೇಡ ಕಣೋ"– ಅಂತ ಹೇಳ್ತಿದ್ದ ನಮ್ಮತ್ತೆ ಕೂಡಾ ಅವನು ಬಂದತಕ್ಷಣ,ನನ್ನ ಮೇಲೆ ಏನೇನೋ ಚಾಡಿ ಹೇಳ್ತಿದ್ರು. ನಾನು ನಾದಿನೀನ ಸುಮ್ಮನಾದರೂ ಬಯ್ದೆ ಅಂತ, ಮಗೂನ ಚೆನ್ನಾಗಿ ನೋಡ್ಕೊಳ್ಳಿಲ್ಲ ಅಂತ, ಮನೆಕೆಲ್ಸ ಸರಿಯಾಗಿ ಮಾಡ್ಲಿಲ್ಲ ಅಂತ. ಆಗೆಲ್ಲಾ ಅವನಿಂದ ನನಗೆ ಸಹಿಸಲಾಗದಷ್ಟು ಒದೆತ ಬೀಳ್ತಿತ್ತು– ನಿಜ್ವಾಗ್ಲೂ ಆ ಹಿಂಸೆ– ಯಾವ ಶತ್ರುಗೂ ಬೇಡ."

—ಎನ್ನುತ್ತಾ, ಕಹಿ ಅನುಭವದ ನೆನಪೊಳಗೆ ಮುಳುಗಿ ತುಂಬಾ ಮೌನಿಯಾಗುತ್ತಾಳೆ...ಗಂಭೀರಳಾಗುತ್ತಾಳೆ...ಮತ್ತೆ ಆ ನೆನಪೇ ಅವಳ ಅಭಿವ್ಯಕ್ತಿಯಾಗಿ, ಧ್ವನಿಯಲ್ಲಿ ಮುನ್ನುಗ್ಗಿ ಅವಳನ್ನು ವಾಸ್ತವಕ್ಕೆಳೆಯುತ್ತದೆ– "ಅವನ ಹೊಡೆತದಿಂದ ತಡೆಯಲಾರದಷ್ಟು ನೋವಿಗೆ ಬಲಿಯಾಗ್ತಿದ್ದೆ. ಮೈ ಕೈಯೆಲ್ಲಾ ತುಂಬಾ ನೋಯುತ್ತಿತ್ತು-ಆಗ ನಾನು 'ಇದನ್ನೆಲ್ಲಾ ನಾನು ನಮ್ಮ ಅಪ್ಪ ಅಮ್ಮನಿಗೆ ಹೇಳ್ತೀನಿ' ಅಂತ ನಾ ಹೇಳ್ದಾಗ ನನ್ನ ಗಂಡ 'ಹಾಗೇನಾದ್ರೂ ಹೇಳಕ್ಕೋಗು- ಚಾಡಿ ಮಾತು ಕೇಳೋ ಅವರನ್ನೂ ಕೊಂದುಬಿಡ್ತೀನಿ' ಅಂದುಬಿಟ್ರು- ನಾನು ಹೆದರಿ, ಅವರು ಕೊಟ್ಟ ಕಿರುಕುಳಾನ ಯಾರ್ಹತ್ರಾನೂ ಹೇಳ್ಕೊಳ್ದೆ ಸುಮ್ನಾಗ್ಬಿಟ್ಟೆ– ಆದರೆ ಆಗ ನಾ ಪಡುತ್ತಿದ್ದ ಕಷ್ಟ ಹೇಳ್ಕೋಳ್ಳೊಕೂ ಆಗ್ತಿರ್ಲಿಲ್ಲ... ಬಾಯ್ಮುಚ್ಚಿ ಸಹಿಸೋದಕ್ಕೂ ಆಗ್ತಿರ್ಲಿಲ್ಲ" ಎಂದಾಗ ಅವಳ ಮುಖ ಭಾವಗಳೇ ಅಸಹಾಯಕತೆಯನ್ನು ಸಾರುತ್ತವೆ—

ತನ್ನ ಗಂಡನ ಮೊದಲನೇ ಹೆಂಡತಿ ಸತ್ತು ಹೋಗಿರಲು ಇರಬಹುದಾದ ಕಾರಣದ ಬಗ್ಗೆಯೂ ಜಗದಾಂಬಳಲ್ಲಿ ಅನುಮಾನವಿದೆ- ಮನೆಯವರೆಲ್ಲಾ, 'ಅವನು ಸ್ಟೌ ಬರ್ಸ್ಟ್ ಆಗಿ ಸತ್ತಳೆಂದು' ಹೇಳಿದರೆ, ಅಕ್ಕ-ಪಕ್ಕದವರೆಲ್ಲಾ, "ಅವಳಿಗೂ ತುಂಬಾ ಕಾಟ ಕೊಡ್ತಿದ್ರು ಹಿಂಸೆ ಕೊಟ್ಟು ನರಳಿಸಿ ಅವರೇ ಕೊಂದಿರಬಹುದು" ಎನ್ನುತ್ತಾರೆ.

ಅವಳು ವಿವಾಹವಾಗಿ ಗಂಡನ ಮನೆಗೆ ಹೋದಾಗ ಮನೆಯಲ್ಲಿ ಒಂದು ಹೆಣ್ಣು ಮಗುವಿತ್ತು. ಮನೆಯವರು "ಅದು ಅವರಣ್ಣನ ಮಗು" ಎಂದರೆ, ಅಕ್ಕ-ಪಕ್ಕದವರು 'ಅದು ಮೊದಲನೇ ಹೆಂಡತಿಯ ಮಗು' ಎನ್ನುತ್ತಾರೆ. ತನ್ನತ್ತೆಯೇ ಎಷ್ಟೋ ಸಲ ಹೀಗೆ ಹೇಳಿದ್ದುಂಟು.

ಮನೆ ಸಮೀಪದಲ್ಲಿದ್ದ ಕರಿಯಯ್ಯನ ಪಾಳ್ಯದಲ್ಲಿ ಮನೆಯೊಂದನ್ನು ಮಾರಾಟಕ್ಕಿಟ್ಟಿದ್ದರು. ಅದನ್ನು ಅವರು ಕೊಂಡುಕೊಳ್ಳೋಕೆ ಅವ್ರಿಗೆ ದುಡ್ಡು ಬೇಕಾಯ್ತು "ಅವಳತ್ತೆ ಮತ್ತೆ ಅವಳ ಗಂಡ", ನಿಮ್ಮನೇಗೆ ಹೋಗಿ ನಿನ್ನ ಅಪ್ಪ ಅಮ್ಮನ್ನ ಕೇಳಿ, ನಲ್ವತ್ತು ಸಾವಿರ ಇಸ್ಕೊಂಡ್ಬಾ, ಹೇಗಿದ್ರೂ ನೀನು ಮದ್ವೇನಲ್ಲಿ ನಾವು ಕೇಳಿದಷ್ಟು ಕೊಟ್ಟಿಲ್ವಲ್ಲಾ ಎಂದರು. ಆಗವಳು ತಾಯಿ ಮನೆಗೆ ಬಂದು ಆ ವಿಚಾರವನ್ನು ಪ್ರಸ್ತಾಪಿಸಿದಳು. ಆದರೆ ಒಬ್ಬ ಅಣ್ಣ ಮಾತ್ರ ಖಾಸಗೀ ಸಂಸ್ಥೆಯೊಂದರಲ್ಲಿ ಉದ್ಯೋಗಿಯಾಗಿದ್ದೂ ತಾಯಿ ತರಕಾರಿ ಮಾರುತ್ತಿದ್ದಳು. ಅವರ ದೊಡ್ಡ ಸಂಸಾರಕ್ಕೆ ಇದೇ ಒಟ್ಟು ಆಧಾರ. ಇಂಥ ಬಡಕುಟುಂಬಕ್ಕೆ 40 ಸಾವಿರ ಒಟ್ಟಿಗೇ ಹೇಗೇ ತಾನೇ ಸಿಗಬೇಕು? ಅಲ್ಲಿಗೆ ಬಂದು ಅದನ್ನು ಕೇಳಲೂ ಸಹ ಅವಳಿಗೆ ಕಿಂಚಿತ್ತೂ ಇಷ್ಟವಿರಲಿಲ್ಲ, ಏನು ಮಾಡುವುದು? ಅನಿವಾರ್ಯತೆ, ಕೇಳದಿದ್ದರೆ ಮತ್ತೆ ಕಾಟ ಸಹಿಸೋಕ್ಕೆ ಸಿದ್ಧಳಾಗಿರಬೇಕು! ತಂದೆ ತಾಯ್ಗಳು "ಅಷ್ಟೊಂದು ದುಡ್ಡು ನಮ್ಹತ್ರ ಎಲ್ಲಿದ್ಯಮ್ಮಾ ನಿಂಗೇ ಗೊತ್ತಲ್ಲಾ" ಎಂದಾಗ ಅವಳಿನ್ನೇನು ತಾನೇ ಮಾಡಲು ಸಾಧ್ಯ? ಅವಳು ಬರಿಕೈಲೇ ಅತ್ತೆ ಮನೆಗೆ ಹಿಂತಿರುಗಿ, ಇದ್ದದ್ದು ಇದ್ದಹಾಗೇ ಹೇಳಿದಾಗ, ಅತ್ತೆ ಮತ್ತು ಗಂಡ, "ಏನು ಹಣ ಇಲ್ದಿದ್ರೆ, ನಿಮ್ಮ ಮನೆಯ ಡಾಕ್ಯುಮೆಂಟ್ಸ್‌ನಾದರೂ ತರಕ್ಕಾಗಿಲ್ಲ? ಹೋಗಿ ತಗೊಂಬಾ ಹೋಗು– ನಾವು ಅದನ್ನೇ ಬ್ಯಾಂಕಿನಲ್ಲಿ ಒತ್ತೆಯಿಟ್ಟು ದುಡ್ಡು ಸಾಲ ತೊಗೋಬೇಕು"- ಎಂದು ಮತ್ತೆ ಅವಳನ್ನು ಕಳುಹಿಸಿದರು. ಅವಳು ತಾಯಿ ಮನೆಗೆ ಮತ್ತೆ ಬಂದು ಅದನ್ನು ಕೇಳಿದಳು. ಆದರೆ ಆ ಮನೆ ಮೂರು ಅಣ್ಣ-ತಮ್ಮಂದಿರಿಗೂ ಹಂಚಿಹೋಗುವುದಲ್ಲಿತ್ತಾದ್ದರಿಂದ, ಕೋರ್ಟು ವಿಚಾರಣೆಯಲ್ಲಿತ್ತು ಡಾಕ್ಯುಮೆಂಟ್ಸ್ ಸಹಾ ಕೋರ್ಟಿನ ವಶದಲ್ಲಿತ್ತು. ಅದನ್ನು ಅತ್ತೆ ಮತ್ತು ಗಂಡನಿಗೆ ಹೇಳಿದಳು ಜಗದಾಂಬಾ. ಆಗ ಅತ್ತೆ "ನಿಂಗೆ ನಿಮ್ಮ ಡಾಕ್ಯು-ಮೆಂಟ್ಸ್‌ನ ತರೋಕೆ ಇಷ್ಟ ಇಲ್ಲ, ನಿಮ್ಮಮ್ಮ ಕೊಟ್ರೂ ನೀನೇ ತಂದಿಲ್ಲ. ಏನೋ ಸುಳ್ಳು ನೆವ ಹೇಳಿದ್ದಿ"– ಎಂದರು. ಅಂತೆಯೇ ಮಗನಿದಿರಿಗೂ ಮನಬಂದಂತೆ ದೂರಿದರು. ಅವನು ಸಹ ರೇಗಾಡಿದ. ಅಲ್ಲಿಂದ ಕಿರುಕುಳ ಮತ್ತೆ ಇಮ್ಮಡಿಯಾಯ್ತು. ಎಂಥ ಕಿರುಕುಳ ಸಹಿಸುತ್ತಿದ್ದಳೆಂದರ, ಅವಳೇನೂ ಹೇಳಿಕೊಳ್ಳುವ ಹಾಗೇ ಇರಲಿಲ್ಲ. ಅವಳ ಮುಖ ನೋಡಿದರೇನೇ ಅವಳಲ್ಲಿ ಎಂಥ ಶಿಕ್ಷೆ ಅನುಭವಿಸುತ್ತಿದ್ದಳೆಂದು ತಿಳಿಯುತ್ತಿತ್ತು. ಹೊಡೆತದಿಂದಾಗಿ ತಲೆಗೆ ಅಸಾಧಾರಣ ಪೆಟನೆ ಬಿದ್ದು, ಅವಳ ಜ್ಞಾಪಕ ಶಕ್ತಿಯೇ ಕುಂದಿ ಹೋಯಿತು. ಮುಖವೆಲ್ಲಾ ಹೊಡೆತದ ಬರೆಗಳಿಂದ ತುಂಬಿ ಹೋದವು.

ಆಕಸ್ಮಿಕವಾಗಿ ಅವಳ ತಂದೆ ಬಂದರು. ಅವಳು ಮೊದಲಿನಿಂದಲೂ ಕಷ್ಟ ಪಡುತ್ತಿರಬಹುದೆಂದು, ಅವರಲ್ಲಿ ಅನುಮಾನವಿತ್ತು. ಈಗ ಪ್ರತ್ಯಕ್ಷ ನೋಡಿದಾಗ ಅನುಮಾನಕ್ಕೆ ಸತ್ಯರಾಚಿತು. ಅವಳೇನೂ ತಂದೆಯ ಬಳಿ ವಿವರಿಸಿ ಹೇಳಬೇಕಾಗೇ ಇರಲಿಲ್ಲ. ಹೊಳಪು ಕಳಕೊಂಡು ಗುಳಿಬಿದ್ದ ಕಣ್ಣು, ಬರೆಗಳನ್ನು ತುಂಬಿಕೊಂಡು ಬತ್ತಿದ ಕಪೋಲದಿಂದ ಕೂಡಿದ ಮುಖ, ಕೃಶವಾದ ಶರೀರ- ಇವೇ ಹೇಳುತ್ತಿದ್ದವು– ಅವಳಲ್ಲಿ ಹೇಗಿದ್ದಾಳೆಂದು ತಂದೆ ನೊಂದರು. ಅವಳನ್ನು ಮನೆಗೆ ಕರೆ ತಂದರು.

ಈ ಪ್ರಾಯೋಜಿತ ಅಂಕಣಕ್ಕೆ ಹಣ ನೀಡಿದವರು :
**ಬಸವಲಿಂಗಪ್ಪ**
**ದಾವಣಗೆರೆ**

ಅವಳು, ತಲೆಗೆ ಹೊಡತದ ಪೆಟ್ಟಾಗಿದ್ದಾಗ ಇಂದಿರಾ ನಗರ ಪೊಲೀಸ್ ಸ್ಟೇಷನ್ನಿಗೆ ದೂರು ಕೊಟ್ಟಿದ್ದಳು. "ಸುಮ್ಮನೆ ಸಣ್ಣಪುಟ್ಟ ಜಗಳಕ್ಕೆಲ್ಲಾ ದೂರು ಕೊಡೋಕ್ಕೆ ಬರ್‍ತೀರಾ ನೀವೇ ಸರಿಗಟ್ಕೊಳ್ಳೋದನ್ನ ಬಿಟ್ಟು– ನಮ್ಮಿಂದ ಆಕ್ಷನ್ ತಗೊಳ್ಳೋಕೆ ಸಾಧ್ಯವಿಲ್ಲ" ಎಂದು ಬಿಟ್ಟರು.

ಜಗದಾಂಬಳ ಅಕ್ಕನ ಗಂಡನ ಗೆಳೆಯ ಎಂ.ಎಲ್.ಎ. ಕಾಳಪ್ಪನವರ ಸಹಾಯದಿಂದ ಅವಳ ನೋವಿನ ಕಥೆ ಪತ್ರಿಕೆಗಳಲ್ಲೂ ಬಂತು. ಪೊಲೀಸಿನವರು ಆಗ ಆಕ್ಷ್ಯನ್ ತೆಗೆದುಕೊಂಡರು. ಆಗ ಅವಳ ಸೌಮ್ಯ ಮುಖದ ಕ್ರೂರಿ ಗಂಡ ಬಂಧಿಸಲ್ಪಟ್ಟ.

ಕೇಸು ಕೋರ್ಟಿನ ಬಳಿ ಬಂದಾಗೆಲ್ಲಾ ತುಂಬಾ ಒಳ್ಳೆಯವನಂತೆ ವರ್ತಿಸತೊಡಗಿದ. ತುಂಬಾ ಮೃದುವಾಗಿ ಮಾತನಾಡಿ, "ಕೇಸನ್ನ ವಾಪಸ್ ತೊಗೋ- ಇನ್ಮೇಲೆ ಹೊಡೆಯದೇ ಒಳ್ಳೆಯವನಾಗಿರ್‍ತೀನಿ" ಎಂದ-

ಅವನ ಮೃದುತನಕ್ಕೆ ಮತ್ತೆ ಆ ಮೆದು ಮಾತುಗಳಿಗೆ ಮರುಳಾದ ಜಗದಾಂಬಾ ಕೇಸನ್ನ ವಾಪಸ್ ತೆಗೆದು ಕೊಂಡಳು. ವಿಚಾರಣೆ ಅಲ್ಲಿಗೇ ಮುರಿದುಬಿತ್ತು. ಅವನೊಡನೆ ಮನೆಗೆ ಹೋದಳು.

ಅವನ ಭಾವಚಿತ್ರ, ಕ್ರೌರ್ಯದ ಕಥೆ ಈಗಾಗಲೇ ಪತ್ರಿಕೆಯಲ್ಲಿ ಬಂದುಬಿಟ್ಟಿತ್ತಾದ್ದರಿಂದ ಅವಳ ಮೇಲೆ ಅವನಿಗೆ ಅಸಾಧಾರಣ ರೋಷ-ದ್ವೇಷವಿತ್ತು. ಈಗ ಅದನ್ನೆಲ್ಲಾ ತೀರಿಸಿಕೊಳ್ಳಲು ಮುಂದಾದ.

ಕಿರುಕುಳ ತಡೆಯಲಾಗದೇ ಜಗದಾಂಬಾ ತಾಯಿ ಮನೆಗೆ ಬರುವುದು, ಅವನ ನಯಮಾತಿಗೆ ಮರುಳಾಗಿ ಮತ್ತೆ ಹಿಂತಿರುಗುವುದು ಹೀಗೇ ನಡೆಯುತ್ತಿದ್ದಿತು.

ಜಗದಾಂಬಳ ಮನೆಯವರೆಲ್ಲಾ, ಅಕ್ಕ-ಪಕ್ಕದವರಿದಿರು ಘನತೆ-ಗೌರವಗಳನ್ನು ಕಾಪಾಡಿಕೊಂಡಿದ್ದರು. ಮರ್ಯಾದಸ್ತರಾಗಿದ್ದರು. ಅಂಥ ಸ್ಥಳದಲ್ಲಿ ಜಗದಾಂಬಳ ಗಂಡ, ಕುಡಿದು ಬಂದು ಗಲಾಟೆ-ಕಿರುಕುಳ ಜಗಳ ಮಾಡಲಾರಂಭಿಸಿದಾಗ, "ನನ್ನಿಂದಾಗಿ ನಮ್ಮ ಅಪ್ಪ-ಅಮ್ಮ-ಅಣ್ಣ ತಮ್ಮಂದಿರೂ ಯಾಕೆ ಮರ್ಯಾದೆ ಕಳ್ಕೋ ಬೇಕು" ಎಂದು ಚಿಂತಿಸಿ, ಅವನೊಡನೆ ಅತ್ತೆ ಮನೆಗೆ ಹೊರಟು ಹೋದಳು.

ಕೆಲವು ದಿನಗಳ ನಂತರ ಅವನು ಸುಬ್ಬಯ್ಯನ ಪಾಳ್ಯದಲ್ಲಿ ಒಂದು ಮನೆಗೆ ಅವಳನ್ನು ಕರೆದುಕೊಂಡು ತಾಯಿಯಿಂದ ಪ್ರತ್ಯೇಕವಾದ. "ಇಲ್ಲಾದರೂ ನನ್ನ ಗಂಡನಲ್ಲಿರುವ ದುರ್ಗುಣಗಳನ್ನು ಬಿಡಿಸಿ ಸರಿ ಮಾರ್ಗಕ್ಕೆ ತರಬಹುದು"- ಎಂದು ಆಶಿಸಿದ ಜಗದಾಂಬಳಿಗೆ ಮತ್ತೆ ನಿರಾಶೆ ಕಾದಿತ್ತು. ಅವನು, ಎರಡು ಮೂರು ದಿನಗಳಿಗೊಮ್ಮೆ ತನ್ನ ತಾಯಿ ಮನೆಗೆ ಹೋಗುವುದು ಮನೆಗೆ ಬಂದು ಇವಳನ್ನು ಹೊಡೆಯುವುದು ಹೀಗೇ ಮಾಡುತ್ತಿದ್ದ. ಅವಳು ಸಹಿಸಿಕೊಂಡೇ ಬಂದಳು, "ಕಾಲ ಕ್ರಮೇಣ ಸಾವಕಾಶವಾಗಿಯಾದರೂ ಸರಿಗಟ್ಟಲು ಸಾಧ್ಯವಾದರೆ ಎಂದು ಚಿಂತಿಸಿದಳು. ಆದರೆ ಕಿರುಕುಳ ದಿನ ದಿನಕ್ಕೂ ಹೆಚ್ಚತೊಡಗಿತು. ಆಗ, ಖಂಡಿತಾ ತನ್ನ ಪ್ರಾಣಕ್ಕೇ ಅಪಾಯ ಕಾದಿದೆ ಎಂಬುದನ್ನು ಮನಗಂಡ ಜಗದಾಂಬಾ ಅಂತಿಮವಾಗಿ ತಾಯಿ ಮನೆಗೆ ಬಂದು ಬಿಟ್ಟಳು.

ಈಗ ಇರುವ ಎರಡು ಮಕ್ಕಳೇ ಅವಳ ಬಾಳಿನ ಆಶಾದೀಪಗಳು. ಅವನು, ತನ್ನ ತಾಯಿಯ ಮಾತನ್ನು ಕೇಳಿದಾಗೆಲ್ಲಾ ಅವಳನ್ನು ಕ್ರೂರವಾಗಿ ಹಿಂಸಿಸುತ್ತಿದ್ದುದ್ದನ್ನು ಜಗದಾಂಬಾ ಮನಗಂಡಿದ್ದಾಳೆ- ಆದರೂ, "ನಾನು ಯಾರನ್ನೂ ಬ್ಲೇಮ್ ಮಾಡೋದಿಲ್ಲ- ನಾನು ಕಷ್ಟ ಪಡ್ತಿರೋದಿಕ್ಕೆ ಅತ್ತೇನೂ ಕಾರಣ ಅಲ್ಲರೆ ಮಾವಾನೂ ಕಾರಣ ಅಲ್ಲ- ಗಂಡನೊಬ್ಬ ಸರಿಯಿದ್ದ, ಯಾರೇನು ಮಾಡಬಲ್ಲರು?" ಎಂಬ ಸ್ಪಷ್ಟ ಭಾವನೆ ಅವಳದು.

"ಅವನು ನೋಡಲು ಎಷ್ಟು ಸುಂದರ, ಸೌಮ್ಯ! ಹೊಸಬರೊಡನೆ ಮಾತಾಡುವಾಗ ಮಾತುಕಥೆಯಂತೂ ಎಷ್ಟು ನಾಜೋಕು! ಆದರೆ ಅದೇ ಸೌಂದರ್ಯದ ಹಿಂದೆ ಎಂಥಾ ಕೆಟ್ಟಗುಣಗಳ ಕಂತೆಯಿದೆ. ಎಂಥ ಕಟು ಕತೆಯಿದೆ. ನನ್ನೊಬ್ಬಳನ್ನು ಬಿಟ್ಟು ಅದನ್ನು ಇನ್ನು ಬಲ್ಲವರ್‍ಯಾರು"- ಎಂದು ವಿಷಾದಿಸುತ್ತಾಳೆ.

"ಅವನೇನಾದ್ರೂ ತನ್ನ ದುರ್ಗುಣಗಳನ್ನೆಲ್ಲಾ ಬಿಟ್ಟು ಒಳ್ಳೆಯವನಾದ್ರೆ ಖಂಡಿತಾ ಅವನಿಗೆ ನನ್ನ ಬದುಕಿನಲ್ಲಿ ಸ್ವಾಗತವಿದೆ" ಎಂದು ಹೇಳುವ ಜಗದಾಂಬಾ ಮರುಕ್ಷಣವೇ ಶುಷ್ಕನಗೆ ನಕ್ಕು, "ಅವನು ಈ ಜನ್ಮದಲ್ಲಿ ಒಳ್ಳೆಯವನಾಗೊಲ್ಲ ಅಂತ ನಂಗಂತೂ ಗ್ಯಾರಂಟಿ ಆಗ್ಬಿಟ್ಟಿದೆ"– ಎಂದು ತನ್ನ ಹತಾಷೆಯನ್ನು ಸ್ಪಷ್ಟ ಪಡಿಸ್ತಾಳೆ.

"ಅವ್ರು ಎಷ್ಟೇ ಕ್ರೂರಿಯಾದ್ರೂ, ಕುಡುಕರಾದ್ರೂ- 'ನನ್ನ ಗಂಡ' ಅನ್ನೋ ಪ್ರೀತಿ ಮನಸಲ್ಲಿ ಇದ್ದೇ ಇರುತ್ತಲ್ವಾ- ಅವ್ರು ಕೆಲಸ ಕಳಕೊಂಡು ಜೈಲಿನಲ್ಲಿ ಕೊಳೆಯೋ ಹಾಗೆ ಮಾಡೋ ಅಷ್ಟು ಕ್ರೂರಿ ನಾನಾಗಲಾರೆ ಅವರು ಕಟುಕರಾದ್ರೆ ನಾನೂ ಯಾಕೆ ಆಗ್ಬೇಕು ಅಲ್ವಾ" ಎಂದು ತನ್ನ ಮಾನವೀಯ ವೇದನೆಯನ್ನು ತೋರುತ್ತಾಳೆ.

"ಅವ್ರು ಇನ್ನೊಂದು ಮದ್ವೆ ಆದ್ರೆ ಮಾತ್ರಾ ನಾನಂತೂ ಖಂಡಿತಾ ಸಹಿಸೊಲ್ಲ ಈಗಾಗ್ಲೇ ಅವನಿಂದಾಗಿ ಒಂದು ಹೆಣ್ಣು ಜೀವ ಸತ್ತುಸತ್ತು, ಮಿಕ್ಕ ಐದು ಹೆಣ್ಣು ಜೀವಗಳು ಬದುಕಿನ ಚಕ್ರದಡಿ ಬಿದ್ದು ನರಳ್ತಾ ಇವೆ- ಅವರ ಹಸ್ತಕ್ಕೆ ಇನ್ನೊಂದು ಹೆಣ್ಣು ಜೀವ ಬಿದ್ದು ನರಳೋದನ್ನ ನಾ ಸಹಿಸಲಾರೆ" ಎನ್ನುತ್ತಾಳೆ.

ತಾಯಿ ಮನೆಯಲ್ಲಿ ಅವಳೊಡನೆ, ಅವಳ ಇಬ್ಬರು ಮಕ್ಕಳೂ ಇದ್ದಾರೆ. ಸತ್ತು ಹೋಗಿದ್ದ ಮೊದಲನೇ ಹೆಂಡತಿಯ ಹೆಣ್ಣು ಮಗು, ಅವಳ ತಾಯಿ ಮನೆಯಲ್ಲೇ

ಬೆಳೆಯುತ್ತಿದೆ, ಇನ್ನೊಂದು ಮಗು ಅತ್ತೆ ಮನೆಯಲ್ಲೇ ಇದೆ–ಅದು ಅವರಣ್ಣನ ಮಗುವೋ ಅಥವಾ ಮೊದಲನೇ ಹೆಂಡತಿಯ ಮಗುವೋ- ಇನ್ನೂ ಸ್ಪಷ್ಟ ವಾಗಿಲ್ಲ.

ಟೀಚರ್ ಕೆಲಸಕ್ಕೆ ಹೋಗಿ ಸಂಪಾದಿಸುತ್ತಾ ತನ್ನ ಪುಟ್ಟ ಮಕ್ಕಳನ್ನು ಪ್ರೀತಿಯಿಂದ ಬೆಳೆಸುತ್ತಿರುವ ಜಗದಾಂಬಾಳ ಮುಖದಲ್ಲಿ, ನೋವಿನ ಛಾಯೆಯನ್ನೂ ಹೊಡೆದಟ್ಟಿ, ಹೂನಗೆಯನ್ನು ಅರಳಿಸುವಲ್ಲಿ ಮಕ್ಕಳಾದ್ರೂ ಶಕ್ತರಾಗುವರೋ ಕಾದು ನೋಡಬೇಕು.

ಜಿ. ಕೆ. ಸಾವಿತ್ರಿ

---

## ಸಾಹಸಿ ಮಹಿಳೆ

ಪ್ರತಿ ಹಂತದಲ್ಲೂ ಕಡಿವಾಣ ಹಾಕುವ ಸಮಾಜದಲ್ಲಿ, ತನ್ನ ಅಪೇಕ್ಷೆಗಳ ಈಡೇರಿಕೆಗೆ ಹೆಣ್ಣು ಪ್ರತಿ ಹಂತದಲ್ಲೂ ಹೋರಾಡಬೇಕಾಗುತ್ತದೆ.

ಒಮ್ಮೆ ಒಲಿಂಪಿಕ್ ಕ್ಷೇತ್ರವನ್ನು ಲಿಂಗಬೇಧವು ಕಗ್ಗತ್ತಲಿನಂತೆ ಆವರಿಸಿತ್ತು. ಮಹಿಳೆಯರು ಆಟದಲ್ಲಿ ಭಾಗ ವಹಿಸುವ ಮಾತಿರಲಿ, ವೀಕ್ಷಿಸುವ ಅವಕಾಶವನ್ನು ಅವರಿಂದ ಕಸಿದುಕೊಂಡಿತ್ತು. ಅಲ್ಲಿನ ನಿಷೇಧವನ್ನು ಮೀರಿ, ಸ್ಪರ್ಧೆಯಲ್ಲಿ ಭಾಗವಹಿಸಲೆಂದೋ, ನೋಡಲೆಂದೋ ಕಣ್ತಪ್ಪಿಸಿ ಹೋಗಿಬಿಟ್ಟರೆ, ಅವಳನ್ನು ಸಮೀಪದ ಶಿಖರದ ತುತ್ತತುದಿಯಿಂದ ಪ್ರಪಾತಕ್ಕೆಸೆಯುವ ಕ್ರೂರ ಶಿಕ್ಷೆ ವಿಧಿಸಲಾಗುತ್ತಿತ್ತು.

ಪ್ರತಿಭಾವಂತ ಆಟಗಾರರ ಮನೆತನದಲ್ಲೇ ಹುಟ್ಟಿದ್ದವಳು ಫೆರಿನಿಸ್. ತನ್ನ ಪೂರ್ವಜರಂತೆಯೇ ಒಲಿಂಪಿಕ್ ಆಟದ ಬಗ್ಗೆ ಅಪಾರ ಪ್ರೇಮ-ಆಸಕ್ತಿಗಳನ್ನು ಮೈಗೂಡಿಸಿಕೊಂಡಿದ್ದವಳು.

ಅವಳ ಹಾದಿಯನ್ನೇ ಹಿಡಿದ ಅವಳ ಮಗ ಪೆಸಿಡೋರಿಜ್, ತನ್ನ ವಂಶದ ಒಲಂಪಿಕ್ ಪ್ರೇಮವನ್ನು ಹೀರಿ ಬೆಳೆದ ಕುಡಿಯಾಗಿ, ಒಲಿಂಪಿಕ್ ಕ್ಷೇತ್ರದ ಪ್ರಖ್ಯಾತ ಆಟಗಾರನಾಗಿ, ಒಮ್ಮೆ ಬಾಕ್ಸಿಂಗ್‌ನಲ್ಲಿ ಪ್ರಶಸ್ತಿಯನ್ನೂ ಗೆದ್ದ.

ಒಂದು ಕಡೆ ಮಗ ಪೆಸಿಡೋರಿಜ್‌ನು ಬಾಕ್ಸಿಂಗ್ ಪ್ರಶಸ್ತಿ ಗೆಲ್ಲುವುದನ್ನು ನೋಡುವ ಹಂಬಲ; ಮತ್ತೊಂದೆಡೆ ಸಿಂಹಗಾವಲಾದ ತನ್ನ ನೆರಳೂ ಸಹ ಆ ಕಡೆ ಹಾಯಲು ಬಿಡದ ಆ ನಿಷೇಧವನ್ನು ಮೀರಲು, ಅವಳು ಅನಿವಾರ್ಯವಾದ ಒಳದಾರಿಯನ್ನೇ ಹಿಡಿದಳು. ಪುರುಷ ವೇಷ ಧರಿಸಿ ಬಂದು ತನ್ನ ಮಗ ಬಾಕ್ಸಿಂಗ್ ಪ್ರಶಸ್ತಿ ಗೆಲ್ಲುವುದನ್ನು ಕಂಡಳು.

ಮಮತೆಯ ತೀವ್ರತೆ ಅವಳ ತಾಳ್ಮೆಯ ಕಟ್ಟನ್ನು ಹರಿದು ಹಾಕಿತ್ತು. ಪ್ರೇಮಾತಿಶಯದಿಂದ ಓಡಿಬಂದು ಆಕೆ ತನ್ನ ಮಗನನ್ನು ಅಪ್ಪಿಕೊಂಡಳು. ಆಗ ಧರಿಸಿದ್ದ ಪುರುಷವೇಷ ಜಾರಿಬಿದ್ದು, ಅವಳು ಸ್ತ್ರೀ ಎಂದು ಸಾಬೀತು ಪಡಿಸಿತ್ತು; ಪ್ರಪಾತ ಕೈ ಬೀಸಿ ಕರೆದಿತ್ತು.

ಕೆಲವು ದಿನಗಳ ಹಿಂದಷ್ಟೇ ಅವಳು ತನ್ನ ಗಂಡನನ್ನು ಕಳೆದುಕೊಂಡಿದ್ದ ವಿಚಾರವೂ, ಅವಳ ಮನೆತನದ ಕ್ರೀಡಾ ಸಾಧನೆಗಳೂ ಎಲ್ಲರಿಗೂ ಗೊತ್ತಿದ್ದರಿಂದ, ಅವಳು ಕರುಣಾರ್ಹಳೂ, ಗೌರವಾರ್ಹಳೂ ಆದಳು, ಕ್ರೂರ ಶಿಕ್ಷೆಯಿಂದ ಪಾರಾದಳು.

# ಓದುಗರ ವಿಭಾಗ

ಮಹಿಳೆಯರ ಏಳಿಗೆಗಾಗಿ ನಿರಂತರ ಮಾನವಿ ಶ್ರಮಿಸುತ್ತಾ ಅಡೆತಡೆಗಳನ್ನು ದಾಟಿ ಜಯಶಾಲಿಯಾಗಿ ಮುಂದೆ ಸಾಗಲಿ ಎಂದು ಹಾರೈಸುತ್ತೇನೆ.

—ರತ್ನಾತನಯ ಮಂಜು
ಶಿರಸಿ

ಮಾನವಿ ಹೆಸರು ಮುದ್ದಾಗಿರುವಂತೆಯೇ ಅರ್ಥ ಪೂರ್ಣವಾಗಿದೆ, 'ಮಾನವಿ' ಮೊದಲ ಸಂಚಿಕೆಯಲ್ಲಿ ಎಚ್. ಎಸ್. ಚಂಪಾವತಿ ಸಿಸಿಲಿಯಮ್ಮನ ಜಗೆಗೆ ಬರೆಯುತ್ತಾ ಬಂದೂಕು, ಪಿಸ್ತೂಲುಗಳನ್ನು ಯಾಕೋ ನೆನಪು ಮಾಡಿಕೊಳ್ಳುತ್ತಾರೆ. ಸಿಸಿಲಿಯಮ್ಮನಂತಹ ದಿಟ್ಟ ಹಠವಾದಿ ಹೆಣ್ಣಿನ ಕ್ರೂರ ಸಾವಿನ ಹಿನ್ನೆಲೆಯಲ್ಲಿ ಅದು ಹುಟ್ಟಿದೆಂದು ತುಂಬಾ ಸತ್ಯವಾಗಿ ಹೊಳೆಯುವು ದಾದರೂ ಅದು ನಕ್ಸಲೈಟ್ ಮಾರ್ಗದ ಕ್ರಿಮಿನಲ್ ಭಾವನೆಗಳನ್ನು ಎತ್ತಿ ಹಿಡಿಯುತ್ತಿರುವುದರ ಅಪಾಯದ ಸೂಚನೆ ನೀಡುತ್ತವೆ. ಬಂದೂಕು ನಮ್ಮ ಹೇಡಿತನ ವನ್ನು ನಮ್ಮ ಸಮಸ್ಯೆಗಳಿಗೆ ಪರಿಹಾರ ಅಲ್ಲವೆಂಬುದನ್ನು ಚರಿತ್ರೆ ಮತ್ತೆ ಮತ್ತೆ ಸ್ಪಷ್ಟಪಡಿಸಿದೆ.

—ಎನ್. ಶೇಕರ್ ಉಷಾ
ಕೇರಳ

ಕೆಲವು ಆಸಕ್ತ ಸ್ತ್ರೀಯರೇ ಒಟ್ಟಾಗಿ ಪತ್ರಿಕೆ ಯೊಂದನ್ನು ಹೊರತರುವ ನಿಮ್ಮ ಸಾಹಸ ಕೊಂಡಾಡ ತಕ್ಕದ್ದೇ. ಸುತ್ತಲೂ ಕತ್ತಲು ಕವಿದು ಕಪ್ಪಾಗುತ್ತಿರುವ ಹೆಣ್ಣುಗಳ ಧ್ವನಿಗೆ ಬಣ್ಣ ಕಟ್ಟಬೇಕೆಂಬ ನಿಮ್ಮ ಹಂಬಲಕ್ಕೆ ನನ್ನ ಸಹಕಾರ ಇದ್ದೇ ಇದೆ.

—ಮುಕುಂದರಾಜ್
ಕೆ. ಆರ್. ಪೇಟೆ

'ಮಾನವಿ' ಮೊದಲ ಸಂಚಿಕೆಯಲ್ಲಿಯೇ ತನ್ನ ನಿಲುವನ್ನು ತುಂಬಿ ಕೊಂಡಿದ್ದಾಳೆ ಸ್ತ್ರೀ ಸಮಾಜಕ್ಕೆ ಆಗುತ್ತಿರುವ ದೌರ್ಜನ್ಯವನ್ನೂ ತೊಡೆದು ಹಾಕಲು ರಾಜ್ಯಾದ್ಯಂತ ಈ ಪತ್ರಿಕೆ ಪ್ರಸರಿಸಲಿ ಎಂದು ಹಾರೈಸುತ್ತೇನೆ.

—ಕೆ. ಪಿ. ಕಲ್ಯಾಣಿನಾಗರಾಜ್
ಇಮ್ಮಡಿಹಳಿ

ಮಹಿಳಾ ಜಾಗೃತಿಯ ಬಗೆಗೆ ವಿಚಾರ ಮಾಡುವ ವರೆಲ್ಲಾ "ಹೋರಾಟ ಮತ್ತು ಬರವಣಿಗೆ" ಎರಡು ಜೊತೆ ಜೊತೆಗೆ ಸಾಗಬೇಕಾದ ಅನಿವಾರ್ಯತೆಯನ್ನು ಮನಗಾಣಬೇಕಾಗಿದೆ. ಈ ಕೆಲಸವನ್ನು 'ಮಾನವಿ' ಬಳಗ ವ್ಯವಸ್ಥಿತವಾಗಿ ಮಾಡಲಿ ಎಂಬುದು ನನ್ನ ಬಯಕೆ, ನೀವು ಹಾಕಿಕೊಳ್ಳುವ ಎಲ್ಲಾ ಜವಾಬ್ದಾರಿಯುತ ಹೋರಾಟ ಹಾಗೂ ವಿಚಾರಗಳಿಗೆ ನನ್ನ ಸಂಪೂರ್ಣ ಬೆಂಬಲವಿದೆ.

—ಕೆ. ಎಂ. ಮುನಿಕೃಷ್ಣಪ್ಪ
ಬೆಂಗಳೂರು

ಸಮಾಜದಲ್ಲಿ ಹೆಣ್ಣಿಗೆ ವಿಶಿಷ್ಟ ಸ್ಥಾನ ದೊರಕಿಸಿ ಕೊಡಲು ಹೊರಾಡುತ್ತಿರುವ ನಿಮಗೆ ಜಯವಾಗಲಿ, "ಮಾನವಿ" ಪತ್ರಿಕಾ ಲೋಕದಲ್ಲೇ ಹಿಮಾಲಯದೆತ್ತರ ಬೆಳೆದು ಹೊಸ ದಾಖಲೆ ನಿರ್ಮಿಸುವಂತಾಗಲಿ ಎಂದು ಹಾರೈಸುತ್ತೇನೆ.

—ಅಲ್ಲಾ ಬರಷ್
ಕೊಡಿಗೇನಹಳ್ಳಿ

'ಮಾನವಿ'ಯ ಸಾಧನೆ ಬಗ್ಗೆ ನನಗೂ ಹೆಮ್ಮೆ ಇದೆ. ನಿಮ್ಮ ಸಾಧನೆಯಿಂದ ನೀವು ಶೀಘ್ರದಲ್ಲಿ ಮಹತ್ವದ ಸ್ಥಾನ ಪಡೆಯುವ ಭರವಸೆಯೂ ನನಗಿದೆ. ಹೊಸ ಬಗೆಯಲ್ಲಿ ಅತ್ಯಾಕರ್ಷಕವಾಗಿ ಮನಸೆಳೆಯುವ "ಮಾನವಿ" ಎಲ್ಲೆಡೆಯಲ್ಲೂ ಸ್ವಾಗತಾರ್ಹವಾಗುವುದು ಗಮನಾರ್ಹ.

—ಬುಚ್ಚಿ ಬಾಬು
ಕೊಡಿಗೇನ ಹಳ್ಳಿ

ತಮ್ಮ ಈ ಕಾರ್ಯ ಯಶಸ್ವಿಯಾಗಿ ಮುನ್ನಡೆಯ ಲೆಂದು ಆತ್ಮೀಯವಾಗಿ ಶುಭವನ್ನು ಕೋರುವ.

—ವ. ಉಮೇಶ್ ಕಾರಂತ
ಮಂಗಳೂರು

ನೋವು ನಲಿವುಗಳನ್ನು ಹೊತ್ತು ತರುವ "ಮಾನವಿ" ಸ್ತ್ರೀ ಪುರುಷರ ತನುಮನಗಳನ್ನು ಗೆದ್ದು ಬೆಳಗಲಿ ಎಂದು ಹೃದಯಪೂರ್ವಕವಾಗಿ ಹಾರೈಸುತ್ತೇವೆ.

—ವಿಮಲ್ ಎನ್. ಆರ್.
ಮುಂಡಗೋಡು (ಉ.ಕ.)

ಪತ್ರಿಕೆ ತುಂಬಾ ಚೆನ್ನಾಗಿದೆ. ಆದರೆ ಇದರ ಕೆಲವು ಲೇಖನಗಳನ್ನು ನಮ್ಮ ತಾಯಿಯವರಿಗೆ ಓದಿ ಹೇಳಿದಾಗ ಮತ್ತು ಒಂದಿಬ್ಬರು ಹುಡುಗಿಯರೂ ಈ ಪತ್ರಿಕೆಯನ್ನು ಓದಿದಾಗ ವಿಷಯ ಚೆನ್ನಾಗಿದೆ ಆದರೆ ನಮ್ಮಂತೆ ಸ್ವಲ್ಪ ಓದಿಕೊಂಡವರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ ಎಂದರು. ಅಂದರೆ ವಿಷಯ ಶ್ರೀಮಂತಿಕೆ ಹಾಗೂ ಪದಗಳ ಬಳಕೆಯ ಮಹತ್ವದಿಂದಾಗಿ ಅವರಿಗೆ ಸುಲಭವಾಗಿ ಅರ್ಥವಾಗಲಿಕ್ಕಿಲ್ಲ. ಅದ್ದರಿಂದ ಪತ್ರಿಕೆಯಲ್ಲಿ ಒಂದೆರೆಡು ಸರಳ ಶೈಲಿಯ ಲೇಖನ ಬಂದರೆ 'ಮಾನವಿ' ಅವರ ಮನ ಗೆಲ್ಲುವುದರಲ್ಲಿ ಸಂಶಯವಿಲ್ಲ ಏನೇ ಆದರೂ ಉಳಿಯಲಿ, ಮಹಿಳೆ ಬೆಳೆಯಲಿ.

—ವಸುಂಧರಾ
ಬಾಗೋಡು

"ಮಾನವಿ" ಹೆಸರು ತುಂಬಾ...ತುಂಬಾ ನಾನು ಮೆಚ್ಚಿಕೊಂಡ ಹೆಸರು. ನಿಮ್ಮ ಎಲ್ಲಾ ಪ್ರಯತ್ನಕ್ಕೆ ನನ್ನ ಹೃದಯ ತುಂಬಿದ ಸಹಕಾರ ಉಂಟು.

—ಬ. ಪುರುಷೋತ್ತಮ
ಶಿವಮೊಗ್ಗ

ಸ್ತ್ರೀಯರನ್ನು ದೇವರೆಂದು ಪೂಜಿಸುವ ಈ ಸಮಾಜದಲ್ಲಿ ಶೋಷಣೆಯು ನಡೆದುಕೊಂಡು ಬಂದಿದೆ, ಅದರ ಪ್ರತಿಭಟನಾರ್ಥವಾಗಿ ತಾವು ಸಿಡಿದೆದ್ದು ಜಾಗೃತಿ ಮೂಡಿಸುವತ್ತ ಪ್ರಯತ್ನಿಸುತ್ತಿರುವುದು ಸ್ತುತ್ಯಾರ್ಹ. ತಮ್ಮ ಪ್ರಯತ್ನಕ್ಕೆ ಯಶ ದೊರೆಯಲೆಂದು ಹಾರೈಸುವ.

—ಬಸವರಾಜ ಭೂಸರೆಡ್ಡಿ
ಶಲವಡಿ

ಒಂದು ಎರಡನೆಯ ಸಂಚಿಕೆಯ ಲೇಖನಗಳೆಲ್ಲವೂ 'ಮಾನವಿ'ಯ ಭವಿಷ್ಯದ ಭದ್ರತೆಯ ಅಳವನ್ನೂ ಮತ್ತು ಯಶಸ್ಸಿನ ಹಾದಿಯನ್ನು ಸ್ಪಂದಿಸುವಂತಿವೆ "ಮಾನವಿಯ ಉದ್ದೇಶ ಸಫಲವಾಗಲೆಂಬುದು ನನ್ನ ತುಂಬು ಹೃದಯದ ಬಯಕೆ.

—ರೂಪ
ಹುಬ್ಬಳ್ಳಿ

ಮಹಿಳೆಯ ನೋವು, ನೋವಿನ ಪ್ರತಿಭಟನೆಯ ಧ್ವನಿ ಇದರ ಬಗ್ಗೆ ತಾವು ದ್ವೈಮಾಸಿಕ ಪತ್ರಿಕೆ ತರುತ್ತಿರುವುದು ನಿಜಕ್ಕೂ ಶ್ಲಾಘನೀಯ. ಮಾನವಿ ನೊಂದ ಹೆಣ್ಣಿನ ಬಗ್ಗೆ ಅನುಕಂಪ ತುಂಬಿ ಮಹಿಳೆಯರಿಗೆ ಆಸರೆಯಾಗಿ ಇರಲಿ. ಶತಮಾನದಿಂದಲೂ ಶೋಷಣೆಗೆ ಸಿಕ್ಕಿದ ಹೆಣ್ಣಿನ ಕಣ್ಣು ತೆರೆಯಿಸಿ ಹೊಸ ಸಮಾಜಕ್ಕೆ ಸ್ಪಂದಿಸುವಂತಾಗಲಿ. ನನ್ನಿಂದಾಗುವ ನೆರವು ಇದಕ್ಕೆ ಖಂಡಿತಾ ಇದೆ.

ಪರಮಶಿವ ನಡುಬೆಟ್ಟ
ಮೈಸೂರು

ಮಾನವಿ ವೈವಿಧ್ಯಮಯ ಲೇಖನಗಳಿಂದ ಶೋಭಿತಳಾಗಿ ಓದುಗರ ಮನ ತಣಿಸಲಿ ಎಂದು ಹಾರೈಸುವೆ, ಪುರುಷ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದಿರುವ ಮಾನವಿಗೆ ನನ್ನ ಬೆಂಬಲವಿದೆ.

—ಶೈಲಾ ಸಾಳುಂಕೆ
ಜೊಯಡಾ

ಮಾನವಿ ಇನ್ನೂ ಎತ್ತರಕ್ಕೆ ಬೆಳೆಯಬೇಕು. ದೊಡ್ಡ ಹೊಣೆಗಾರಿಕೆಯನ್ನೇ ಹೊತ್ತಿದ್ದೀರಿ. ನಿಮಗೆ ಶುಭವಾಗಲಿ.

—ಆರ್. ಜಯರಾಮ್
ಮೈಸೂರು

ನಿಮ್ಮ ಈ ಹೊಸ ಪತ್ರಿಕೆ ಕನ್ನಡ ಪತ್ರಿಕಾ ರಂಗದಲ್ಲೇ ಅತ್ಯುನ್ನತ ಸ್ಥಾನ ಪಡೆಯಲಿ ಎಂದು ಮನ ತುಂಬ ಹರಸುತ್ತೇನೆ.

—ತೊ. ಸಿ. ಜಗದೀಶ್
ಕೊಡಿಗೇನಹಳ್ಳಿ

# ನಿನ್ನ ಪ್ರೀತಿ

ನಿನ್ನ ಪ್ರೀತಿ ಸಾಗರ
ತುಂಬ ಆಳ ಅಗಲ
ಒಳಗೊಳಗೇ ತುಳುಕಾಡಿವೆ
ಮಕರ ನಕ್ರ ತಿಮಿಂಗಿಲ.

ನಿನ್ನ ಪ್ರೀತಿ ವಸುಂಧರಾ
ನಳನಳಿಸುವ ಮಡಿಲು
ಸಾಕು ಒಮ್ಮೆ ನಡುಗಿದರೆ
ಬದುಕು ಮಣ್ಣು ಪಾಲು.

ನಿನ್ನ ಪ್ರೀತಿ ನೀಲಬಾನು
ಕಣ್ಣಿಗೆನಿತು ಸುಂದರ
ಕಪ್ಪುಮೋಡ ತುಂಬಿದಾಗ
ಅಬ್ಬ ಎನಿತು ಭೀಕರ ?

ನಿನ್ನ ಪ್ರೀತಿ ವೀಣೆಗಾನ
ಮೋಹ ನೇಹವದರುಲಿ
ಆಗಾಗಿನ ಅಪಸ್ವರವನು
ಹೇಗೆ ಹೇಳುವುದಾರಲಿ ?

ನಿನ್ನ ಪ್ರೀತಿ ಸೂಸುಗಾಳಿ
ಮಧುರ ಭಾವಕೆ ಸ್ವಾಗತ
ಒಮ್ಮೊಮ್ಮೆ ಆಗುವುದು
ಬೀಸಿ ಒಗೆವ ಮಾರುತ


ಉಪಮೆ ಇರದ ನಿನ್ನ ಪ್ರೀತಿ
ಅರ್ಥವಾಗದ ಅನುಭವ
ವಸುಧೆ–ಬಾನು–ವೀಣೆಯಲ್ಲ
ಜೀವರಹಿತ ಭಾವ.

–ಗುರುದೇವಿ
ಯು.ಎಚ್. ಮಠ

# ನಲ್ಲಾ

ನೀನೊಂದು ಅಭಯಾರಣ್ಯ
ನಾನೊಬ್ಬ ಪ್ರವಾಸಿಗ
ದೂರದಿಂದೋಡೋಡಿ ಬರುವೆ ದಣಿದು
ನಾ ನಿನ್ನಂದದ ಸಿರಿಯ ಕಾಣಲು
ಕಾಣಿಸುವುವೇನು ನಿನ್ನೊಳಗೆ ನೀನು
ಹಾವು, ಚೇಳು, ಕಾಳೋರಗ
ಹುಲಿ. ಸಲಗ. ನರಿ
ಅಬ್ಬ ! ಯಾರು ಬರುವರು ನಿನ್ನೊಳಗೆ ?
ಕಾಣಬೇಕು ನಿನ್ನೊಳಗೆ ನಾನು
ಹಸಿರು ತುಂಬಿದ ಮರ
ಮೇಘದ ನಾದಕ್ಕೆ
ನಲಿದಾಡೋ ನವಿಲು
ಜಿಗಿದೋಡೋ ಜಿಂಕೆ
ಕಂಪ ಬೀರುವ
ಕಾಡು ಮಲ್ಲಿಗೇ
ಕಾಡು ಗುಲಾಬಿ
ಸೌಗಂಧಿಕ ಪುಷ್ಪ
ಇಲ್ಲವಾದರೆ ಹಿಂದೋಡುವೆನು ಬಲುಬೇಗ
ಮತ್ತೊಂದು ಗೊಂಡಾರಣ್ಯಕ್ಕಲ್ಲ
ಆತ್ಮಹತ್ಯೆಗೂ ಅಲ್ಲ
ದಿಟ್ಟ ಹೆಜ್ಜೆಯ
ಬದುಕಿನೆಡೆಗೆ.

–ಎಂ. ಎ. ಪ್ರೀತ



# ಗಾಂಧಿ ದೃಷ್ಟಿಯಲ್ಲಿ ಹೆಣ್ಣು

ಮದರಾಸಿನ ಪಾಚಿಯಪ್ಪ ಕಾಲೇಜಿನಲ್ಲಿ ಗಾಂಧೀಜಿಯವರು ಬಾಲಪತ್ನಿ (Child wife) ಮತ್ತು ಬಾಲ ವಿಧವೆ (Child widow) ಯರನ್ನು ಕುರಿತು ಯುವ ವಿದ್ಯಾರ್ಥಿಗಳೊಡನೆ ಮಾತನಾಡುತ್ತಿದ್ದರು.

ವಿದ್ಯಾವಂತನಾದ ನನ್ನ ಗೆಳೆಯನೊಬ್ಬ "ಭಾರತದ ಬೇರಾವುದೇ ಭಾಗಕ್ಕಿಂತ ಮದರಾಸಿನಲ್ಲಿ ಬಾಲವಿಧವೆಯರಿಗೆ ಕಷ್ಟಕಾರ್ಪಣ್ಯಗಳು ಹೆಚ್ಚು ಎಂದು ನುಡಿದಿದ್ದಾನೆ. ಈ ಮಾತಿನ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ನನಗಿನ್ನು ಸಾಧ್ಯವಾಗಿಲ್ಲ. ಅದನ್ನು ನನಗಿಂತ ಹೆಚ್ಚಾಗಿ ನೀವು ತಿಳಿದುಕೊಳ್ಳಬೇಕು. ನನ್ನ ಸುತ್ತ ನೆರೆದಿರುವ ಹದಿಹರೆಯದ ಯುವಕರೇ ಅಬಲೆ ವಿಧವೆಯರ ಬಗ್ಗೆ ಪ್ರೀತಿ, ಶ್ರದ್ಧೆ, ಗೌರವಗಳನ್ನು ನಿಮ್ಮಲ್ಲಿ ರೂಪಿಸಿಕೊಳ್ಳಬೇಕು. ಅದು ನಿಮಗೆ ಸಾಧ್ಯವಾದರೆ ಉತ್ತಮ ಮಾರ್ಗದರ್ಶನವನ್ನು ನೀಡಲಿಚ್ಛಿಸುವೆ.

ನಿಮ್ಮಲ್ಲಿ ಬಹುಸಂಖ್ಯಾತರು ಅವಿವಾಹಿತರೂ, ಬ್ರಹ್ಮಚಾರಿಗಳು ಆಗಿ ಉಳಿದಿದ್ದೀರೆಂದು ನಾನೆಂದುಕೊಂಡಿದ್ದೇನೆ. ತನ್ನ ತಂಗಿಯ ಹಾಗೂ ವಿಧವೆಯ ಮೇಲೆ ಕಾಮುಕ ದೃಷ್ಟಿಯನ್ನು ಇಡುವವನು ಬ್ರಹ್ಮಚಾರಿಯಲ್ಲ.

"ಯಾವ ಹುಡುಗಿ ವಿಧವೆಯಲ್ಲವೊ ಅವಳನ್ನು ನಾನು ಮದುವೆಯಾಗುವುದಿಲ್ಲ" ಎಂದು ಪೂಜ್ಯ ನಿರ್ಧಾರವನ್ನು ನೀವು ಕೈಗೊಳ್ಳಬೇಕೆಂಬುದು ನನ್ನ ತೀವ್ರ ಅಪೇಕ್ಷೆ. ನೀವು ಹಾಗೆ ನಿರ್ಧಾರ ಮಾಡಿ ಬಾಲ್ಯದಲ್ಲಿಯೇ ವಿಧವೆಯಾಗಿದ್ದ ಹುಡುಗಿಯನ್ನು ಹುಡುಕಿ ಅಂಥವಳು ಸಿಗದಿದ್ದರೆ "ನಾನು ಮದುವೆಯೇ ಆಗುವುದಿಲ್ಲ" ಎಂದು ಮನಸ್ಸಿನಲ್ಲಿ ಗಟ್ಟಿಮಾಡಿಕೊಳ್ಳಬೇಕು. ಅಂಥ ನಿರ್ಧಾರವನ್ನು ವಿಶ್ವಕ್ಕೆ, ನಿಮ್ಮ ತಂದೆ–ತಾಯಿಯರಿಗೆ, ಅಕ್ಕ ತಂಗಿಯರಿಗೆ ಘೋಷಿಸಬೇಕು.

ವೈವಾಹಿಕ ಬದುಕಿನಲ್ಲಿ ಗಂಡನಿಗೆ ಮನವೊಲಿದ ಜೊತೆಗಾತಿಯೇ ಆಗದೇ, ಎಷ್ಟೋ ಸಾರಿ ಗಂಡನೊಡನೆ ಬದುಕುವ ಮುನ್ನವೇ ಅವನನ್ನು ಇದ್ದಕ್ಕಿದ್ದಂತೆಯೇ ಕಳೆದುಕೊಂಡ ಹತಭಾಗಿನಿಯರನ್ನು ಒಂದೇ ಸಾರಿಗೆ "ವಿಧವೆ" ಎಂದು ನಾನು ಹೇಳಲಾರೆ. ಅದು 'ವಿಧವೆ' ಪದದ ತಪ್ಪು ಗ್ರಹಿಕೆ ಮಾತ್ರವಲ್ಲ, ಇಡೀ ಭಾಷೆಯ ತಪ್ಪು ಗ್ರಹಿಕೆ ದೈವ ದ್ರೋಹವೂ ಕೂಡ.

ಹಿಂದೂ ಧರ್ಮದಲ್ಲಿ "ವಿಧವೆ" ಎಂಬುದು ಪೂಜ್ಯತೆಯನ್ನು ಪವಿತ್ರತೆಯನ್ನು ಹೊಂದಿರುವ ಪದ. "ವಿಧವೆ" ಎಂದರೆ ನಿಜವಾಗಿಯು ಏನರ್ಥ ಎಂಬುದನ್ನು ಚನ್ನಾಗಿ ತಿಳಿದಿರುವ ರಮಾಬಾಯಿರಾನಡೆಯಂಥ ನಿಜವಾದ ವಿಧವೆಯರನ್ನು ಗೌರವಿಸುವವನು ನಾನು. "ಗಂಡ" ಎಂಬುವನು 'ಏನಾಗಿರಬೇಕು' ಎಂಬುದನ್ನು ಕೂಡಾ ಕಿಂಚಿತ್ತೂ ಅರಿಯದ ಒಂಬತ್ತು ವರ್ಷ ವಯಸ್ಸಿಗಿಂತ ಚಿಕ್ಕ ಬಾಲವಿಧವೆಯರು ಈ ನಾಡಿನಲ್ಲಿದ್ದಾರೆ. ನನ್ನ ಈ ಮಾತು ಸುಳ್ಳಾದರೆ, ಈವರೆಗಿನ ನನ್ನೆಣಿಕೆಗಳು ಸುಳ್ಳಾಗುತ್ತವೆ. ಆದರೆ ಅಂಥವರಿದ್ದರೆ, ಅವರನ್ನೇ ಮದುವೆಯಾಗುವೆನೆಂಬ ನಿರ್ಧಾರ ಕೈಗೊಳ್ಳುವುದು ನಿಮ್ಮ ಆದ್ಯ ಕರ್ತವ್ಯ. ಶಾಪದಿಂದ ನಮ್ಮನ್ನೆಲ್ಲಾ ವಿಮುಕ್ತಿ ಗೊಳಿಸಬೇಕೆಂಬ ಬಯಕೆ ನಿಮ್ಮಲ್ಲಿದ್ದರೆ ಒಂದು ರಾಷ್ಟ್ರದ ಪಾಪವೆಲ್ಲಾ ವಾಸ್ತವಿಕವಾಗಿ ಆ ರಾಷ್ಟ್ರದ ಹೆಣ್ಣು ಮಕ್ಕಳ ವೈಧ್ಯವ್ಯವಾಗಿ ಪರಿಣಮಿಸುತ್ತಿವೆ. ಎಂದು ನಂಬಿದ್ದೇನೆ. ಎಲ್ಲಾ ಪಾಪಗಳೂ ಒಗ್ಗೂಡಿ ನಮ್ಮನ್ನು ದಾಸ್ಯದ ಅಂಚಿಗೆ ತಳ್ಳಿವೆಯೆಂದು ನಂಬುತ್ತೇನೆ.

ಒಂದು ಅತ್ಯದ್ಭುತ ನಾಡು ಜನಸಾಮಾನ್ಯರ ಮನೆಯಿಂದಲೇ ರಚಿತವಾಗಬಹುದು. ಗಂಡಿನಷ್ಟೇ ಸಂಖ್ಯೆಯಲ್ಲಿ ಹೆಣ್ಣು ಸಹ ಅದನ್ನಾಳಲು ಅಲ್ಲಿರದಿದ್ದರೆ ಆ ನಾಡಿಗೆ ಕಿಂಚಿತ್ತೂ ಬೆಲೆಯಿಲ್ಲ. ಆ ನಾಡು ನಿರರ್ಥಕ.

ತನ್ನ ಅತ್ಯವಶ್ಯಕ ಬೇಕುಗಳನ್ನು ಪೂರೈಸಿಕೊಳ್ಳ ಬೇಕೆಂಬ ಮನಸ್ಸಿದ್ದರೂ ಅವಳಾಸೆ ಕ್ರೂರವಾಗಿ ನಿರ್ಬಂಧಿಸಲ್ಪಟ್ಟಿದೆ. ಹತಾಶೆಯ ವಿಧವೆಯರು ಇಲ್ಲಿರುವ ತನಕ ನಮ್ಮನ್ನು ನಾವು ಚನ್ನಾಗಿ ಆಳಿ ಕೊಳ್ಳಬಲ್ಲ, ಇತರರನ್ನು ಆಳಬಲ್ಲ ಸಮರ್ಥ ಪುರುಷರು ನಾವೆಂದು ಭಾವಿಸುವುದು ಸಾಧ್ಯವೇ? ಅಥವಾ ಮೂವತ್ತು ಸಾವಿರ ಜನಸಂಖ್ಯೆಯುಳ್ಳ ರಾಜ್ಯದ ಹಣೆ ಬರವನ್ನು ತಿದ್ದಬಲ್ಲ ವೀರ ಪುರುಷರೆಂದು ಭಾವಿಸು ತ್ತೀರಾ? ಅದು ಧಾರ್ಮಿಕತೆಯಲ್ಲ, ಧರ್ಮ ಬಾಹಿರತೆ. ನಾನು ಹಿಂದೂತ್ವದ ಚೈತನ್ಯದಿಂದ ಅದನ್ನು ಒತ್ತಿ ಹೇಳುತ್ತಿದ್ದೇನೆ. ಆದ್ದರಿಂದ ಪಾಶ್ಚಿಮಾತ್ಯ ಪ್ರಭಾವ ನನ್ನಲ್ಲಿದ್ದು ನನ್ನಿಂದ ಹಾಗೆ ಹೇಳಿಸುತ್ತಿದೆಯೆಂದು ತಪ್ಪಾಗಿ ತಿಳಿಯಬೇಡಿ. ನಾನು ಪಾಶ್ಚಿಮಾತ್ಯ ರಾಷ್ಟ್ರ ದಿಂದ ಅನೇಕ ವಿಚಾರಗಳನ್ನು ರಕ್ತಗತವಾಗಿಸಿ ಕೊಂಡಿ ದ್ದೇನೆ. ಆದರೆ ಇದೆಲ್ಲ ಹಿಂದೂ ಸಂಸ್ಕೃತಿಯಲ್ಲಿ ಈಗಿರು ವಂಥ ದಾರುಣ ವೈಧವ್ಯಸ್ಥಿತಿಗೆ ಯಾವ ಸಮರ್ಥ ನೆಯೂ ಅಲ್ಲ.

ನಾನು ಬಾಲವಿಧವೆಯರನ್ನು ಕುರಿತು ಏನೇನು ಹೇಳಿರು ವೆನೊ ಅದೆಲ್ಲಾ ಬಾಲ ಪತ್ನಿಯರಿಗೂ ಅನ್ವಯಿಸುತ್ತದೆ. ಹದಿನಾರು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಹುಡುಗಿಯರನ್ನು ಮದುವೆಯಾಗುವುದೇ ಇಲ್ಲ ಎಂದು ನಿರ್ಧರಿಸುವಷ್ಟರ ಮಟ್ಟಿಗೆ ನೀವು ನಿಮ್ಮ ಕಾಮವನ್ನು ಹದ್ದು ಬಸ್ತಿನಲ್ಲಿಡಬೇಕು. ನಿಮ್ಮ ಸ್ಥಾನದಲ್ಲಿ ನಾನಿದ್ದಿದ್ದರೆ ಆ ವಯೋಮಿತಿಯನ್ನು 20 ವರ್ಷಕ್ಕೆ ನಿಗದಿಪಡಿಸಿ ಭಾರತದಲ್ಲಿ ಇಪ್ಪತ್ತು ವರ್ಷ ವಯಸ್ಸು ತುಂಬಾ ಜಾಗ್ರತೆ ಕಳೆದು ಹೋಗುತ್ತದೆ.

ಅಪ್ರಾಪ್ತ ಕಾಲದಲ್ಲಿಯೇ ಹೆಣ್ಣಿನ ತಾಯ್ತನದ ಸ್ಥಿತಿಗೆ ನಾವೇ ಕಾರಣರು. ಭಾರತದ ಹವಾಗುಣದಲ್ಲಿ, ಇಪ್ಪತ್ತರ ಪ್ರಾಯದಲ್ಲೂ ಅವಿವಾಹಿತಳಾಗುಳಿದು, ನಿಷ್ಕಳಂಕಳಾಗಿದ್ದು, ಅತ್ಯುಗ್ರವಾದ ಬಿರುಗಾಳಿಯನ್ನು ಇದಿರಿಸಿ ನಿಲ್ಲಬಲ್ಲ ಧೀರ ಹುಡುಗಿಯರನ್ನು ನಾನು ನೋಡಿದ್ದೇನೆ. ಆದ್ದರಿಂದ ತುಂಬಾ ಚಿಕ್ಕ ವಯಸ್ಸಿನ ಪುಟ್ಟ ಬಾಲಕಿಯರನ್ನೆಲ್ಲಾ ಮದುವೆಯಾಗಿ ಸಂಸಾರದಲ್ಲಿ ಮುಳುಗಿಸಿ, ಅವರ ಅಕಾಲ ಪ್ರೌಢಿಮೆಯನ್ನು ನಾವೇ ಸ್ವಾಗತಿಸುವುದು ಬೇಡ.

"ಬ್ರಾಹ್ಮಣರಲ್ಲಿ ಹತ್ತು, ಹನ್ನೆರಡು ವರ್ಷ ವಯಸ್ಸಿನೊಳಗೇ ಹೆಣ್ಣು ಮಕ್ಕಳಿಗೆ ಮದುವೆಯಾಗಿ ಬಿಡುತ್ತದೆಯಾದ್ದರಿಂದ, ಹದಿನಾರು ವರ್ಷದ ಕನ್ಯೆಯರು ಸಿಗುವುದೇ ಇಲ್ಲ" ಎಂದು ಬ್ರಾಹ್ಮಣ ಹುಡುಗರು ಹೇಳು ತ್ತಾರೆ. ಕೇವಲ ಜಾತಿಯ ಕಾರಣದಿಂದಲೇ ಹದಿನಾರು ವರ್ಷಕ್ಕೆ ಮೇಲ್ಪಟ್ಟ ಹುಡುಗಿಯರು ಸಿಗುವುದಿಲ್ಲವಾದರೆ ಬ್ರಾಹ್ಮಣ ಹುಡುಗರೇ, ನಿಮ್ಮ ಜಾತಿಯವರನ್ನೇ ತ್ಯಜಿಸಿ ಬಿಡಿ. ಜಾತಿಯ ಸಂಕೋಲೆಯಿಂದ ಹೊರಬನ್ನಿರಿ. ಬಾಲ್ಯದಲ್ಲೇ ವಿಧವೆಯಾಗಿದ್ದು ಈಗ ಹದಿನಾರರ ಪ್ರಾಯ ದಾಟಿರುವ ಹುಡುಗಿಯರನ್ನು ನಿಮ್ಮ ಸಂಗಾತಿ ಯಾಗಿ ಆರಿಸಿಕೊಳ್ಳಿ ಬ್ರಾಹ್ಮಣ ಜಾತಿಯ ಹುಡುಗಿಯರೇ ಸಿಗಬೇಕೆಂಬುದಿಲ್ಲ. ಅವಳು ಯಾವ ಜಾತಿಯವಳಾ ದರೂ, ಆಗಿರಬಹುದು. ಹನ್ನೆರಡು ವರ್ಷ ವಯಸ್ಸಿ ಗಿಂತ ಕಡಿಮೆ ವಯಸ್ಸಿನ ಪುಟ್ಟ ಬಾಲೆಯನ್ನು ಮದುವೆ ಯಾಗಿ, ಅಂಥ ಅಪ್ರಾಪ್ತ ವಯಸ್ಸಿನ ಹುಡುಗಿಯನ್ನು ನಿಮ್ಮ ಕಾಮಕ್ಕೆ ಉಪಯೋಗಿಸಿಕೊಳ್ಳುವುದು ಅವಳ ಮೇಲೆ ಅತ್ಯಾಚಾರವೆಸಗಿದಂತಾಗುತ್ತದೆ. ಅಂಥ ಅತ್ಯಾಚಾರ ಮಾಡುವುದಕ್ಕಿಂತ ಜಾತಿಯ ಪದ್ಧತಿಗಳಿಂದ ಹೊರಬಂದು ಹದಿನಾರರ ಮೇಲ್ಪಟ್ಟ ವಿಧವೆ ಹುಡುಗಿಯರನ್ನು ವಿವಾಹವಾಗುವುವವರನ್ನು ನಿಮ್ಮ ಹಿಂದೂ ದೇವರು ಕ್ಷಮಿಸುತ್ತಾನೆ.

ನಾನು ಬ್ರಾಹ್ಮಣತ್ವವನ್ನು ಪೂಜಿಸುತ್ತೇನೆ. ಆದರೆ ಅದೇ ಬ್ರಾಹ್ಮಣತ್ವ ಅಸ್ಪೃಶ್ಯತೆ, ಬಾಲ ವೈಧವ್ಯ ಇವುಗಳು ತುಂಬಿಕೊಂಡಿವೆ. ಆದ್ದರಿಂದ ಅದು ದುರ್ನಾತ ಹೊಡೆಯುತ್ತಿದೆ. ಅವೆಲ್ಲಾ ಬ್ರಾಹ್ಮಣತ್ವದ ಅವಲಕ್ಷಣಗಳು; ಮೂಢಾನುಸರಣೆಗಳು. ಅಂಥ ಆಚರಣೆ ಗಳಲ್ಲಿ, ಬ್ರಾಹ್ಮಣತ್ವದ ಮೂಲಭೂತವಾದ ಬ್ರಹ್ಮನ ಜ್ಞಾನವೇ ಇಲ್ಲ, ಅಲ್ಲಿ ಶ್ರುತಿ–ಶಾಸ್ತ್ರಗಳ ನೈಜ ಅನು ಸರಣೆಯೇ ಇಲ್ಲ. ಆ ಬ್ರಾಹ್ಮಣತ್ವದಲ್ಲಿ ಬಲವಾದ ಪಾಶವೀಯತೆಯಿದೆ. ಬ್ರಾಹ್ಮಣ ಜಾತಿ ಇಂದು ಕಠೋರ ಗಡಸುತನಗಳಿಗೆಲ್ಲಾ ಕಾರಣವಾಗಿದೆ.

ಬ್ರಾಹ್ಮಣತ್ವದ ಈ ಪ್ರಮುಖ ದೋಷಗಳೆಲ್ಲಾ ನಿಮ್ಮ ಎದೆಗೆ ನಾಟಬೇಕು. ನಾನು ಮಾತನಾಡುತ್ತಿರು ವಾಗಿನಿಂದಲೂ ಕೇಳುತ್ತಿರುವ ನಿಮ್ಮ ಮುಖಭಾವ ಗಳನ್ನು ದಿಟ್ಟಿಸಿ ನೋಡುತ್ತಿದ್ದೇನೆ. ನನ್ನ ಹೃದಯದ ಮಾತುಗಳನ್ನೆಲ್ಲಾ ನಿಮ್ಮ ಮುಂದೆ ಚೆಲ್ಲುವಾಗ ನಿಮ್ಮ ಮಧ್ಯದಿಂದ ಒಂದೇ ಒಂದು ಸಲ ಹಾಸ್ಯ, ವ್ಯಂಗ್ಯ, ಅಥವಾ ಉದಾಸೀನತೆಯ ನಗು ಕೇಳಿಬಂದರೂ ನನಗೆ

ಅಪಾರ ನೋವುಂಟಾಗುತ್ತದೆ. ನಿಮ್ಮ ಬುದ್ಧಿವಂತಿಕೆಯನ್ನು ಬೇಡಲು ನಾನು ಬಂದಿಲ್ಲ....ಹೃದಯವಂತಿಕೆಯನ್ನು ಬೇಡಲು ಬಂದಿರುವೆ. ನೀವು ರಾಷ್ಟ್ರದ ಭವಿಷ್ಯದ ಸಂಪತ್ತು. ನಿಮ್ಮ ಮುಂದಿನ ಭವಿಷ್ಯತ್ತಿಗೆ. ಅಡಿಗಲ್ಲಾಗಿರಬೇಕಾದ ಅಗತ್ಯಗಳನ್ನು ನನ್ನ ಮಾತುಗಳು ಹೇಳುತ್ತವೆ.

---

## ಸಿನಿಮಾ

# ಖ್ಯಾತ ವಿಮರ್ಶಕಿ ಮೇರಿ ಸೀಟನ್

ಇತ್ತೀಚೆಗಷ್ಟೆ ನಿಧನಳಾದ ಮೇರಿ ಸೀಟನ್ ಖ್ಯಾತ ಸಿನಿಮಾ ವಿಮರ್ಶಕಿ. ವಿಶಿಷ್ಟ ವ್ಯಕ್ತಿತ್ವದ. ಅಸಾದಾರಣ ಶಕ್ತಿಯ ಈಕೆ ಸದಾ ಏನನ್ನಾದರೂ ಹುಡುಕುವ, ಅಳಕ್ಕಿಳಿಯುವ ಸ್ವತಂತ್ರ ಮನೋಭಾವವುಳ್ಳ ಪ್ರವೃತ್ತಿಯವಳು. ಇಂಗ್ಲೆಂಡನ ಮಧ್ಯಮ ವರ್ಗಕ್ಕೆ ಸೇರಿದ ಈಕೆ ಸಮಾಜವಾದಿ ಭಾರತದ ಚಲನಚಿತ್ರ ಹಾಗೂ ರಂಗಭೂಮಿಗೆ ಈಕೆಯ ಕೊಡುಗೆ ಅಪಾರ. ಇಡೀ ಭಾರತದ ಚಲನಚಿತ್ರ ತಯಾರಕರಿಗೆ, ಬರಹಗಾರರಿಗೆ, ವಿದ್ಯಾರ್ಥಿಗಳಿಗೆ ಈಕೆಯ ಸಾವು ಅಪಾರ ನಷ್ಟ ತಂದಿದೆ.

ತನ್ನ ಎಳೆಯ ವಯಸ್ಸಿನಲ್ಲಿ ಪ್ರತಿಭೆಯನ್ನು ಗುರುತಿಸಿಕೊಂಡ ಈಕೆ ರಂಗಭೂಮಿ ಹಾಗೂ ಚಲನಚಿತ್ರ ಮಾಧ್ಯಮಗಳಲ್ಲಿ ತೊಡಗಿಸಿಕೊಂಡಳು. ಚಲನಚಿತ್ರ ಮಾಧ್ಯಮವು ಜನರಿಗಾಗಿ ಕಲೆ, ಹಾಗೂ ಜನತೆಯ ನಡುವೆ ಸಂಪರ್ಕ ಕಲ್ಪಿಸುವ ಒಂದು ಮಾಧ್ಯಮ. ಚಲನ ಚಿತ್ರ ರಸಗ್ರಹಣವು ಯುವ ಮನಸ್ಸಿಗೆ ಒಂದು ನವೋದಯ ಕಿರಣ ಎಂದು ನಂಬಿದ್ದರು, 1952ರಲ್ಲಿ ಚಲನಚಿತ್ರ ಸಂಸ್ಕೃತಿಯನ್ನು ಪ್ರಸಾರಗೊಳಿಸಲು ಭಾರತಕ್ಕೆ ಬಂದ ಈಕೆ, ದೇಶದ ಅನೇಕ ಭಾಗಗಳನ್ನು ಸಂಚರಿಸಿ ಚಲನ ಚಿತ್ರ ಮಾಧ್ಯಮದ ಬಗ್ಗೆ ಹೊಸ ಅರಿವು ಮೂಡಿಸಿದರು. ಅನೇಕ ಚಲನ ಚಿತ್ರ ಸಮಾಜಗಳ ಸಂಘಟನೆಗೆ ಪ್ರಚೋದನೆಯಿತ್ತಳು. ಭಾರತದ ಯಾವುದೇ ಚಿತ್ರ ಸಮಾಜಕ್ಕಾದರೂ, ಯಾವುದೇ ರೀತಿಯ ಪ್ರೋತ್ಸಾಹ ಹಾಗೂ ಸಹಾಯಕ್ಕೆ ಮುಂದಾದಳು. ದೇಶದಾದ್ಯಂತ ಅನೇಕ ವಿಶ್ವವಿದ್ಯಾನಿಲಯಕ್ಕೆ ಹಾಗೂ, ಮತ್ತು ಚಿತ್ರ ಸಮಾಜಗಳಿಗೆ ಭೇಟಿ ಕೊಟ್ಟು ಬ್ರಿಟಿಷ್ ಚಲನಚಿತ್ರ ಸಂಸ್ಥೆಯಿಂದ ತಂದಿದ್ದ ಮೇರು ಕೃತಿಗಳನ್ನು ಪ್ರದರ್ಶಿಸಿ, ಪರಿಚಯಿಸಿದರು.

ದೆಹಲಿಯಲ್ಲಿ ಒಂದು ಚಿತ್ರ ಭಂಡಾರವನ್ನು ಸ್ಥಾಪಿಸಿದ್ದಲ್ಲದೆ, ರಾಷ್ಟ್ರೀಯ ಫಿಲ್ಮ ಆರ್ಕೈವ್, ಹಾಗೂ ಫಿಲ್ಮ್ ಇನ್‌ಸ್ಟಿಟ್ಯೂಟ್‌ಗಳ ಸ್ಥಾಪನೆಗೆ ಶ್ರಮಿಸಿದಳು. 1963ರಲ್ಲಿ ಚಿತ್ರ ಸಮಾಜಗಳ ಸಲಹಗಾರಳಾಗಿ ಸೇವೆ ಸಲ್ಲಿಸಿದಳು. 1967ರಲ್ಲಿ ಪೂನದಲ್ಲಿ ನಡೆದ ಮೊಟ್ಟ ಮೊದಲ ಬೇಸಿಗೆ ಚಲನಚಿತ್ರ ಸಹೃದಯತೆ ಶಿಬಿರಕ್ಕೆ ಆಕೆ ಮುಖ್ಯ ಅತಿಥಿ ಅಧ್ಯಾಪಕಳಾಗಿದ್ದಳು. ಚರ್ಚೆ, ಉಪನ್ಯಾಸ, ಚಿತ್ರ ಪದರ್ಶನ ಇತ್ಯಾದಿ ಕಾರ್ಯಕ್ರಮಗಳಲ್ಲಿ ಅಪಾರ ಉತ್ಸಾಹದಿಂದ ಭಾಗವಹಿಸಿ, ಭಾಗವಹಿಸಿದವರನ್ನು ಮಾತನಾಡಲು ಪ್ರಚೋಧಿಸುತ್ತಿದ್ದಳು. ಭಾರತದ ಚಲನಚಿತ್ರ, ರಂಗಭೂಮಿ, ಸಾಂಸ್ಕೃತಿಕ ಜೀವನದ ಬಗ್ಗೆ ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದ್ದಳು.

ಸಿನಿಮಾದ ಎರಡು ಚೇತನಗಳಾದ ಸತ್ಯಜಿತ್ ರೇ, ಹಾಗೂ ಐಸೈನ್ ಸ್ಟೈನ್‌ರ ತ್ರಿಯಾ ರೇ ಚಿತ್ರ ಪಥೇರ್ ಪಾಂಚಾಲಿ ವಿಶ್ವದ ಗಮನ ಸೆಳೆಯುವಂತೆ ಮಾಡುವಲ್ಲಿ ಈಕೆ ಅವಿರತವಾಗಿ ಪ್ರಯತ್ನಿಸಿದ್ದಳು. ರೇ ಬಗ್ಗೆ ತನಗಿದ್ದ ಗೌರವವನ್ನು ಅವರ ಜೀವನ ಚರಿತ್ರೆ ಬರೆಯುವ ಮುಖಾಂತರ ಪ್ರಕಟಿಸಿದಳು. ಐಸೆನ್ ಸ್ಟೈನ್ ಬಗ್ಗೆ ಬೃಹತ್ ಗ್ರಂಥವನ್ನು ಪ್ರಕಟಿಸಿದಲ್ಲದೆ, ಅವರ ಅಪೂರ್ಣ ಚಿತ್ರವೊಂದನ್ನು ಪೂರ್ಣಗೊಳಿಸಿದಳು,

ಹೊಸ ಪ್ರತಿಭಾವಂತರನ್ನು ಗುರುತಿಸಿ, ಬೆಳಕಿಗೆ ತರುವಲ್ಲಿ ಸೀಟನ್ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. ಭಾರತದಲ್ಲಿನ ತನ್ನ ಅನುಭವಗಳನ್ನು "ಸಿನಿಮಾ ಭಾರತದ ಒಂದು ಶಿಕ್ಷಣ ಶಕ್ತಿ" ಎಂಬ ಪುಸ್ತಕ ಬರೆದು ಪ್ರಕಟಿಸಿದರು.

ಸೀಟನ್‌ಳ ಸೃಜನಶೀಲ ಕಾರ್ಯಗಳು ಕೇವಲ ಭಾರತಕ್ಕೆ ಸೀಮಿತವಾಗಿರಲಿಲ್ಲ. ಅಂತರ ರಾಷ್ಟ್ರೀಯ ಸಿನಿಮಾ ಹಾಗೂ ರಂಗಭೂಮಿಯ ಬಗ್ಗೆ ಅನೇಕ ಬರಹಗಳನ್ನು ಬರೆದು ಪ್ರಕಟಿಸಿದ್ದಳು. ಇಂತಹ ಅದಮ್ಯ ಚೇತನ, ಉತ್ಸಾಹ ಮೂರ್ತಿ, ಅಸಾಧಾರಣ ಪ್ರತಿಭೆಯ ನಿಧನ ನಿಜಕ್ಕೂ ಭಾರತೀಯ ಚಲನಚಿತ್ರ ಹಾಗೂ ರಂಗಭೂಮಿಗೆ ನಷ್ಟವೇ ಸರಿ.

(ಸಂಗ್ರಹ)

# ಸುದ್ದಿ ಸಂಕಲನ

## ವರದಕ್ಷಿಣೆ ಕಾಯಿದೆ ತಿದ್ದುಪಡಿ

ವರದಕ್ಷಿಣೆ ಅಪರಾಧಕ್ಕೆ ಕನಿಷ್ಠ 5 ವರ್ಷ ಜೈಲು ಮತ್ತು 15 ಸಾವಿರ ರೂ. ದಂಡ ವಿಧಿಸಲು ಅವಕಾಶ ನೀಡುವ ವರದಕ್ಷಿಣೆ ನಿಷೇದ ತಿದ್ದುಪಡಿ ಮಸೂದೆ, 1986ಗೆ, ಆಗಸ್ಟ್ 22ರಂದು ರಾಜ್ಯಸಭೆ ಅಂಗೀಕಾರ ನೀಡಿದೆ.

ಭಾರತೀಯ ದಂಡ ಸಂಹಿತ ಅನ್ವಯ "ವರದಕ್ಷಿಣೆ ಸಾವು" ಶಿಕ್ಷಾರ್ಹ ಅಪರಾಧ ಎಂದು ಪ್ರಥಮ ಬಾರಿಗೆ ಈ ಮಸೂದೆ ಮೂಲಕ ಪರಿಗಣಿಸಲಾಗಿದೆ. "ವರದಕ್ಷಿಣೆ ಸಾವು" ವಿವರಿಸಲು ಭಾರತೀಯ ದಂಡ ಸಂಹಿತೆಗೆ 304 (ಬಿ) ವಿಧಿಯನ್ನು ಸೇರಿಸ ಲಾಗಿದೆ. ಭಾರತೀಯ ಸಾಕ್ಷ್ಯ ಕಾನೂನಿನಲ್ಲಿ 113 (ಬಿ) ವಿಧಿಯನ್ನು ಸೇರಿಸಲಾಗಿದೆ.

ಈ ಹೊಸ ಕಾನೂನಿನ ಪ್ರಕಾರ ವರದಕ್ಷಿಣೆ ಪಡೆದವರಿಗೆ, ಅದಕ್ಕೆ ಸಹಾಯ ಮಾಡಿದವರಿಗೆ ಕಠಿನ ಶಿಕ್ಷೆ ನೀಡಲಾಗುವುದಲ್ಲದೆ, ವರದಕ್ಷಿಣೆ ಸಾವಲ್ಲವೆಂದೂ ಸಾಬೀತು ಪಡಿಸುವ ಹೊಣೆ ಪತಿ ಮತ್ತು ಅವನ ಕುಟುಂಬದ್ದಾಗಿರುತ್ತದೆ.

ಯಾವುದೆ ಪತ್ರಿಕೆ ಅಥವಾ ಪ್ರಸಾರ ಮಾಧ್ಯಮಗಳಲ್ಲಿ, ಮಗ ಅಥವಾ ಮಗಳ ಮದುವೆಗಾಗಿ ಆಸ್ತಿಯಲ್ಲಿ ಪಾಲು ಅಥವಾ ಹಣ ನೀಡಿಕೆಯ ಪ್ರಸ್ತಾಪದ ಜಾಹಿರಾತುಗಳನ್ನು ನೀಡುವುದನ್ನು ಈ ಕಾನೂನು ನಿಷೇಧಿಸುತ್ತದೆ. ಇಂತಹ ಜಾಹಿರಾತು ನೀಡುವ ವ್ಯಕ್ತಿ ಪ್ರಕಟಿಸುವ ಮುದ್ರಕ ಅಥವಾ ಪ್ರಕಾಶಕರಿಗೆ 6 ತಿಂಗಳಿಂದ 5 ವರ್ಷಗಳವರೆಗೆ ಜೈಲು ಅಥವಾ 15 ಸಾವಿರ ರೂ. ಗಳವರೆಗೆ ದಂಡ ವಿಧಿಸುವ ಅವಕಾಶ ಕಲ್ಪಿಸಲಾಗಿದೆ.

ರಾಜ್ಯಸರಕಾರಗಳು ಈ ಕಾನೂನನ್ನು ಪರಿಣಾಮಕಾರಿಯಾಗಿ ಬಳಸಬೇಕೆಂದು ಮಸೂದೆ ಮಂಡಿಸಿದ ಮಹಿಳಾ ಮತ್ತು ಶಿಶು ಅಭಿವೃದ್ಧಿ ಖಾತೆ ರಾಜ್ಯ ಸಚಿವೆ ಮಾರ್ಗರೆಟ್ ಆಳ್ವ ಕರೆ ನೀಡಿದ್ದಾರೆ'

## ವರದಕ್ಷಿಣೆ ಅಪರಾಧಗಳ ಹೆಚ್ಚಳ

ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಬೇರೆಲ್ಲಾ ಬಗೆಯ ಅಪರಾಧಗಳು ಇಳಿಮುಖವಾಗಿದ್ದು ಢಕಾಯಿತಿ ಮತ್ತು ವರದಕ್ಷಿಣೆ ಸಂಬಂಧದ ಅಪರಾಧಗಳು ಹೆಚ್ಚಾಗಿವೆ ಎಂದು ರಾಜ್ಯ ಗೃಹಸಚಿವ ಬಿ. ರಾಚಯ್ಯ ಆಗಸ್ಟ ತಿಂಗಳಲ್ಲಿ ನಡೆದ ರಾಜ್ಯ ವಿಧಾನಸಭೆ ಅಧಿವೇಶನದಲ್ಲಿ ತಿಳಿಸಿದ್ದಾರೆ.

## ಮಹಿಳಾ ನ್ಯಾಯಾಧೀಶರು

ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶರಾಗಿ ಮರಯಾ ತೆರೆಸಾ ಪದ್ಮಿನಿ ಜೇಸುದೊರೈ (56) ಅವರನ್ನು ಇತ್ತೀಚೆಗೆ ನೇಮಿಸಲಾಗಿದೆ. ಮದ್ರಾಸ್ ಹೈಕೋರ್ಟ್‌ನ ಪ್ರಥಮ ಮಹಿಳಾ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದ ಅವರು ಈಗ ಮದ್ರಾಸ್ ಹೈಕೋರ್ಟ್‌ನ ಪ್ರಥಮ ಮಹಿಳಾ ನ್ಯಾಯಾಧೀಶರಾದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

## ವಯೋಮಿತಿ

ಕೇಂದ್ರ ಸರಕಾರಿ ಸೇವೆಗೆ ಸೇರಲು ಇರುವ ಗರಿಷ್ಠ ವಯೋ ಮಿತಿಯಲ್ಲಿ ಹತ್ತು ವರ್ಷ ರಿಯಾಯಿತಿಯನ್ನು ವಿಧವೆಯರು ಮತ್ತು ವಿವಾಹ ವಿಚ್ಛೇದನ ಹೊಂದಿದ ಮಹಿಳೆಯರಿಗೆ ನೀಡ ಬೇಕೆಂದು ನಾಲ್ಕನೆ ವೇತನ ಆಯೋಗ ಶಿಫಾರಸು ಮಾಡಿದೆ.

ಸಮಾಜದ ಸದ್ಯದ ಸ್ಥಿತಿಯಲ್ಲಿ ಶೋಷಿತ ವರ್ಗಕ್ಕೆ ಸೇರಿರುವ ಮಹಿಳೆಯರು ವಯಸ್ಸು ಮೀರಿದ ನಂತರ ಪರಿಸ್ಥಿತಿಯ ಒತ್ತಡ ಗಳಿಂದ ನೌಕರಿಗೆ ಸೇರುವ ಸಂದರ್ಭಗಳಿರುತ್ತವೆ ಎಂದು ಅಭಿಪ್ರಾಯ ಪಟ್ಟಿರುವ ಆಯೋಗ, ಈ ನೊಂದ ಮಹಿಳೆಯರು ಸರಕಾರಿ ಸೇವೆಗೆ ಸೇರಬಹುದಾದ ವಯೋಮಿತಿಯನ್ನು 35 ವರ್ಷಕ್ಕೆ ಏರಿಸಬಹು ದೆಂದು ಸೂಚಿಸಿದೆ.

1981ರಲ್ಲಿ ಶೇಕಡ 3.64ರಷ್ಟು ಮಹಿಳೆಯರು ಕೇಂದ್ರ ಸರಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೆ ವಿಶೇಷ ವ್ಯವಸ್ಥೆ ಹಾಗೂ ದೊಡ್ಡ ನಗರಗಳಲ್ಲಿ ಹಾಸ್ಟೆಲ್‌ಗಳನ್ನು ನಿರ್ಮಿಸಬೇಕೆಂದು ಸಲಹೆ ಮಾಡಲಾಗಿದೆ.

## ವೇಶ್ಯೆಯರ ಸಂಘಟನೆ

ಉತ್ತಮ ವೈದ್ಯಕೀಯ ನೆರವು, ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ ಇತ್ಯಾದಿ ವೇಶ್ಯೆಯರ ಕೆಲವಾದರೂ ಸಮಸ್ಯೆಗಳನ್ನು ಪರಿಹರಿಸುವ ಯತ್ನವಾಗಿ ಮುಂಬೈನಲ್ಲಿ ಎರಡು ಸಂಘಟನೆಗಳು ಇತ್ತೀಚೆಗೆ ರೂಪುಗೊಂಡಿವೆ. ಇವು, 300 ವೇಶ್ಯಾಗೃಹ ಮಾಲಿಕರ ಸದಸ್ಯತ್ವ ಹೊಂದಿರುವ ಅಸಹಾಯ ತಿರಸ್ಕೃತ ನಾರಿ ಸಂಘ ಹಾಗೂ 1500 ನೇಪಾಳಿ ಹುಡುಗಿಯರ ಸದಸ್ಯತ್ವ ಹೊಂದಿರುವ ಸಂಯುಕ್ತ ನೇಪಾಳ ಸತ್ಯಶೋಧಕ ಪೀಡಿತ್ ಮಹಿಳಾ ಸಂಘ ಸಮಾಜ ಕಾರ್ಯ ಕರ್ತರಾದ ಡಾ. ಮಹೇಂದ್ರ ತ್ರಿವೇದಿ ಮತ್ತು ಬ್ರಿಜ್ ಮೋಹನ್ ಶರ್ಮ ಅವರು ಈ ಸಂಘಟನೆಗಳ ಸಲಹೆಗಾರರಾಗಿರುತ್ತಾರೆ. ವೇಶ್ಯಾವೃತ್ತಿಗೆ ಲೈಸೆನ್ಸ್ ನೀಡಬೇಕೆಂಬುದು ಈ ಸಂಘಟನೆಗಳ ಪ್ರಮುಖ ಬೇಡಿಕೆ ಬಹಳಷ್ಟು ನೇಪಾಳಿ ಹುಡುಗಿಯರು ಮುಂಬೈಗೆ ಬರಲು ಬಡತನ ಕಾರಣ. ಸದ್ಯದ ಅಂದಾಜಿನ ಪ್ರಕಾರ ಮುಂಬೈ ನಲ್ಲಿ ಸುಮಾರು 30ಸಾವಿರ ನೇಪಾಳಿ ಹುಡುಗಿಯರು ವೇಶ್ಯಾವೃತ್ತಿ ನಡೆಸುತ್ತಿದ್ದಾರೆ. ಅಲ್ಲದೆ ಮುಂಬೈನ ಶೇಕಡ 20 ರಷ್ಟು ವೇಶ್ಯೆಯರು ಅಪ್ರಾಪ್ತ ವಯಸ್ಸಿನ ಬಾಲಕಿಯರೆನ್ನಲಾಗಿದೆ.